ಸಂಪುಟ: ೦೬/ ಸಂಚಿಕೆ: ೨೨೬/ಮಂಗಳವಾರ ದಿನಾಂಕ: ೦೫-೧೧-೨೦೨೪/ ಪುಟ: ೬/ ಬೆಲೆ ೨-೦೦

ಸತ್ಯಕ್ಕೆ ಕಿರಣ ಸುಳ್ಳಿಗೆ ಕಿಡಿ

ಕಛೇರಿ ದೂರವಾಣಿ ಸಂಖ್ಯೆ 0831-3564491

# ಬೆಳಗಿನ ಸೂರ್ಯೋದಯ

ಕನ್ನಡ ಪ್ರಾದೇಶಿಕ ದಿನಪತ್ರಿಕೆ

ಬೆಳಗಾವಿ ■ ಧಾರವಾಡ ■ ಬಾಗಲಕೋಟ ■ ವಿಜಯಪುರ ■ ಗದಗ ■ ಕೊಪ್ಪಳ ■ ಹಾವೇರಿ ■ ಕಾರವಾರ

ಸಂಪಾದಕರು : ಗುರುರಾಜ ಈರಪ್ಪಾ. ಕದಮ, Editor : GURURAJ IRAPPA. KADAM Cell : 9620099959

Volume : 06/ ISSUE : 226 / TUESDAY Date : 05-11-2024/ RNI No. KARKAN/2019/77640/ Postal Reg No. PMG/KA/NK/BM/135/21-24 / POST AT Vantamury Colony Post Office / email : belaginasuryodaya@gmail.com / Page : 6 / Rs. 2.00

## ॥ ಸಪ್ತಋಷಿವಾಣಿ ॥

ಬದುಕಿನಲ್ಲಿ ನಾನು ಚೆನ್ನಾಗಿದ್ದೇನೆ ಎಂದು ನಾವು ಎಲ್ಲರೆದುರಿಗೆ ಹೇಳಬಹುದು. ಆದರೆ ನಾನು ಕಷ್ಟದಲ್ಲಿದ್ದೇನೆ ಎಂದು ಹೇಳಲು ನಮ್ಮ ಹೃದಯಕ್ಕೆ ತುಂಬಾ ಹತ್ತಿರ ಇದ್ದವರೇ ಬೇಕು.

ಧಾರ್ಮಿಕ ಮಾರ್ಗದರ್ಶಕ
ಸಂತೋಷ ಆಚಾರ್ಯ, ಉಡುಪಿ

## ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ: ಸಚಿವ ಎಚ್.ಕೆ.ಪಾಟೀಲ ಭೇಟಿ ಇಂದು

ಬೆಳಗಾವಿ, : ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಸಮಿತಿಯ ಅಧ್ಯಕ್ಷರೂ ಆಗಿರುವ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಇಲಾಖೆಯ ಸಚಿವರಾದ ಎಚ್.ಕೆ.ಪಾಟೀಲ ಅವರು ಮಂಗಳವಾರ(ನ.5) ಬೆಳಗಾವಿಗೆ ಭೇಟಿ ನೀಡಿ, ಶತಮಾನೋತ್ಸವ ಆಚರಣೆ ಕುರಿತು ಸಭೆಯನ್ನು ನಡೆಸಲಿದ್ದಾರೆ.

1924 ರಲ್ಲಿ ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದ ಐತಿಹಾಸಿಕ ಕಾಂಗ್ರೆಸ್ ಅಧಿವೇಶನಕ್ಕೆ ಸಾಕ್ಷಿಯಾದ ಸ್ಥಳಗಳಿಗೆ ಶತಮಾನೋತ್ಸವ ಸಮಿತಿಯ ಅಧ್ಯಕ್ಷರಾದ ಎಚ್.ಕೆ.ಪಾಟೀಲ, ಗೌರವ ಅಧ್ಯಕ್ಷರಾದ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಹಾಗೂ ಸಮಿತಿಯ ರಾಜ್ಯ ಸಂಚಾಲಕರಾದ ವಿಧಾನ ಪರಿಷತ್ ಮಾಜಿ ಸಭಾಪತಿ ಬಿ.ಎಲ್.ಶಂಕರ ಅವರ ಜತೆ ಜಂಟಿಯಾಗಿ ಭೇಟಿ ನೀಡಲಿದ್ದಾರೆ. ಇದಾದ ಬಳಿಕ ಸಂಜೆ 5 ಗಂಟೆಗೆ ಜಿಲ್ಲಾಧಿಕಾರಿಗಳ ಜತೆ ಸಭೆಯನ್ನು ನಡೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಎಚ್ಎಸ್ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಗಡುವು ಮತ್ತೆ ವಿಸ್ತರಣೆ

ಬೆಂಗಳೂರು: 2019ರ ಏಪ್ರಿಲ್ ತಿಂಗಳಿಗೂ ಮೊದಲು ನೋಂದಾಯಿಸಲಾದ ವಾಹನಗಳಿಗೆ ಹೈ-ಸೆಕ್ಯುರಿಟಿ ರಿಜಿಸ್ಟ್ರೇಶನ್ ಪ್ಲೇಟ್‌ಗಳ(ಎಚ್‌ಎಸ್‌ಆರ್‌ಪಿ) ಅಳವಡಿಕೆ ಗಡುವನ್ನು ರಾಜ್ಯ ಸರ್ಕಾರ ಸೋಮವಾರ ಮತ್ತೊಮ್ಮೆ ಗಡುವು ವಿಸ್ತರಣೆ ಮಾಡಿದೆ.

ಬರೋಬ್ಬರಿ ನಾಲ್ಕು ಬಾರಿ ಗಡವು ವಿಸ್ತರಿಸಿದರೂ ಬಹುತೇಕ ವಾಹನ ಮಾಲೀಕರು ಇನ್ನೂ ಎಚ್-ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸಿಕೊಂಡಿಲ್ಲ. ಹೀಗಾಗಿ ರಾಜ್ಯ ಸರ್ಕಾರ ಇಂದು ಮತ್ತೊಮ್ಮೆ ಗಡುವು ವಿಸ್ತರಣೆ ಮಾಡಿದ್ದು, ಈ ತಿಂಗಳು ಕೊನೆಯವರೆಗೆ ಅಂದರೆ ನವೆಂಬರ್ 30ರವರೆಗೆ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆಗೆ ಸಮಯ ನೀಡಿ ಆದೇಶ ಹೊರಡಿಸಿದೆ. ಒಂದು ವೇಳೆ ನವೆಂಬರ್ 30ರೊಳಗೆ ನಂಬರ್ ಪ್ಲೇಟ್ ಬದಲಾವಣೆ ಮಾಡಿಕೊಳ್ಳದಿದ್ದರೆ ಡಿಸೆಂಬರ್ 1ರಿಂದ ದಂಡ ವಿಧಿಸಲು ಸಾರಿಗೆ ಇಲಾಖೆ ತೀರ್ಮಾನಿಸಿದೆ. ದ್ವಿಚಕ್ರ ವಾಹನಗಳು, ಆಟೋ ಮತ್ತು ನಾಲ್ಕು ಚಕ್ರಗಳ ವಾಹನಗಳು ಸೇರಿದಂತೆ ರಾಜ್ಯದ ಎಲ್ಲಾ ವಾಹನಗಳಿಗೂ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸುವುದನ್ನು ಕಡ್ಡಾಗೊಳಿಸಲಾಗಿದೆ.

ವಂಚನೆ ಮತ್ತು ಕಳ್ಳತನದಿಂದ ರಕ್ಷಿಸಲು ಹೆಚ್ಚುವರಿ ಭದ್ರತಾ ಕ್ರಮಗಳನ್ನು ಒಳಗೊಂಡಿರುವ ಎಚ್-ಎಸ್‌ಆರ್‌ಪಿ ನಂಬರ್ ಪ್ಲೇಟ್ ಅನ್ನು ಕಡ್ಡಾಯವಾಗಿ ಅಳವಡಿಸಬೇಕು ಎಂದು ರಾಜ್ಯ ಸರ್ಕಾರ ಆದೇಶಿಸಿದೆ.

# ವಕ್ಫ್ ಆಸ್ತಿ ಕಾಪಾಡುವುದಾಗಿ ಘೋಷಿಸಿದ್ದ ಬಿಜೆಪಿ: ಮುಖ್ಯಮಂತ್ರಿ ವಾಗ್ದಾಳಿ

**ಹುಬ್ಬಳ್ಳಿ:** ವಕ್ಫ್ ಆಸ್ತಿ ಒತ್ತುವರಿ ತೆರವುಗೊಳಿಸುವುದಾಗಿ ಬಿಜೆಪಿ ತನ್ನ ಪ್ರಣಾಳಿಕೆಯಲ್ಲೇ ಘೋಷಿಸಿತ್ತು. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ಒತ್ತುವರಿಯಾಗಿರುವ ಇಂಚಿಂಚು ವಕ್ಫ್ ಆಸ್ತಿಯನ್ನು ಕಾಪಾಡುವುದಾಗಿ ಹೇಳಿದ್ದರು. ಅವರೇ ಹೇಳಿದ್ದ ಮಾತುಗಳಿಗೆ ಈಗ ರಾಜಕೀಯ ಕಾರಣಕ್ಕಾಗಿ ಉಲ್ಟಾ ಹೊಡೆದಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ಹುಬ್ಬಳ್ಳಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬಿಜೆಪಿ ರಾಜಕಾರಣಕ್ಕಾಗಿ ಈ ವಿಚಾರವನ್ನು ಇಟ್ಟುಕೊಂಡು ಹೋರಾಡುತ್ತಿದ್ದಾರೆ. ವಕ್ಫ್ ಆಸ್ತಿ ವಿಚಾರ ನಿನ್ನೆ ಮೊನ್ನೆಯದಲ್ಲ. ಬಿಜೆಪಿ ಸರ್ಕಾರದ ಕಾಲದಲ್ಲೂ ನೋಟಿಸ್ ಕೊಟ್ಟಿದ್ದಾರೆ, ಎಲ್ಲಾ ಕಾಲದಲ್ಲಿಯೂ ನೋಟಿಸ್ ನೀಡಲಾಗಿದೆ ಎಂದು ಜನ-ರಿಗೆ ಅರ್ಥವಾಗಿದೆ ಎಂದು ತಿಳಿಸಿದರು.

ನಾನು ಸಚಿವರಾದ ಎಚ್.ಕೆ ಪಾಟೀಲ್, ಕೃಷ್ಣ ಬೈರೇಗೌಡ ಅವರೊಂದಿಗೆ ಸಭೆ ನಡೆಸಿ ಯಾವುದೇ ನೋಟಿಸ್ ನೀಡಿದ್ದಲ್ಲಿ ಅದನ್ನು ವಾಪಸ್ಸು ಪಡೆಯಬೇಕು ಅಥವಾ ವಿಚಾರಣೆ ಇಲ್ಲದೆಯೇ ಯಾವುದಾದರೂ ಪಹಣಿ ದಾಖಲೆ ಬದಲಾವಣೆಯಾಗಿದ್ದರೆ ಅದನ್ನು ರದ್ದು ಮಾಡಬೇಕು ಹಾಗೂ ಯಾವುದೇ ಕಾರಣಕ್ಕೂ ರೈತರನ್ನು ಒಕ್ಕಲೆಬ್ಬಿಸಬಾರದು ಎಂದು ಸ್ಪಷ್ಟ ನಿರ್ದೇಶನ ನೀಡಿದ್ದಾಗಿದೆ. ಮುಸ್ಲಿಂ , ಹಿಂದು, ಕ್ರಿಶ್ಚಿಯನ್ ಆಗಿರಲಿ, ಒಕ್ಕಲೆಬ್ಬಿಸಬಾರದು ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ ಎಂದರು.

ವಕ್ಫ್ ಆಸ್ತಿ ವಿಚಾರ ನಮಗೆ ಗೊತ್ತಾದ ತಕ್ಷಣವೇ ನೋಟಿಸ್ ಹಿಂಪಡೆಯಲಾಗಿದೆ. ಬಿಜೆಪಿ ಅವಧಿಯಲ್ಲಿ 216 ಪ್ರಕರಣಗಳಲ್ಲಿ ನೋಟಿಸ್ ಕೊಟ್ಟಿದ್ದರು. ಯಡಿಯೂರಪ್ಪ, ಸದಾನಂದ ಗೌಡ, ಜಗದೀಶ್ ಶೆಟ್ಟರ್, ಎಚ್.ಡಿ ಕುಮಾಸ್ವಾಮಿ ಇದ್ದಾಗ ಏಕೆ ನೋಟಿಸ್ ಕೊಟ್ಟಿದ್ದಾರೆ. ಬಿಜೆಪಿಯ ಈ ಡಬ್ಬಲ್ ಗೇಮ್ ವಿಚಾರವನ್ನು ಜನರಿಗೆ ನಾವು ತಲುಪಿಸುತ್ತಿದ್ದೇವೆ ಎಂದು ತಿಳಿಸಿದರು.



16ನೇ ಹಣಕಾಸು ಆಯೋಗದವರು ಬೆಂಗಳೂರಿಗೆ ಭೇಟಿ ನೀಡಿದಾಗ 15ನೇ ಹಣಕಾಸು ಆಯೋಗದಿಂದ ಕರ್ನಾಟಕಕ್ಕೆ ಅನ್ಯಾಯವಾಗಿರುವ ಬಗ್ಗೆ ಗಮನ ಸೆಳೆದಿದ್ದೇವೆ. ಸುಮಾರು 4.50 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಮೊತ್ತವನ್ನು ವರ್ಷಕ್ಕೆ ತೆರಿಗೆ ನೀಡುತ್ತಿದ್ದೇವೆ. ಅದರಲ್ಲಿ ನಮಗೆ ವಾಪಸ್ಸು ಬರುವುದು 55 ರಿಂದ 60 ಸಾವಿರ ಕೋಟಿ ಮಾತ್ರ. ಇದು ನ್ಯಾಯವೇ ಈ ಬಗ್ಗೆ ನಾವು ನ್ಯಾಯಕ್ಕಾಗಿ ಹೋರಾಡುತ್ತಿದ್ದೇವೆ. ಬಿಜೆಪಿಯ ಪ್ರಹ್ಲಾದ್ ಜೋಶಿ, ಬಸವರಾಜ ಬೊಮ್ಮಾಯಿ, ಜಗದೀಶ್ ಶೆಟ್ಟರ್ ಅವರು ಈ ಬಗ್ಗೆ ಮಾತನಾಡಿದ್ದಾರೆಯೇ? ಎಂದು ಪ್ರಶ್ನಿಸಿದರು.

ಕರ್ನಾಟಕಕ್ಕೆ ಅನ್ಯಾಯವಾಗಿದೆ ಎಂದರೆ ಅದು ರಾಜಕೀಯ ಎಂದರು, ಇದಕ್ಕೆ ಏನು ಹೇಳಬೇಕು ನ್ಯಾಯಾಲಯಕ್ಕೆ ಹೋದರೆ ನ್ಯಾಯ ಸಿಗುತ್ತದೆ ಎಂದು ಭಾವಿಸಿಲ್ಲ, ಏಕೆಂದರೆ 5 ವರ್ಷಕ್ಕೊಮ್ಮೆ ಸಂವಿಧಾನದ ಪ್ರಕಾರ ಹಣಕಾಸಿನ ಆಯೋಗ ರಚನೆಯಾಗುತ್ತದೆ. ಅವರ ಶಿಫಾರಸ್ಸಿನ ಮೇಲೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಹೋಗಬೇಕಾದ ತೆರಿಗೆ ಬಗ್ಗೆ ನಿರ್ಧಾರವಾಗುತ್ತದೆ. 15ನೇ ಹಣಕಾಸು ಆಯೋಗದವರು ಕೆಲವು ಶಿಫಾರಸ್ಸು ಮಾಡಿದ್ದಾರೆ. 5,495 ಕೋಟಿ ರೂಪಾಯಿಗಳನ್ನು ವಿಶೇಷ ಅನುದಾನ ನೀಡಬೇಕೆಂದು ಹೇಳಿದ್ದರು. ಪೇರಿಫೆರಲ್ ರಿಂಗ್ ರೋಡ್ ಹಾಗೂ ಕೆರೆಗಳ ಅಭಿವೃದ್ಧಿಗೆ ತಲಾ 3000 ಕೋಟಿ ರೂಪಾಯಿ ನೀಡಲು ಶಿಫಾರಸ್ಸು ಮಾಡಿದ್ದರು. ಒಟ್ಟು 11,495 ಕೋಟಿಗಳನ್ನು ಕೊಡಬೇಕಿತ್ತು, ಆದರೆ ಕೊಟ್ಟಿಲ್ಲ. ಪ್ರಹ್ಲಾದ ಜೋಶಿಯವರು ಇದನ್ನು ಕೇಂದ್ರದಿಂದ ಕೇಳಬೇಕಲ್ಲವೇ ಎಂದು ವಾಗ್ದಾಳಿ ನಡೆಸಿದರು.

11,495 ಕೋಟಿ ಕೊಟ್ಟಿದ್ದಾರೆಯೇ ಕೊಟ್ಟಿದ್ದರೆ ನಾನು ರಾಜಕೀಯ ಬಿಟ್ಟುಬಿಡುವೆ. ಈ ಸವಾಲು ಸ್ವೀಕರಿಸಿ ಪ್ರಹ್ಲಾದ ಜೋಶಿ ರಾಜಕೀಯ ಬಿಡುತ್ತಾರೆಯೇ? ಬಿಜೆಪಿಯವರು ಗ್ಯಾರಂಟಿಗೆ ವಿರುದ್ಧವಾಗಿದ್ದಾರೆ. ಗ್ಯಾರಂಟಿ ಯೋಜನೆಗಳ ಮೂಲಕ ಎಲ್ಲಾ ಜಾತಿ ಧರ್ಮದವರಿಗೆ ಆರ್ಥಿಕ ಹಾಗೂ ಸಾಮಾಜಿಕ ಶಕ್ತಿ ತುಂಬುತ್ತಿದ್ದೇವೆ. ಅವರು ಮುಖ್ಯವಾಹಿನಿಗೆ ಬರಬೇಕೆಂದು ಈ ಕಾರ್ಯ ಮಾಡುತ್ತಿದ್ದೇವೆ. ಬಿಜೆಪಿಯವರಿಗೆ ಸಮಾನತೆ ಬರಬಾರದು. ಬಡವರು ಇರಬೇಕು. ಅದಕ್ಕೆ ಅವರನ್ನು ಬಡವರ ವಿರೋಧಿಗಳು ಎಂದು ಕರೆಯುವುದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಕ್ತಿ ಇಲ್ಲದಿದ್ದರೆ ತಾನೇ ದುರುಪಯೋಗ ಮಾಡಿಕೊಳ್ಳಲು ಸಾಧ್ಯವಾಗುವುದು. ಆರ್ಥಿಕ, ಸಾಮಾಜಿ-ಕ ಶಕ್ತಿ ಬಡವರಿಗೆ ಬರಬಾರದೆಂಬ ತತ್ವದಲ್ಲಿ ಬಿಜೆಪಿಗೆ ನಂಬಿಕೆ ಇದೆ. ಬಿಜೆಪಿ ಪಕ್ಷ 600 ಭರವಸೆಗಳನ್ನು 2018 ರಲ್ಲಿ ನೀಡಿತ್ತು. ಅವುಗಳಲ್ಲಿ ಎಷ್ಟು ಈಡೇರಿಸಿದ್ದಾರೆ? ನಾವು 165 ಭರವಸೆ ಕೊಟ್ಟು 158 ಈಡೇರಿಸಿದ್ದಾಗಿ ಲೆಕ್ಕ ಕೊಡುತ್ತಿದ್ದೇವೆ. ಅವರು ಎಷ್ಟು ಭರವಸೆ ನೀಡಿ ಎಷ್ಟನ್ನು ಈಡೇರಿಸಿದ್ದಾರೆ ಎನ್ನುವ ಲೆಕ್ಕ ಕೊಡುತ್ತಾರೆಯೇ? ವಕ್ಫ್ ವಿಚಾರವಾಗಿ ಬಿಜೆಪಿ ರಾಜ್ಯಾದ್ಯಂತ ಪ್ರತಿಭಟನೆ ಮಾಡುತ್ತಿದೆ. ಅವರು ಯಾವಾಗಲೂ ನೈಜ ವಿಷಯಗಳನ್ನು ಬಿಟ್ಟು ಸುಳ್ಳು ಆರೋಪಗಳನ್ನು ಮಾಡುವುದು, ರಾಜಕಾರಣಕ್ಕಾಗಿ ಪ್ರತಿಭಟನೆ ಮಾಡುವುದು ಇದನ್ನು ಮಾತ್ರ ಮಾಡುತ್ತಾರೆ

ಮಾಜಿ ಸಂಸದ ಪ್ರತಾಪ್ ಸಿಂಹ ಒಬ್ಬ ಮಹಾನ್ ಕೋಮುವಾದಿ. ಕೋಮುವಾದಿಗಳಿಂದ ಇನ್ನೇನು ನಿರೀಕ್ಷೆ ಮಾಡಲಾಗುತ್ತದೆ ಅವರಿಗೆ ಸಂವಿಧಾನ, ಪ್ರಜಾಪ್ರಭುತ್ವದ ಬಗ್ಗೆ ಗೌರವವಿಲ್ಲ. ಕೋಮುವಾದ ಮಾಡುವುದೇ ಅವರ ಕಸುಬು. ಸಮಾಜವನ್ನು ಜಾತಿ, ಧರ್ಮದ ಹೆಸರಿನಲ್ಲಿ ಒಡೆಯುವುದೇ ಅವರ ರಾಜಕಾರಣ. ಕೋಮುವಾದದಲ್ಲಿ ತೊಡಗಿ ರಾಜಕೀಯದಲ್ಲಿ ಬದುಕಲು ಹಾಗೂ ಮತ ಪಡೆಯಲು ಪ್ರಯತ್ನ ಮಾಡುತ್ತಾರೆ ಎಂದು ತಿರುಗೇಟು ನೀಡಿದರು. ಗ್ಯಾರಂಟಿ ಯೋಜನೆಗಳು ಅಭಿವೃದ್ಧಿಯಲ್ಲವೇ ಹಿಂದೆ ಮುಖ್ಯಮಂತ್ರಿ ಆಗಿದ್ದಾಗ 165 ಭರವಸೆ ಕೊಟ್ಟು 158 ಭರವಸೆಗಳನ್ನು ಈಡೇ-ರಿಸಿದೆವು.. ಅವು ಅಭಿವೃದ್ಧಿಯಲ್ಲವೆ? 3 ಲಕ್ಷದ 71 ಸಾವಿರ ಕೋಟಿ ರೂಪಾಯಿಗಳಲ್ಲಿ 52 ಸಾವಿರ ಕೋಟಿ ಗ್ಯಾರಂಟಿಗಳಿಗೆ ವೆಚ್ಚ ಮಾಡುತ್ತಿದ್ದೇವೆ. ಸುಮಾರು 60 ಸಾವಿರ ಕೋಟಿ ಅಭಿವೃದ್ಧಿಗೆ ವೆಚ್ಚ ಮಾಡುತ್ತಿದ್ದೇವೆ. ನೀರಾವರಿ, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ರಸ್ತೆ, ಸೇತುವೆ, ನಿರ್ಮಾಣಕ್ಕಾಗಿ ವೆಚ್ಚವಾಗುತ್ತಿದೆ. ಇವೆಲ್ಲ ಅಭಿವೃದ್ಧಿಯಲ್ಲವೇ ಎಂದು ಪ್ರಶ್ನಿಸಿದರು.

## ಜನರ ಬೇಡಿಕೆ ಈಡೇರಿಸುವದು ಜನಪ್ರತಿನಿಧಿಗಳ ಕರ್ತವ್ಯ-ಶಾಸಕ ಮಹಾಂತೇಶ ಕೌಜಲಗಿ



ಬೈಲಹೊಂಗಲ- ಜನರ ಕುಂದುಕೊರತೆ ಆಲಿಸಿ ಅವರ ಬೇಕು ಬೇಡಗಳನ್ನು ಈಡೇರಿಸುವುದಕ್ಕಾಗಿಯೇ ಜನ ಪ್ರತಿನಿಧಿಗಳಿರುವುದು. ಜನರ ಸೇವೆ ಮಾಡುವುದರಲ್ಲಿ ಸಾರ್ಥಕತೆ ಕಾಣುವವನೆ ನಿಜವಾದ ಜನ ನಾಯಕ ಎಂದು ಶಾಸಕ ಮಹಾಂತೇಶ ಕೌಜಲಗಿ ಹೇಳಿದರು.

ತಾಲೂಕಿನ ದೊಡವಾಡ ಗ್ರಾಮದ ಶಾಂತಿನಗರದಲ್ಲಿ 2 ಕೋಟಿ ರೂ ವೆಚ್ಚದಲ್ಲಿ ನಿರ್ಮಾಣವಾಗಿರುವ 6 ಹಾಸಿಗೆಗಳ ಸುಸಜ್ಜಿತ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ಉದ್ಘಾಟನೆ ಹಾಗೂ ಗ್ರಾಮದ ವಿವಿಧೆಡೆಯ ಅಂಗನವಾಡಿ ಕೇಂದ್ರಗಳ ನೂತನ ಕಟ್ಟಡ ಕಾಮಗಾರಿಗೆ ಬುಧವಾರ ಭೂಮಿ ಪೂಜೆ ನೆರವೇರಿಸಿ ಬಳಿಕ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜನರ ಮತ್ತು ಸಮಾಜದ ಅನುಕೂಲಕ್ಕಾಗಿ ಸರಕಾರ ಸಾಕಷ್ಟು ಹಣ ಖರ್ಚು ಮಾಡಿ ಆಸ್ಪತ್ರೆ ಶಾಲೆ ಕಾಲೇಜು ಸಮುದಾಯ ಭವನಗಳನ್ನು ನಿರ್ಮಿಸಿಕೊಡುತ್ತದೆ ಅವುಗಳನ್ನು ಸ್ವಂತ ಆಸ್ತಿಯಂತೆ ಸಂರಕ್ಷಿಸಿ ಉತ್ತಮ ಸ್ಥಿತಿಯಲ್ಲಿ ಕಾಪಾಡಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯವಾಗಬೇಕು ಎಂದು ಹೇಳಿದರು. ತಾಲೂಕು ಆರೋಗ್ಯಾಧಿಕಾರಿ ಡಾ.ಎಸ್.ಎಸ್.ಸಿದ್ದನ್ನವರ, ಸಿಡಿಪಿಓ ಅರುಣಕುಮಾರ ಮಾತನಾಡಿ ಜನರ ಕಲ್ಯಾಣಕ್ಕಾಗಿ ಸರಕಾರ ಜಾ-ರಿಗೊಳಿಸುವ ಎಲ್ಲ ಯೋಜನೆಗಳನ್ನು ಸಾರ್ವಜನಿಕರು ಸದುಯೋಗಪಡಿಸಿ ಕೊಳ್ಳಬೇಕೆಂದು ಹೇಳಿದರು. ಸ್ಥಳೀಯ ಹಿರೇಮಠದ ಶ್ರೀ ಜಡಿಸಿದ್ದೇಶ್ವರ ಸ್ವಾಮಿಜಿ ಸಾನಿಧ್ಯ ವಹಿಸಿದ್ದರು. ಡಾ. ಸಂತೋಷ ಬಾಬು ಗಡಾದ, ಡಾ.ಶೆಫಾಲಿ ಚೌಹಾನ, ಡಾ.ಭಾಗ್ಯಶ್ರೀ ಗದಗ, ಪಿಡಿಓ ಎಚ್.ವಿಶ್ವನಾಥ, ಪ್ರಮುಖರಾದ ಸಂಕಪ್ಪ ಕೊರಕೊಪ್ಪ, ಈರಪ್ಪ ಹತ್ತಿಕಟಗಿ, ಬಾಳೇಶ ಅಲಸಂಧಿ, ಬಾಬು ಮುರಗೋಡ, ಶಿವಶಂಕರ ಅರಳಿಮರದ, ಸಿದ್ದಪ್ಪ ಕರಿಗಾರ, ಬಸವರಾಜ ಅಂದಾನಶೆಟ್ಟಿ, ರಾಘವರೆಡ್ಡಿ ಸೇರಿದಂತೆ ಶಾಸಕರ ಬೆಂಬಲಿಗರು, ಗ್ರಾಮಸ್ಥರು, ಆರತೋಗ್ಯ ಇಲಾಖೆ ಸಿಬ್ಬಂದಿ ಮತ್ತು ಅಂಗನವಾಡಿ ಆಶಾ

## ಪಿಎಂಜಿಎಸ್ ವೈ ರಸ್ತೆ ಪರಿಶೀಲಿಸಿದ ಜಿಪಂ ಸಿಇಒ ರಾಹುಲ್ ಶಿಂಧೆ



**ಬೆಳಗಾವಿ :** ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ (ಪಿಎಂಜಿಎಸ್ ವೈ) ನಿರ್ಮಿಸಲಾಗುತ್ತಿರುವ ರಸ್ತೆಗೆ ಅಡೆತಡೆ ಮಾಡದೇ ಸ್ಥಳೀಯವಾಗಿ ರೈತರು ಸಮಸ್ಯೆ ಬಗೆಹರಿಸಿಕೊಳ್ಳಬೇಕು ಎಂದು ಜಿಪಂ ಸಿಇಒ ರಾಹುಲ್ ಶಿಂಧೆ ಅವರು ಸಲಹೆ ನೀಡಿದರು.

ಹುಕ್ಕೇರಿ ತಾಲೂಕಿನ ಉ.ಖಾನಾಪುರ ಗ್ರಾಮಕ್ಕೆ ಸೋಮವಾರ ಭೇಟಿ ನೀಡಿದ ಅವರು ರಸ್ತೆ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿದ ರೈತರೊಂದಿಗೆ ಸ್ಥಳ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ಪಿಎಂಜಿಎಸ್ ವೈ ಯೋಜನೆಯಡಿ ರಸ್ತೆ ನಿರ್ಮಾಣಕ್ಕೆ ಎಲ್ಲ ರೈತರು ಸಹಕಾರ ನೀಡಬೇಕು. ಅಂದಾಗ ಮಾತ್ರ ಉತ್ತಮ ರಸ್ತೆ ನಿರ್ಮಿಸಲು ಸಾಧ್ಯ. ಜತೆಗೆ ಎಲ್ಲ ರೈತರು ತಮ್ಮಲ್ಲಿ ಸಮಸ್ಯೆ ಬಗೆಹ-ರಿಸಿಕೊಂಡು ರಸ್ತೆ ನಿರ್ಮಾಣಕ್ಕೆ ಸಹಿಯೊಂದಿಗೆ ಪತ್ರ ನೀಡುವಂತೆ ತಿಳಿಸಿದರು. ಬಳಿಕ ಉ.ಖಾನಾಪುರ ಗ್ರಾಮದಲ್ಲಿ ನಿರ್ಮಿಸಲಾದ ಡಿಜಿಟಲ್ ಗ್ರಂಥ-ಾಲಯಕ್ಕೆ ಭೇಟಿ ನೀಡಿದ ಜಿಪಂ ಸಿಇಒ ರಾಹುಲ್ ಶಿಂಧೆ ಅವರು ಅಲ್ಲಿನ ವ್ಯವಸ್ಥೆ ನೋಡಿ ಸಂತಸ ವ್ಯಕ್ತಪಡಿಸಿದರು. ಮಕ್ಕಳ ಸ್ಪರ್ಧಾತ್ಮಕ ಪರೀಕ್ಷೆಗೆ ಒತ್ತು ನೀಡುವ ನಿಟ್ಟಿನಲ್ಲಿ ಇನ್ನಷ್ಟು ಪುಸಕ್ತ ಒದಗಿಸುವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ಪಿಎಂಜಿಎಸ್ ವೈ ಇ ಇ ಸುಧಾರಣಿ, ತಾಪಂ ಇಒ ಟಿ.ಆರ್. ಮಲ್ಲಾಡದ, ಎಇಇ ಶಶಿಕಾಂತ ವಂದಾಳೆ, ತಾಪಂ ಸಹಾಯಕ ನಿರ್ದೇಶಕ ಲಕ್ಷ್ಮೀನಾರಾಯಣ ಪಿಡಿಒ ವಸಂತ ಬಡಿಗೇರ ಮೊದಲಾದವರು ಉಪಸ್ಥಿತರಿದರು.

## ವಕ್ಫ ಕಾಯ್ದೆ ದುರ್ಬಳಕೆ ಖಂಡಿಸಿ- ತಹಶೀಲ್ದಾರರಿಗೆ ಮನವಿ ಸಲ್ಲಿಕೆ

**ಬೈಲಹೊಂಗಲ:** ವಕ್ಫ ಕಾಯ್ದೆ ದುರ್ಬಳಕೆ ಖಂಡಿಸಿ ಭಾರತೀಯ ಜನತಾ ಪಾರ್ಟಿ ಬೈಲಹೊಂಗಲ ಮಂಡಲದ ವತಿಯಿಂದ ಪಟ್ಟಣದ ಸಂಗೊಳ್ಳಿ ರಾಯಣ್ಣನ ವೃತ್ತದಿಂದ ತಹಶೀಲ್ದಾರ್ ಕಚೇರಿಯವರೆಗೆ ಬೃಹತ್ ಪ್ರತಿಭಟನೆ ಮೆರವಣಿಗೆ ನಡೆಸಿ ತಹಶೀಲ್ದಾರ ಅವರಿಗೆ ಮನವಿ ಸಲ್ಲಿಸಿದರು.

ರಾಜ್ಯ ಮಾಧ್ಯಮ ಸಮಿತಿ ಸದಸ್ಯ ಎಫ್ ಎಸ್ ಸಿದ್ದನಗೌಡ್ರ ಮಾತನಾಡಿ, ಕರ್ನಾಟಕದಲ್ಲಿ ವಕ್ಫ ಕಾಯ್ದೆಯ ದುರ್ಬಳಕೆಯ ಕಾರಣಕ್ಕಾಗಿ ರೈತರು ಮಠಮಾನ್ಯಗಳು, ಹಿಂದೂ ದೇವಾಲಯಗಳು ಎಲ್ಲರೂ ಸೇರಿದಂತೆ ಆತಂಕದಲ್ಲಿದ್ದಾರೆ. ಹಿಂದೆ ಕಾಂಗ್ರೆಸ್ ನವರು ರೂಪಿಸಿರುವ ವಕ್ಫ ಕಾಯ್ದೆ ಮುಸ್ಲಿಂ ತುಷ್ಟಿಕರಣಕ್ಕಾಗಿ ಮತಗಳಿಕೆಯ ಆಸೆಯೊಂದಿಗೆ ರಚಿಸಿರುವ ಕಾಯ್ದೆಯಾಗಿದೆ. ಈ ಕಾಯ್ದೆಯಲ್ಲಿರುವ ಅಂಶಗಳ ಆಧಾರದ ಮೇಲೆ ಕರ್ನಾಟಕ ಸರ್ಕಾರದ ವಕ್ಫ ಬೋರ್ಡ್ ಕರ್ನಾಟಕ ಸರ್ಕಾರದ ಭಾಗವಾಗಿದ್ದರೂ, ಕರ್ನಾಟಕ ಸರ್ಕಾರದ ಹಿಡಿತದಲ್ಲಿ ಎಷ್ಟರಮಟ್ಟಿಗೆ




ಇದೆ ಎನ್ನುವ ಪ್ರಶ್ನೆ ಮೂಡಿಸಿದೆ. ಕರ್ನಾಟಕದ ಅಲ್ಪಸಂಖ್ಯಾತರ ಹಾಗೂ ವಕ್ಫ ಸಚಿವರಾದ ಜಮೀರ್ ಅಹ್ಮದ್ ಖಾನ್ ರವರು ರಾಜ್ಯದ ಎಲ್ಲ ಜಿಲ್ಲೆಗಳಿಗೆ ಪ್ರವಾಸ ಮಾಡಿ ವಕ್ಫ ಪ್ರಗತಿ ಪರಿಶೀಲನೆ ಹಾಗೂ ವಕ್ಫ ಅದಾಲತ್ ಗಳನ್ನು ನಡೆಸಿ ಕರ್ನಾಟಕ ಸರ್ಕಾರದ 1974ರ ಗೆಜೆಟ್ ಆಗಿರೋ ಪ್ರಕಾರ ರೈತರ ಕೃಷಿ ಜಮೀನುಗಳನ್ನು, ಮಠ-ಮಂದಿರಗಳ ಆಸ್ತಿಗಳನ್ನೂ ಸೇರಿದಂತೆ ಬಹುದೊಡ್ಡ ಪ್ರಮಾಣದ ಆಸ್ತಿಗಳನ್ನು ವಕ್ಫ್ ಹೆಸರಿನಲ್ಲಿ ತಕ್ಷಣ ಕಂದಾಯ ದಾಖಲೆಗಳಲ್ಲಿ ಇಂದಿಕರಿಸಿಕೊಳ್ಳುವಂತೆ ಆಯಾ ಜಿಲ್ಲಾಧಿಕಾ-ರಿಗಳಿಗೆ ಸೂಚನೆ ನೀಡಿದ್ದಾರೆ.

1974ರ ಸರ್ಕಾರದ ಗೆಜೆಟ್ ರಾಜ್ಯದಲ್ಲಿ ಉಂಟಾಗಿರುವ ಈ ಎಲ್ಲ ಸಮಸ್ಯೆಗಳಿಗೆ ಮೂಲವಾಗಿದೆ. 50 ವರ್ಷದವರೆಗೂ ಇಂದ್ರಿಕರಣ ಮಾಡದ ಇಲಾಖೆಗೆ ಈ ತಕ್ಷಣ ಇಂದಿಕರಿಸಿಕೊಳ್ಳುವ ಹಿಂದಿನ ಉದ್ದೇಶ-ಷಡ್ಯಂತ್ರ ಹುನ್ನಾರವಾದರೂ ಏನು ? ಎಂದರು.

ಉದ್ಯಮಿ ವಿಜಯ ಮೆಟಗುಡ್ಡ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ಈಗಾಗಲೇ ವಕ್ಫ ಕಾಯ್ದೆಯ ಕರಾಳತೆ ಅರಿತು ಹೊಸ ವಕ್ಫ ಕಾಯ್ದೆ ರಚಿಸುವ ಕ್ರಮಕ್ಕೆ ಮುಂದಾಗಿ, ಕರಡು ಕಾಯ್ದೆಯನ್ನು ಸದನದಲ್ಲಿ ಮಂಡಿಸಿದ್ದಾರೆ. ಆ ಕಾಯ್ದೆಯನ್ನು ಇನ್ನೂ ಪರಿಣಾಮಕಾರಿಯಾಗಿ ಜಾ-ರಿಗೊಳಿಸುವ ದೃಷ್ಟಿಯಿಂದ ಸಂಸತ್ತಿನ ಸಮಿತಿಗೆ ಒಪ್ಪಿಸಲಾಗಿದೆ. ಬಹುತೇಕ ಮುಂದಿನ ಸಂಸತ್ ಅಧಿವೇಶನದಲ್ಲಿ ಮಂಜೂರಾಗಬಹುದು ಎನ್ನುವ ಆತಂಕದೊಂದಿಗೆ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ರವರ ಸೂಚನೆ ಮೇರೆಗೆ ಜಮೀರ್ ಅಹ್ಮದ್ ಖಾನ್ ಅವರು ಎಲ್ಲ ಜಿಲ್ಲೆಗಳಿಗೂ ಹೋಗಿ, ಅಧಿಕಾರಿಗಳ ಮೇಲೆ ಒತ್ತಡ ನಿರ್ಮಾಣ ಮಾಡಿ ರೈತರ ಜಮೀನುಗಳನ್ನು, ಮಠ ಮಂದಿರಗಳನ್ನು ಕಂದಾಯ ದಾಖಲೆಗಳಲ್ಲಿ ವಕ್ಫ ಆಸ್ತಿಯಾಗಿ ದಾಖಲೆಯನ್ನು ಸೃಷ್ಟಿಸುವ ಹುನ್ನಾರ ಮಾಡಿದ್ದಾರೆ. ಇದರ ಪರಿಣಾಮವಾಗಿ ಪ್ರತಿಯೊಬ್ಬ ರೈತರು

## ಅಲ್ಲಮಪ್ರಭು ನೂತನ ಮಂದಿರ ಲೋಕರ್ಪಣೆ ಕಾರ್ಯಕ್ರಮ

## ಶೇಗುಣಸಿ ಗ್ರಾಮಸ್ಥರಿಂದ ಶೇಂಗಾ ಉಂಡಿ ಚಿಮ್ಮಡ ಗ್ರಾಮಸ್ಥರಿಂದ ಕರಗಡಬು ವಿತರಣೆ



**ತೇರದಾಳ-ತೇರದಾಳ** ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ನೂತನ ಮಂದಿರ ಲೋಕಾರ್ಪಣೆ ನಿಮಿತ್ತ ಅ.14ರಿಂದ ನಿರಂತರವಾಗಿ ನಡೆದಿರುವ ಅನ್ನಪ್ರಸಾದಕ್ಕೆ ಬೆಳಗಾವಿ ಜಿಲ್ಲೆ ಶೇಗುಣಸಿ ಗ್ರಾಮಸ್ಥರು ಶೇಂಗಾ ಉಂಡಿ ಹಾಗೂ ಚಿಮ್ಮಡ ಗ್ರಾಮದ ಸಾವಿರಾರು ಮಹಿಳೆಯರು ಕರಗಡಬು ಬುಟ್ಟಿಗಳನ್ನು ಹೊತ್ತುಕೊಂಡು ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ತೆರಳಿ ವಿತರಿಸಿದರು.

ಕಾರ್ಯಕ್ರಮದಲ್ಲಿ ಬಸವ ಪುರಾಣ ಪ್ರವಚನ ಹೇಳುತ್ತಿರುವ ಶೇಗುಣಸಿ ಗ್ರಾಮದ ಡಾ. ಮಹಾಂತಪ್ರಭು ಶ್ರೀ ಹಾಗೂ ಕಾರ್ಯಕ್ರಮದ ನೇತೃತ್ವ ವಹಿಸಿರುವ ಚಿಮ್ಮಡ ಪ್ರಭು ಶ್ರೀಗಳು ಕೂಡ ತಮ್ಮ ತಮ್ಮ ಗ್ರಾಮಗಳಿಂದ ಭಕ್ತಿಯ ಸೇವೆ ಸಲ್ಲಿಸಬೇಕೆಂಬ ಸದುದ್ದೇಶದೊಂದಿಗೆ ನೀಡಿದ ಸೂಚನೆಯನ್ನು ಉಭಯ ಗ್ರಾಮಸ್ಥರು ಶ್ರದ್ಧೆ ಭಕ್ತಿಯಿಂದ ನಡೆದುಕೊಂಡರು.

ಶೇಗುಣಸಿ ಗ್ರಾಮಸ್ಥರು ಗುರುದೇವ ಬ್ರಹ್ಮಾನಂದ ಆಶ್ರಮದಿಂದ ಮೆರವಣಿಗೆ ನಡೆಸಿದರೆ ಚಿಮ್ಮಡ ಗ್ರಾಮಸ್ಥರು ಬಸ್ ನಿಲ್ದಾಣ ಬಳಿಯ ಮಹಾತ್ಮ ಗಾಂಧಿ ಕ್ರೀಡಾಂಗಣದಿಂದ ವಾದ್ಯಮೇಳಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ದೇವಸ್ಥಾನ ತಲುಪಿದರು. ಚಿಮ್ಮಡದ ಗ್ರಾಮಸ್ಥರು ಸುಮಾರು 70ಕ್ಕೂ ಅಧಿಕ ಟ್ರ್ಯಾಕ್ಟರ್‌ಗಳಲ್ಲಿ ಆಗಮಿಸಿದ್ದು ವಿಶೇಷವಾಗಿತ್ತು. ಅದರಂತೆ ಶೇಗುಣಸಿ ಗ್ರಾಮಸ್ಥರು ಬಸ್‌ಗಳಲ್ಲಿ ಆಗಮಿಸಿದ್ದರು. ಮೆರವಣಿಗೆ ದಾ-ರಿಯುದ್ದಕ್ಕೂ ರಂಗೋಲಿಯಿಂದ ಅಲಂಕಾರಗೊಳಿಸಲಾಗಿ-ತ್ತು. ಅಲ್ಲಲ್ಲಿ ಭಕ್ತರು ನೀರಿನ ವ್ಯವಸ್ಥೆ ಕಲ್ಪಿಸಿದ್ದರು.

## ಆಧ್ಯಾತ್ಮದಿಂದ ಜಗತ್ತಿಗೆ ಬೆಳಕಾಗುವುದು-ಪಿಯು ಕಾಲೇಜು ಸ್ಥಾಪನೆಗೆ ಮನವಿ

**ರಬಕವಿ-ಬನಹಟ್ಟಿ :** ಸಜ್ಜನರ ಸಂಘದಿಂದ ಬದುಕು ಹಸನಾಗಲು ಸಾಧ್ಯ. ಆಧ್ಯಾತ್ಮದ ಚಿಂತನೆಯಿಂದ ಜಗತ್ತನ್ನು ಬೆಳಗಿಸಲು ಕಾರಣವಾಗುವದು. ಲಿಂಗಮಯ ಜಗತ್ತಿನಲ್ಲಿ ಖಾಕಿ-ಖಾದಿ-ಕಾವಿ ಸಮಾನತೆಯಿಂದ ಮುನ್ನಡೆದರೆ ರಾಮರಾಜ್ಯವಾಗುವಲ್ಲಿ ಎರಡು ಮಾತಿಲ್ಲವೆಂದು ಬಂಡಿಗಣಿ ನೀಲಮಾಣಿಕ ಮಠದ ಶ್ರೀ ಅನ್ನದಾನೇಶ್ವರ ಶ್ರೀಗಳು ಹೇಳಿದರು.

ಸೋಮವಾರ ಸಮೀಪದ ಬಂಡಿಗಣಿಯ ನೀಲಮಾಣಿಕ ಮಠದಲ್ಲಿ ಸಮಾಜ ಸೇವೆ ಗುರ್ತಿಸಿ ರಾಜ್ಯ ಸರ್ಕಾರವು ರಾಜ್ಯೋತ್ಸವದ ಸುವರ್ಣ ಮಹೋತ್ಸವ ಪ್ರಶಸ್ತಿ ಪುರಸ್ಕ್ರತರನ್ನಾಗಿಸಿದ್ದಕ್ಕೆ ಅಭಿನಂದನಾ ಸಮಾರಂಭದಲ್ಲಿ ಭಾರಿ ಜನಸ್ತೋಮದೆದುರು ಮಾತನಾಡಿದರು.

ಸಮಾಜ ಸೇವೆ ಗುರ್ತಿಸಿ ಪ್ರಶಸ್ತಿ ಪುರಸ್ಕಾರ ಮಾಡಿದ ಮುಖ್ಯಮಂತ್ರಿ ಸಿದ್ರಾಮಯ್ಯ ಹಾಗು ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರರನ್ನು ಶ್ರೀಗಳು




ಅಭಿನಂದಿಸಿದರು. ತ್ರಿವಿಧ ದಾಸೋಹಕ್ಕೆ ಭಕ್ತರ ಪ್ರಾಮಾಣಿಕ ಸೇವೆ ಅನನ್ಯವೆಂದರು.

ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಮಾತನಾಡಿ, ಕರ್ನಾಟಕ ಸೇರಿದಂತೆ, ಗೋವಾ, ಮಹಾರಾಷ್ಟ್ರ, ಆಂಧ್ರ ರಾಜ್ಯಗಳ ಪ್ರತಿಷ್ಠಿತ ತೀರ್ಥ ಕ್ಷೇತ್ರಗಳಲ್ಲಿ ಪ್ರತಿ ವರ್ಷ 284 ಕಡೆಗಳಲ್ಲಿ ಅನ್ನದಾಸೋಹ ನಡೆಸುವ ಕೀರ್ತಿ ದಾನೇಶ್ವರ ಶ್ರೀಗಳದ್ದು, ಇದೇ ಕಾರಣದಿಂದ ಅನ್ನದಾನೇಶ್ವರರೆಂದು ಪ್ರಸಿದ್ಧಿ ಪಡೆದು ಇಂದಿಗೂ ದಾಸೋಹ ರತ್ನರಾಗಿ ಮುನ್ನಡೆಯುತ್ತಿದ್ದಾರೆಂದರು. ಭಕ್ತರ ಬೇಡಿಕೆಗಳಿಗೆ ನಿರಂತರ ಸ್ಪಂದನೆಯೊಂದಿಗೆ ಅಕ್ಷಯ ಪಾತ್ರೆಯಂತೆ ಕಾರ್ಯನಿರ್ವಹಿಸುತ್ತಿರುವ ಶ್ರೀಗಳು ಪ್ರೌಢಶಾಲೆವರೆಗೆ ಶಿಕ್ಷಣ ದಾಸೋಹ ನೀಡುತ್ತಿರುವದನ್ನು ಪಿಯು ಕಾಲೇಜುವರೆಗೆ ವಿಸ್ತರಿಸಬೇಕೆಂದು ಕೊಣ್ಣೂರ ಮನವಿ ಮಾಡಿದರು.

ಬಿಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಭೀಮಶಿ ಮಗದುಮ್ ಮಾತನಾಡಿ, ಕಳೆದ 4 ದಶಕಗಳಿಂದ ಅನ್ನ, ಶಿಕ್ಷಣ ಹಾಗು ಸಮಾಜ ಹೀಗೆ ತ್ರಿವಿಧ ದಾಸೋಹ ಸೇವೆ ಸಲ್ಲಿಸುತ್ತಿರುವ ಅನ್ನದಾನೇಶ್ವರ ಶ್ರೀಗಳ ಕೊಡುಗೆ ಅಪಾರವಾಗಿದೆ. ಉತ್ತರ ಕರ್ನಾಟಕದಲ್ಲಿ ಅತಿ ಹೆಚ್ಚು ಭಕ್ತಗಣ ಹೊಂದಿರುವ ಶ್ರೀಗಳಿಗೆ ಈ ಬಾರಿ ಸುವರ್ಣ ಮಹೋತ್ಸವ ಪ್ರಶಸ್ತಿ ದೊರೆತಿ-ರುವದು ಹೆಮ್ಮೆಯಾಗಿದೆ ಎಂದರು. ನೊಂದ ಕುಟುಂಬಗಳ ಕಣ್ಣೀರು ಒರೆಸುವ ಕಾರ್ಯದೊಂದಿಗೆ ತುಳಿತಕ್ಕೊಳಗಾದ ಸಮುದಾಯಗಳ ಏಳ್ಗೆಗೆ ಶ್ರಮಿಸುವಲ್ಲಿ ಯಶಸ್ವಿ ಕಂಡಿದ್ದಾರೆಂದರು.

ಹಿರಿಯ ನ್ಯಾಯವಾದಿ ಹರ್ಷವರ್ಧನ ಪಟವರ್ಧನ ಮಾತನಾಡಿ, ಸಾವಿರಾರು ಭಕ್ತರಿಗೆ ಒಂದೇ ಸೂರಿನಡಿ ಸಕಲರೀತಿಯ ಗೌರವದೊಂದಿಗೆ ಅನ್ನಸಂತರ್ಪಣೆ ನಿರಂತರ ನಡೆಸುತ್ತಿರುವದು ವಿಶೇಷ. ಶ್ರೀಗಳಿದ್ದ ಸ್ಥಳಗಳಲ್ಲಿ ಸಾವಿರಾರು ಭಕ್ತರು ಸೇರುವ ಮೂಲಕ ತಮ್ಮ ಪಾರಮಾರ್ಥಿಕ ಸೇವೆಗೆ ಸಾಕ್ಷಿಯಾಗಿದ್ದಾರೆಂದರು.

ವೇದಿಕೆ ಮೇಲೆ ಶಂಕರ ತಿಮ್ಮಾಪೂರ, ಲಕ್ಷ್ಮಣ ದೇಸಾರಟ್ಟಿ, ಮಲ್ಲಪ್ಪ ಸಿಂಗಾಡಿ, ತಮ್ಮಣ್ಣಪ್ಪ ದೇವಮನೆ, ವಿಜಯ ನಿಂಬರಗಿ, ಶಿವಾನಂದ ಟಕ್ಕಳಕಿ ಸೇರಿದಂತೆ ಅನೇಕರಿದ್ದರು.

# ಸಂಭ್ರಮದ ದೀಪಾವಳಿ ಆಚರಣೆ

**ಬಸವನಬಾಗೇವಾಡಿ:** ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಜನರು ಶನಿವಾರ ಬೆಳಕಿನ ಹಬ್ಬ ದೀಪಾವಳಿಯ ಬಲಿಪಾಡ್ಯ ಹಬ್ಬವನ್ನು ಆಚರಣೆ ಮಾಡಿದರು. ಬೆಳಗ್ಗೆ ಬೇಗನೆ ಎದ್ದು ಸ್ನಾನಾದಿ ಕ್ರಿಯೆಯಾದ ನಂತರ ಪ್ರತಿಯೊಂದು ಮನೆಯಲ್ಲಿ ದೀಪಾವಳಿ ಪಾಡ್ಯದಂದು ಸಂಪ್ರದಾಯದಂತೆ ಸಹೋದರಿಯರು ತಮ್ಮ ಸಹೋದರರಿಗೆ ಆರತಿ ಬೆಳಗಿದರು.

ಪಾಡ್ಯ ಪೂಜೆ ನೆರವೇರಿದ ನಂತರ ಮನೆ ಮುಂದೆ ಪಾಂಡವರ ಪೂಜೆ ಮಾಡುವುದು ಹಿಂದಿನಿಂದ ನಡೆದುಕೊಂಡು ಬಂದ ಸಂಪ್ರದಾಯ. ಸಂಪ್ರದಾಯದಂತೆ ಪಟ್ಟಣ ಸೇರಿದಂತೆ ತಾಲೂಕಿನಲ್ಲಿ ಜನರು ತಮ್ಮ ಮನೆಗಳ ಮುಂದೆ ಪಾಂಡವರನ್ನು, ಗುಳ್ಳವ್ವರನ್ನು ಸೆಗಣಿಯಿಂದ ಮಾಡಿದ್ದು ಕಂಡುಬಂದಿತ್ತು. ಪಾಡ್ಯದಿನದಂದು ಜನರು ಕುಟುಂಬ ಸದಸ್ಯರೊಂದಿಗೆ ತಮ್ಮ ಇಷ್ಟದೇವರ ದೇವಸ್ಥಾನಕ್ಕೆ ತೆರಳಿ ದರ್ಶನ ಪಡೆದುಕೊಂಡರು. ವಿವಿಧ ದೇವಸ್ಥಾನಗಳಲ್ಲಿ ಹೆಚ್ಚು ಜನರು ದೇವರ ದರ್ಶನ ಪಡೆದುಕೊಂಡರು.

ಪಾಂಡವರು ಅಜ್ಞಾತವಾಸ ಮುಗಿಸಿ ನಂತರ ಬನ್ನಿ ಗಿಡದಲ್ಲಿ ಅಡಗಿಸಿಟ್ಟಿದ್ದ ಆಯುಧಗಳನ್ನು ಪಾಡ್ಯದ ದಿನ ತೆಗೆದುಕೊಂಡು ಬಂದಿದ್ದರ ವಿಜಯೋತ್ಸವದ ಸಂಕೇತವಾಗಿ ಮನೆಯ ಮುಂದೆ ಪಾಡವರು ಕೌರವರನ್ನು ಸಂಹಾರ ಮಾಡಿದ ಚಿತ್ರ ಬಿಂಬಿಸುವಂತೆ ಸಗಣಿಯಿಂದ ಗೊಂಬೆಗಳನ್ನು ಮಾಡಿ ಹೂವುಗಳಿಂದ ಅಲಂಕರಿಸಿ ಪೂಜೆ ಮಾಡಲಾಗುತ್ತಿದೆ ಎಂದು ಕೆಲ ಹಿರಿಯರು ಹೇಳಿದರು.



ಪಾಂಡವರು ಅಜ್ಞಾತವಾಸ ಯಶಸ್ವಿಯಾಗಿ ಪೂರ್ಣಗೊಳಿಸಿ ಸುರಕ್ಷಿತವಾಗಿ ಬರಲಿ ಎಂಬ ಸಂಕೇತವಾಗಿ ಪಾಂಡವರ (ಗುಳ್ಳವ್ವ ಪೂಜೆ) ಪೂಜೆ ಎಂದು ಕರೆಯಲಾಗುತ್ತಿದೆ ಎಂದು ಕೆಲ ಮಹಿಳೆಯರು ಹೇಳಿದರು. ಪಾಡ್ಯ ದಿನದಂದು ಮನೆಯ ಮುಂದೆ ಸೆಗಣಿಯಿಂದ ತಯಾರಿಸಿದ ಗೊಂಬೆಗಳಿಗೆ ಚೆಂಡು ಹೂವು, ತತ್ರಾಣಿ ಕಡ್ಡಿ, ಅವರೆ ಹೂವುಗಳಿಂದ ಅಲಂಕರಿಸಿ ಮೊಸರು ಸೇರಿದಂತೆ ನೈವೇದ್ಯ ಅರ್ಪಿಸಿ ಪೂಜೆ ಸಲ್ಲಿಸುವುದು ವಿಶೇಷ. ಬುಧವಾರ ದೀಪಾವಳಿ ಹಬ್ಬದ ಕಡೆ ಪಾಡ್ಯ ಆಚರಣೆಯೊಂದಿಗೆ ಬೆಳಕಿನ ಹಬ್ಬ ದೀಪಾವಳಿ ಆಚರಣೆ ಸಂಪನ್ನವಾಗುತ್ತದೆ.

## ವಾಲಿಬಾಲ್ ಕ್ರೀಡಾಕೂಟಕ್ಕೆ ಸಂಸದ ಜಿಗಜಿಣಗಿ ಚಾಲನೆ



ತಾಳಿಕೋಟೆ ಪಟ್ಟಣದ ಶ್ರೀ ಎಸ್.ಎಚ್.ಪಾಟೀಲ ಸ್ವತಂತ್ರ ಪಧವಿ ಪೂರ್ವ ಕಾಲೇಜ್‌ನಲ್ಲಿ ನಡೆಯಲಿರುವ ರಾಜ್ಯಮಟ್ಟದ ವಾಲಿಬಾಲ್ ಕ್ರೀಡಾಕೂಟದಲ್ಲಿ ಸಂಸದ ರಮೇಶ ಜಿಗಜಿಣಗಿ ಅವರು ವ್ಹಾಲಿಬಾಲ್ ಚೆಂಡನ್ನು ಚಿಮ್ಮುವದರ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು.



ತಾಳಿಕೋಟೆ ಪಟ್ಟಣದ ಶ್ರೀ ಎಚ್.ಎಸ್.ಪಾಟೀಲ ಸ್ವತಂತ್ರ ಪದವಿ ಪೂರ್ವ ಕಾಲೇಜ್ ಆವರಣದಲ್ಲಿ ನಡೆಯಲಿರುವ ರಾಜ್ಯಮಟ್ಟದ ವ್ಹಾಲಿಬಾಲ್ ಕ್ರೀಡಾಕೂಟದಲ್ಲಿ ಹೆಜ್ಜೆ ಗುರುತು ಎಂಬ ಸ್ಮರಣ ಸಂಚಿಕೆಯನ್ನು ಆಡಳಿತ ಇಲಾಖೆ ನಿರ್ದೇಶಕರ ಕಚೇರಿಯ ಶಾಲಾ ಶಿಕ್ಷಣ ಇಲಾಖೆಯ ಶ್ರೀಮತಿ ಜೆ.ಎನ್.ಶ್ವೇತಾ ಅವರು ಬಿಡುಗಡೆ ಗೊಳಿಸಿದರು.

# ತಾಲೂಕು ಆಸ್ಪತ್ರೆ ಉನ್ನತೀಕರಣಕ್ಕೆ ಭೂಮಿಪೂಜೆ



**ಸಿಂದಗಿ:** ಆಸ್ಪತ್ರೆಯ ಹಲವಾರು ಸಮಸ್ಯಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಆಸ್ಪತ್ರೆಯ ಅಧಿಕಾರಿಗಳ ಜೊತೆಗೆ ಸಭೆ ಮಾಡಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವ 1ಕೋಟಿ 20ಲಕ್ಷ ರೂ. ವೆಚ್ಚದಲ್ಲಿ ನಾಲ್ಕೈದು ಕಾಮಗಾರಿ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರ ಘಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜನೀಯರಿಂಗ್ 4210-01-110-1-01-133 ಯೋಜನೆಯ ಅಡಿಯಲ್ಲಿ ಹಮ್ಮಿಕೊಂಡ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಮೂಲಭೂತ ಸೌಕರ್ಯಗಳ 1ಕೋಟಿ 20ಲಕ್ಷ ರೂ. ಅನುದಾನದ ಉನ್ನತೀಕರಣ ಕಾಮಗಾರಿಗೆ ಭೂಮಿ ಪೂಜೆ ನೇರವೇರಿಸಿ ಮಾತನಾಡಿದಖಿಗ.

ಸಿಂದಗಿ ಮತಕ್ಷೇತ್ರದಲ್ಲಿ ಬರುವ ಎಲ್ಲ ಆಸ್ಪತ್ರೆಗಳನ್ನು ಸುಸಜ್ಜಿತವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ. ಸ್ಥಳೀಯ ಶಾಸಕರ ಅನುದಾನದಲ್ಲಿ ಆಲಮೇಲ, ಚಾಂದಕವಟೆ ಹಾಗೂ ಮಲಘಾಣ ಆಸ್ಪತ್ರೆಗಳಿಗೆ ಉನ್ನತೀಕರಣ ಮತ್ತು ಮೂಲಭೂತ ಸೌಕರ್ಯಕ್ಕಾಗಿ ವಿಶೇಷ ಅನುದಾನವನ್ನು ಮಂಜೂರು ಮಾಡುವ ಮೂಲಕ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಗಮನ ಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ತಾಲೂಕು ವೈದ್ಯಾಧಿಕಾರಿ ಡಾ.ಎ.ಎ.ಮಾಗಿ, ದಂತವೈದ್ಯ ಡಾ.ರಮೇಶ ರಾಠೋಡ, ಡಾ.ಮಹಾಂತೇಶ ಹಿರೇಮಠ, ಡಾ.ಮೌನೇಶ ಬಡಿಗೇರ, ಡಾ.ಕುಶಾಲ ತಾರಾಪುರ, ರಾಜಶೇಖರ ನರಗೋದಿ, ವಿದ್ಯಾ ಹಿರೇಪಟ್ಟ, ಶಾಂತೂ ರಾಣಾಗೋಳ, ತಜ್‌ಬಿಖಾಜಿ, ರಾಜೇಶ್ವರಿ ದೊಡಮನಿ, ಜಗು ಡೋಣೂರ, ಈರಣ್ಣ ಪಾಟೀಲ ಬಬಲೇಶ್ವರ, ಜಾಂಗೀರ ಸಿಂದಗಿಕರ, ಎಂ.ಪಿ.ಸಾಗರ, ಚೇತನಗೌಡ ಸೇರಿದಂತೆ ಆಸ್ಪತ್ರೆಯ ಸಿಬ್ಬಂದಿಗಳು, ಪಕ್ಷದ ಕಾರ್ಯಕರ್ತರು, ಆರೋಗ್ಯ ರಕ್ಷಾ ಸಮಿತಿಯ ಸದಸ್ಯರು ಇದ್ದರು.

**ಚೂರು-ಪಾರು**

## ಚರಂಡಿ ಮೇಲಿರುವ ಅಂಗಡಿಗಳನ್ನು ಮಾತ್ರ ತೆರವುಗೊಳಿಸಿ

**ಸಿಂದಗಿ:** ನಗರದಲ್ಲಿ ಅಂಗಡಿ ಮುಂಗಟುಗಳ ತೆರವು ಕಾರ್ಯಾಚರಣೆ ಚುರುಕುಗೊಂಡಿದೆ. ಆದರೆ ಸಿದ್ದಲಿಂಗ ಶ್ರೀಗಳ (ಹಳೆಯ ಎಸ್.ಬಿ.ಐ) ರಸ್ತೆಯ ಅಂಗಡಿಗಳ ಸಣ್ಣ ಪುಟ್ಟ ವ್ಯಾಪಾರಸ್ಥರು ಬೀದಿಗೆ ಬರುವ ಪರಿಸ್ಥಿತಿ ಉದ್ಭವವಾಗಿದೆ. ಕಳೆದ 2013 ರಲ್ಲಿ ಮಾಸ್ಟರ್ ಪ್ಲಾನ್ ನಲಿ ಅಂಗಡಿಗಳು ತೇರುವಾಗಿದ್ದು, ಸದ್ಯಕ್ಕೆ ಎರಡು ಬದಿಯ ಚರಂಡಿ ಮೇಲಿರುವ ಅಂಗಡಿಗಳನ್ನು ಮಾತ್ರ ತೆರವುಗೊಳಿಸಿ ವ್ಯಾಪಾರಸ್ಥರಿಗೆ ಅನುಕೂಲ ಮಾಡಿಕೊಡಬೇಕೆಂದು ಪುರಸಭೆ ಉಪಾಧ್ಯಕ್ಷ ರಾಜಣ್ಣ ನಾರಾಯಣಕರ ಹೇಳಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಪಟ್ಟಣದಲ್ಲಿ ದಿನದಿಂದ ದಿನಕ್ಕೆ ಅಂಗಡಿ ಮುಂಗಟ್ಟುಗಳ ತೆರವು ಕಾರ್ಯಾಚರಣೆ ಚುರುಕುಗೊಂಡಿದ್ದು ಸಂತಸದ ವಿಷಯ. ಅದರಿಂದ ಪಟ್ಟಣ ಅಭಿವೃದ್ಧಿಯಾಗುವ ಎಲ್ಲ ಗುಣಲಕ್ಷಣಗಳು ಕಾಣುತ್ತಿವೆ. ಬಸ್ ನಿಲ್ದಾಣದಿಂದ ಹಳೆಯ ಮೋರಟಗಿ ರೋಡವರೆಗೆ ಮದ್ಯ ರಸ್ತೆಯಿಂದ 45 ಫಿಟ್ ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ಸ್ವಯಂ ಪ್ರೇರಿತವಾಗಿ ಈಗಾಗಲೇ ತೆರವು ಮಾಡಿಕೊಳ್ಳುತ್ತಿದ್ದಾರೆ. ಈ ಕಾರ್ಯ ಈಗಾಗಲೇ ಟಿಪ್ಪು ಸುಲ್ತಾನ್ ವೃತ್ತದವರೆಗೂ ಬಂದು ತಲುಪಿದೆ. ಟಿಪ್ಪು ಸುಲ್ತಾನ ವೃತ್ತದ ರಸ್ತೆಯಿಂದ ಇನ್ನೂಳಿದ ಅಂಗಡಿಗಳನ್ನು ಸಹ ಇದೇ ರೀತಿ ತೆರವು ಮಾಡಲಿದ್ದಾರೆ. ಇನ್ನೂ ತೊಂಟದ ಸಿದ್ದಲಿಂಗ ಶ್ರೀಗಳ (ಹಳೆಯ ಎಸ್.ಬಿ.ಐ) ರಸ್ತೆಯಲ್ಲಿ ಎರಡು ಭಾಗದಲ್ಲಿ ಚರಂಡಿ ಮೇಲಿರುವ ಅಂಗಡಿಗಳನ್ನು ಮಾತ್ರ ತೆರುವುಗೊಳಿಸಬೇಕು. ಅದನ್ನು ಮೀರಿ ತೆರವಿಗೆ ಮುಂದಾದರೆ ವ್ಯಾಪಾರವನ್ನೇ ನಂಬಿಕೊಂಡು ಬದುಕುತ್ತಿರುವ ಕುಟುಂಬಗಳು ಬೀದಿಗೆ ಬರುವ ಎಲ್ಲ ಲಕ್ಷಣಗಳು ಎದ್ದು ಕಾಣುತ್ತಿವೆ. ಇದನ್ನು ಪುರಸಭೆ ಅಧ್ಯಕ್ಷರು ಹಾಗೂ ಮುಖ್ಯಾಧಿಕಾರಿಗಳು ಮತ್ತು ಸ್ಥಳೀಯ ಶಾಸಕರು ಸೂಕ್ಷ್ಮವಾಗಿ ಗಮನಿಸಿ ವ್ಯಾಪಾರಸ್ಥರ ಸಂಕಷ್ಟವನ್ನು ಆಲಿಸಿ ಅಂಗಡಿಗಳ ತೆರವಿಗೆ ಅನುಕೂಲು ಮಾಡಿಕೊಡಬೇಕು ಎಂದು ಮನವಿ ಮಾಡಿದ್ದಾರೆ.



## ಯರಝರ್ವಿಯಲ್ಲಿ ಅದ್ದೂರಿಯಾಗಿ ಜರುಗಿದ ಕನ್ನಡ ರಾಜ್ಯೋತ್ಸವ

**ಯರಗಟ್ಟಿ:** ಸಮೀಪದ ಯರಝರ್ವಿ ಗ್ರಾಮದ ವೀರ ಸಿಂಧೂರ ಲಕ್ಷ್ಮಣನ ವೃತ್ತದಲ್ಲಿ ಅದ್ದೂರಿಯಾಗಿ ಕನ್ನಡ ರಾಜ್ಯೋತ್ಸವ ಆಚರಣೆ ಜರುಗಿತು. ಕನ್ನಡಪರ ಹೊರಾಟಗರ ಸುರೇಶ ಮೂರಗೋಡ ತಾಯಿ ಭುವನೇಶ್ವರಿ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿದರು, ಕನ್ನಡ ಮಾದರಿ ಶಾಲೆಯ ಮುದ್ದು ಮಕ್ಕಳು ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣಗಳನ್ನು ಧರಿಸಿ ನೋಡುಗರ ಕಣ್ಮನ ಸೇಳೆದರು.ಈ ಸಂದರ್ಭದಲ್ಲಿ ಯಲ್ಲಾಲಿಂಗ ಮಠದ ಶ್ರೀಗಳು, ಶಾಲಾ ಮುಖ್ಯ ಗುರುಮಾತೆ ಜಿ ಡಿ ಕಡಕೋಳ, ಶಿಕ್ಷಕರು,ಶಿಕ್ಷಕಿಯರು, ಮತ್ತು ಕರವೇ ಕಾರ್ಯಕರ್ತರು ಗ್ರಾಮದ ಮುಖಂಡರು ಅದ್ದೂರಿ ಕನ್ನಡ ರಾಜ್ಯೋತ್ಸವದಲ್ಲಿ ಭಾಗಿಯಾಗಿದ್ದರು.



# ದೇಶ ಕಾಯುವ ಯೋಧರ ಕಾರ್ಯ ಸ್ಮರಣೀಯ

## ಹಲಕಿ ಗ್ರಾಮದಲ್ಲಿ ನಿವೃತ ಸುಭೇದಾರ ಬಸವರಾಜ ಪಾಟೀಲಗೆ ಅದ್ದೂರಿ ಸನ್ಮಾನ

**ಬೈಲಹೊಂಗಲ:** ದೇಶದ ಗಡಿ ರಕ್ಷಣೆಗಾಗಿ ಚಳಿ ಮಳೆ, ಗಾಳಿ ಬಿಸಿಲು ಎನ್ನದೇ ತಮ್ಮ ಪ್ರಾಣದ ಹಂಗು ತೊರೆದು ಭಾರತ ಮಾತೆಯ ಸೇವೆಗೈಯುತ್ತಿರುವ ವೀರ ಯೋಧರ ಕಾರ್ಯ ಸಮಾಜದಲ್ಲಿ ಅತ್ಯಂತ ಅವಿಸ್ಮರಣೀಯವಾಗಿದೆ ಎಂದು ನ್ಯಾಯವಾದಿ ಎಫ.ಎಸ್.ಸಿದ್ದನಗೌಡರ ಹೇಳಿದರು.

ಅವರು ಸಮೀಪದ ಹಲಕಿ ಗ್ರಾಮದ ಭಾರತೀಯ ಸೇನೆಯಲ್ಲಿ ಸುಭೇದಾರರಾಗಿ ಸುಮಾರು 30 ವರ್ಷ ಸೇವೆ ಸಲ್ಲಿಸಿ ವಯೋ ನಿವೃತ್ತಿ ಹೊಂದಿದ ನಿಮಿತ್ಯ ಬಸವರಾಜ ಪಾಟೀಲ ಅವರ ಸ್ವಗ್ರಾಮದಲ್ಲಿ ಮಾಜಿ ಸೈನಿಕರ ಸಮನ್ವಯ ಸಮೀತಿ, ಗೆಳೆಯರ ಬಳಗ ಹಾಗೂ ಗ್ರಾಮಸ್ಥರು ರವಿವಾರ ಏರ್ಪಡಿಸಿದ ಸ್ವಾಗತ, ಸನ್ಮಾನ ಹಾಗೂ ಅಭಿನಂದನಾ ಸಮಾರಂಭದಲ್ಲಿ ಅತಿಥಿಯಾಗಿ ಮಾತನಾಡಿ, ಶತ್ರು ರಾಷ್ಟ್ರಗಳ ಗುಂಡಿಗೆ ಹೆದರದೇ ದೇಶದ ಗಡಿಯಲ್ಲಿ ಹದ್ದಿನ ಕಣ್ಣಾಗಿ ತಮ್ಮ ದೃಷ್ಟಿ ಇಟ್ಟು ನಮ್ಮನ್ನು ಸದಾ ರಕ್ಷಣೆ ಮಾಡುತ್ತಿರುವ ವೀರ ಯೋಧರ ಕಾರ್ಯವನ್ನು ಸಮಾಜ ಎಂದಿಗೂ ಮರೆಯಬಾರದು.

ರೈತರು ಮತ್ತು ಸೈನಿಕರು ಭಾರತಾಂಭೆಯ ಎರಡು ಕಣ್ಣಗಳಿದ್ದಂತೆ, ದೇಶದೊಳಗಿನ ಜನತೆ ನೆಮ್ಮದಿ ಜೀವನ ಸಾಗಿಸಲು ಸೈನಿಕರು ಕಾರಣೀಭೂತರಾದರೆ, ದೇಶದೊಳಗಿನ ಪ್ರತಿಯೊಂದು ಜೀವಿಗೆ ಯಾವದೇ ಲಾಭವಿಲ್ಲದೇ ಹಗಲಿರುಳು ದುಡಿದ ರೈತನು



ಕಷ್ಟಪಟ್ಟಂತ ಶ್ರಮದಿಂದ ಪ್ರತಿಯೊಬ್ಬರು ಆಹಾರ ಪಡೆಯುತ್ತಿದ್ದು ಇವರ ಋಣ ಅಗಾಧವಾಗಿದೆ ಎಂದರು.

ಶತ್ರು ರಾಷ್ಟ್ರಗಳು ಭಾರತವನ್ನು ನೋಡುವ ದೃಷ್ಟಿಕೋಣ ಕಳೆದ ಹತ್ತು ವರ್ಷಗಳಲ್ಲಿ ಸಂಪೂರ್ಣವಾಗಿ ಬದಲಾವಣೆಯಾಗಿದೆ. ಇದಕ್ಕೆ ಜ್ವಲಂತ ಸಾಕ್ಷಿ ಎಂದರೆ ಭಾರತ ಮತ್ತು ಚೀನಾ ಗಡಿಯಲ್ಲಿ ಲಕ್ಷಾಂತರ ಯೋಧರು ಯುದ್ಧದ ಕಾರ್ಮೋಡಿನಲ್ಲಿ ಇದ್ದಾಗಲೂ ಸೈನಿಕರ ಬಲದಿಂದ ಬಲ್ಯಾಡ್ಯ ಸೈನ್ಯ ಹೊಂದಿದ ಚೀನಾ ಭಾರತಕ್ಕೆ ಮಣಿದು ತನ್ನ ಸೈನ್ಯವನ್ನು ಹಿಂದೆ ಪಡೆದು ಏಷಿಯನ್ ರಾಷ್ಟ್ರದಲ್ಲಿ ಸಂಭವಿಸಬಹುದಾದ ಯುದ್ಧದಿಂದ ಪಾರಾಗಿರುವದಕ್ಕೆ ನಮ್ಮ ದೇಶದ ಸೈನಿಕರು ಮತ್ತು ರಕ್ಷಣಾ ಶಕ್ತಿಯ ನಿತಿಯೇ ಕಾರಣವಾಗಿದೆ ಎಂದರು.

ಹಣಬರಹಟ್ಟಿಯ ಹಿರೇಮಠದ ಶಿವಾಚಾರ್ಯ ಸ್ವಾಮೀಜಿ ಸಾನಿದ್ಯ ವಹಿಸಿ ಮಾತನಾಡಿ, ಜೈ ಜವಾನ, ಜೈ ಕಿಸಾನ ಎಂಬ ಧ್ಯೇಯ ವಾಕ್ಯದಂತೆ ದೇಶದ ಸೇವೆ ಮಾಡುತ್ತಿರುವ ರೈತ ಮತ್ತು ಸೈನಿಕರು ಸಮಾಜದಲ್ಲಿ ಮಾದರಿಯಾಗಿದ್ದಾರೆ ಎಂದರು.

ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಜಗದೀಶ ಪೂಜೇರಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ವೇದಿಕೆ ಮೇಲೆ ಮಾಜಿ ಸೈನಿಕರ ಸಮನ್ವಯ ಸಮೀತಿಯ ಅಧ್ಯಕ್ಷ ಬಿ.ಬಿ.ಬೋಗೂರ, ಮಾಜಿ ಸೈನಿಕರ ಸಂಘಟಣೆಯ ಮಹಾ ಒಕ್ಕೂಟದ ಬೆಳಗಾವಿಯ ಪ್ರಧಾನ ಕಾರ್ಯದರ್ಶಿ ಶಿವಬಸಪ್ಪ ಕಾಡನ್ನವರ, ರಮೇಶ ಚೌಗಲ, ವೀರುಪಾಕ್ಷ ಗೌಡರ, ಗೋಪಾಲ ಸಿದ್ದನಗೌಡರ, ಎಮ್ ಬಿ ಕಡಕೋಳ, ಬಸವರಾಜ ಗೌಡರ, ಮಾರುತಿ ಪಾಟೀಲ, ಚನ್ನಪ್ಪ ದಿನ್ನಿಮನಿ, ಎಂ.ಬಿ.ಹಳೇಗೌಡರ ಮುಂತಾದವರು ಇದ್ದರು.

ಜಿಲ್ಲಾ ಮತ್ತು ವಿವಿಧ ತಾಲೂಕಿನ ಮಾಜಿ ಸೈನಿಕರ ಸಂಘದ ಪದಾಧಿಕಾರಿಗಳು, ಗ್ರಾಮದ ವಿವಿಧ ಸಂಘಟನೆಗಳು, ಬಂದು ಮಿತ್ರರು, ಗೆಳೆಯರ ಬಳಗ, ಶಾಲಾ ಶಿಕ್ಷಕರು, ಮಹಿಳಾ ಸಂಘಟಣೆಗಳು, ಗ್ರಾಮಸ್ಥರು ಸನ್ಮಾನಿಸಿ ಗೌರವಿಸಿದರು. ವಿದ್ಯಾರ್ಥಿ ದೀಪಾ ಗೌಡರ ಸಂಗಡಿಗರಿಂದ ಸ್ವಾಗತಗೀತೆ ಜರುಗಿತು. ಮುಖ್ಯೋಪಾಧ್ಯಾಯ ಕೆ. ಎಂ. ಬೈಲವಾಡ ಸ್ವಾಗತಿಸಿದರು. ಎಂ. ಬಿ. ಕಂಠಿ ನಿರೂಪಿಸಿದರು. ಹಣಮಂತ ಮುಗಜೋಳ ವಂದಿಸಿದರು.

**ನನ್ನ ಸೇವೆಯನ್ನು ಗಮನಿಸಿ ಸೇನಾ ಇಲಾಖೆಯು ಆರ್ಮಿ ಕಮಾಂಡರ್ ಕಮಿಂಡೇಶನ್ ಕಾರ್ಡ ೩ ಸಲ ಪ್ರಶಸ್ತಿಯ ಪುರಸ್ಕ್ರತನಾಗಿದ್ದೇನೆ. ಅಲ್ಲದೇ ಪ್ಯಾರಾ ಕಮಾಂಡೋ ತರಬೇತಿಯ ವಿಮಾನ ಹಾರಾಟದ ಸಂದರ್ಭದಲ್ಲಿ ಸುಮಾರು ೩೦೦೦ ಸಾವಿರ ಪೂಟ್ ಎತ್ತರದಿಂದ 52 ಸಲ ಜಂಪ್ ಮಾಡಿ ಇಲಾಖೆಯ ಹೆಸರು ತಂದಿದ್ದೇನೆ. ಸೈನ್ಯದಲ್ಲಿ ಸಾಧನೆ ಮಾಡುವದರೊಂದಿಗೆ ಸವಾಲುಗಳನ್ನು ಎದುರಿಸಿ ಯಶಸ್ವಿಯಾಗಬೇಕು. ನಾವು ಮಾಡುವ ಪ್ರತಿಯೊಂದು ಕೆಲಸ ಒಳ್ಳೆಯ ಕಾರ್ಯ ಎಂದು ಭಾವಿಸಬೇಕು. ನಾವು ನೌಕರಿ ಮಾಡುವ ಕಾಲದಲ್ಲಿ ಅತ್ಯಂತ ಕಠಿಣವಾಗಿತ್ತು. ನಿವೃತ ಸೈನಿಕರ ಸಂಘಟನೆಗೆ ಬೆನ್ನಲಬಾಗಿ ಕೆಲಸ ನಿರ್ವಹಿಸಲು ಬದ್ಧನಾಗಿದ್ದೇನೆ. ಯುವಕ ಯುವತಿಯರು ದೇಶ ಸೇವೆ ಮಾಡುವಲ್ಲಿ ಸೈನ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೇಮಕವಾಗಬೇಕು. ಇದರಿಂದ ರಾಷ್ಟ್ರ ಭಕ್ತಿ, ಸದೃಡ ಆರೋಗ್ಯ ರೂಪಿಸಿಕೊಳ್ಳಲು ಸಾಧ್ಯ.**

**-ಬಸವರಾಜ ಪಾಟೀಲ** ನಿವೃತ್ತ ಸುಭೇದಾರ, ಹಲಕಿ

ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

**ಭವ್ಯ ಸ್ವಾಗತ:** ಸೈನ್ಯದಿಂದ ವಯೋ ನಿವೃತ್ತಿ ಹೊಂದಿದ ಬಸವರಾಜ ಪಾಟೀಲ ಇವರನ್ನು ಗ್ರಾಮಕ್ಕೆ ಆಗಮಿಸುವ ಮುನ್ನ ಹಲಕಿ ಕ್ರಾಸ್ ರಾಜ್ಯ ಹೆದ್ದಾರಿಯಿಂದ ತೆರೆದ ವಾಹನದಲ್ಲಿ ಭವ್ಯವಾಗಿ ಸ್ವಾಗತಿಸಿ ಬೈಕ್ ರ‍್ಯಾಲಿ ಮೂಲಕ ಗ್ರಾಮದ ಹಣುಮಂತ ದೇವಸ್ಥಾನ ದರ್ಶನ ಪಡೆದ ನಂತರ ಕುಟುಂಸ್ಥರು, ಗ್ರಾಮದ ಮಹಿಳೆಯರು ಆರತಿ ಬೆಳಗಿದರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಮೆರವಣಿಗೆ ಉದ್ದಕ್ಕೂ ಭಾರತ ಮಾತಾಕೀ ಜೈ, ವಂದೇ ಮಾತರಂ ಘೋಷನೆಗಳು ಮುಗಿಲು ಮುಟ್ಟುತ್ತಿದ್ದವು.

# ದೇವಿ ದರ್ಶನ ಪಡೆದ ಶಾಸಕ ಬಾಲಚಂದ್ರ



ಶ್ರೀಕ್ಷೇತ್ರ ಯಲ್ಲಮ್ಮನ ಗುಡ್ಡಕ್ಕೆ ಆಗಮಿಸಿದ್ದ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರನ್ನು ಎಸ್‌ಪಿಬಿ ಮಹೇಶ ಶಾಲೂಹೊದಿಸಿ ಸತ್ಕರಿಸಿದರು. ರವಿ ಕೋಟಾರಗಸ್ತಿ, ನಾಗರತ್ನಾ ಚೋಳಿನ ಇತರರಿದ್ದರು.

**ಉಗರಗೋಳ:** ಸಮೀಪದ ಯಲ್ಲಮ್ಮನಗುಡ್ಡಕ್ಕೆ ಶಾಸಕ ಹಾಗೂ ಮಾಜಿ ಸಚಿವ ಬಾಲಚಂದ್ರ ಜಾರಕಿಹೊಳಿ ಶನಿವಾರ ಭೇಟಿ ನೀಡಿ, ಯಲ್ಲಮ್ಮ ದೇವಿ ದರ್ಶನಾಶೀರ್ವಾದ ಪಡೆದುಕೊಂಡರು.

ದೇವಸ್ಥಾನ ವತಿಯಿಂದ ಬಾಲಚಂದ್ರ ಜಾರಕಿಹೊಳಿ ಅವರನ್ನು ಯಲ್ಲಮ್ಮಾ ದೇವಸ್ಥಾನ ಪ್ರಾಧಿಕಾರದ ಕಾರ್ಯದರ್ಶಿ ಎಸ್‌ಪಿಬಿ ಮಹೇಶ ಶಾಲೂಹೊದಿಸಿ ಸತ್ಕರಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಜಾರಕಿಹೊಳಿ ಅವರು, ಯಲ್ಲಮ್ಮನಗುಡ್ಡ ಪವಿತ್ರ ಧಾರ್ಮಿಕ ಕ್ಷೇತ್ರ. ಪ್ರತಿವರ್ಷ ದೀಪಾವಳಿ ಪಾಡ್ಯದಂದು ಅಮ್ಮನ ಸನ್ನಿಧಿಗೆ ಬಂದು ಪೂಜೆ ಸಲ್ಲಿಸುತ್ತೇವೆ. ಜೋಗುಳಬಾವಿ ಸತ್ಯೆಮ್ಮ ಹಾಗೂ ಶ್ರೀರೇಣುಕಾ ಯಲ್ಲಮ್ಮಾ ದೇವಿಗೆ ಉಡಿ ತುಂಬಿ, ಶಿಖರಕ್ಕೆ ಸೀರೆ ಉಡಿಸಿ ಹೋಗುವ ಸಂಪ್ರದಾಯ ಪೂರ್ವಜರ ಕಾಲದಿಂದಲೂ ನಡೆದುಕೊಂಡು ಬಂದಿದೆ. ಅದನ್ನು ಮುಂದುವರಿಸಿಕೊಂಡು ಹೊಗುತ್ತಿದ್ದೇವೆ ಎಂದು ಹೇಳಿದರು.

ಬೇಡಿದವರಿಗೆ ಎಲ್ಲವನ್ನು ಕರುಣಿಸುವ; ಕಾಮಧೇನು ಕಲ್ಪವೃಕ್ಷ ಇದ್ದಂತ ಪುಣ್ಯೆಕ್ಷೇತ್ರ ಇದಾಗಿದೆ. ಇಲ್ಲಿಗೆ ಬರುವ ಭಕ್ತರೂ ಭಯಭಕ್ತಿ, ಶ್ರದ್ದೆಯಿಂದ ಶ್ರೀದೇವಿಯಲ್ಲಿ ಬೇಡಿಕೊಂಡು, ವರ ಪಡೆದುಕೊಳ್ಳಬೇಕು. ಮನಸ್ಸಿಟ್ಟು ಮಾಡಿದ ಕೆಲಸ, ಕಷ್ಟು ಪಟ್ಟು ದುಡಿದ ಹಣ, ಎಲ್ಲರೊಂದಿಗೆ ಹಂಚಿ ತಿನ್ನುವ ಗುಣ, ಭಕ್ತಿಯಿಂದ ಮಾಡುವ ದೇವರ ಆರಾಧನೆ, ಎಂದಿಗೂ ನಮ್ಮನ್ನು ಕೈ ಬಿಡುವುದಿಲ್ಲ ಎಂದರು.ಯಲ್ಲಮ್ಮಾ ದೇವಸ್ಥಾನ ಪ್ರಾಧಿಕಾರದ ಕಾರ್ಯದರ್ಶಿ ಎಸ್‌ಪಿಬಿ ಮಹೇಶ, ಯಲ್ಲಮ್ಮಾ ದೇವಸ್ಥಾನ ಪ್ರಾಧಿಕಾರದ ಉಪಕಾರ್ಯದರ್ಶಿ ನಾಗರತ್ನಾ ಚೋಳಿನ, ನಿವೃತ್ತ ದೇವಸ್ಥಾನ ಕಾರ್ಯನಿರ್ವಾಹಕ ಅಧಿಕಾರಿ ರವಿ ಕೋಟಾರಗಸ್ತಿ, ಸವದತ್ತಿ ಸಿಪಿಆಯ್ ಧರ್ಮಾಕರ ಧರ್ಮಟ್ಟಿ, ಅಲ್ಲಮಪ್ರಭು ಪ್ರಭುನವರ, ಸದಾನಂದ ಈಟಿ, ವ್ಹಿ ಆರ್ ನೀಲಗುಂದ, ಪಂಡಿತ ಯಡೂರಯ್ಯ, ಅರ್ಚಕ ಏಕನಗೌಡ ಮುದ್ದನಗೌಡ್ರ, ಪರಸನಗೌಡ ಕಾಳಿಂಗೌಡ್ರ, ಬಸನಗೌಡ ಪರಶಖುಷಿ ಹಾಗೂ ದೇವಸ್ಥಾನ ಸಿಬ್ಬಂದಿ ಇದ್ದರು.

## ಸ್ವಾವಲಂಬಿ ಬದುಕಿಗೆ ಆಸರೆಯಾದ ಗೃಹಲಕ್ಷ್ಮಿ



**ಬೆಳಗಾವಿ:** ಕುಕಡೊಳ್ಳಿ ಗ್ರಾಮದ ಮಹಿಳೆಯೊಬ್ಬರು ಗೃಹಲಕ್ಷ್ಮಿ ಹಣ ಕೂಡಿಟ್ಟು, ಮಿರ್ಚಿ ಮಿಕ್ಸರ್ ಮಷಿನ್ (ಖಾರದ ಗಿರಣಿ) ಖರೀದಿಸಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಭಾನುವಾರ ಮಷಿನ್ ಉದ್ಘಾಟಿಸಿ, ಮಹಿಳೆಯ ನೂತನ ಉದ್ಯಮಕ್ಕೆ ಶುಭ ಕೋರಿದರು.ತಾಯವ್ವ ಕ. ಲಕಮೋಜಿ ಎಂಬ ಮಹಿಳೆ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ 'ಗೃಹಲಕ್ಷ್ಮಿ' ಯೋಜನೆಯಿಂದ ಭವಿಷ್ಯ ಕಟ್ಟಿಕೊಳ್ಳಲು ಮುಂದಾದವರು. ಅವರ ಒತ್ತಾಸೆಯ ಮೇರೆಗೆ ಸಚಿವರು ಕುಕಡೊಳ್ಳಿಗೆ ತೆರಳಿ ನೂತನ ಯಂತ್ರ ಉದ್ಘಾಟಿಸಿದರು. ಲಕ್ಷಾಂತರ ಬಡ ಕುಟುಂಬಗಳ ಆರ್ಥಿಕ ಪರಿಸ್ಥಿತಿಯನ್ನು ಗೃಹಲಕ್ಷ್ಮೀ ಸುಧಾರಣೆಗೊಳಿಸಿದ್ದು, ಸಾಕಷ್ಟು ಬಡ ಕುಟುಂಬಗಳು ಗೃಹಲಕ್ಷ್ಮಿ ಯೋಜನೆಯ ಮೂಲಕ ಬದುಕು ಕಟ್ಟಿಕೊಂಡಿವೆ. ಯೋಜನೆಯ ಸಾರ್ಥಕತೆಗೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ ಎಂದು ಲಕ್ಷ್ಮೀ ಹೆಬ್ಬಾಳಕರ್ ಈ ಸಂದರ್ಭದಲ್ಲಿ ಪ್ರಶ್ನಿಸಿದರು.ಚನ್ನಬಸಯ್ಯ ಹಿರೇಮಠ್, ಬಸಯ್ಯ ಚಿಕ್ಕಮಠ್, ವೀರನಗೌಡ ಪಾಟೀಲ, ತಾಯಪ್ಪ ಮರಕಟ್ಟಿ, ಪುಂಡಲೀಕ ಬೈರೋಜಿ, ಕಲ್ಲಪ್ಪ ವಡ್ಡಿನ, ಪರಶುರಾಮ ಕುರುಬರ, ಅನ್ನಪೂರ್ಣ ಪಾಟೀಲ, ಗದಿಗೆಪ್ಪ ವಡ್ಡಿನ, ದೊಡ್ಡಪ್ಪ ದೇಶನೂರ್, ರಾಮಪ್ಪ ಕರವಿನಕೊಪ್ಪ,

# ನೆಲ್ಸನ್ ಚಿತ್ ಢಾವ್‌ನಲ್ಲಿ ಪಕ್ಷೇಕರು ಫಿದಾ..!

**ರಬಕವಿ-ಬನಹಟ್ಟಿ:** ಬನಹಟ್ಟಿಯ ಶ್ರೀ ಮಲ್ಲಿಕಾರ್ಜುನ ಜಾತ್ರೆ ನಿಮಿತ್ತ ಅನೇಕ ಜಗಜಟ್ಟಿಗಳ ನಡುವೆ ಅದ್ದೂರಿ ಜಂಗಿ ನಿಕಾಲಿ ಕುಸ್ತಿಗಳು ಜರುಗಿದವು, ಮಹಿಳೆಯರ ಕುಸ್ತಿಗಳು ಪ್ರೇಕ್ಷಕರಿಗೆ ರಸದೌತನ ನೀಡುವಲ್ಲಿ ಕಾರಣವಾಯಿತಲ್ಲದೆ ಕುಸ್ತಿ ವೀಕ್ಷಿಸಲು ಅನೇಕ ಗ್ರಾಮ ಮತ್ತು ಪಟ್ಟಣಗಳಿಂದ ಅಪಾರ ಪ್ರಮಾಣದ ಜನಸಾಗರ ಹರಿದು ಬಂದಿತ್ತು.

ರವಿವಾರ ಸಂಜೆ 4ಕ್ಕೆ ಬನಹಟ್ಟಿ ಸೋಮವಾರ ಸಮಸ್ತ ದೈವ ಮಂಡಳಿ ಚೇರಮನ್ ಮಲ್ಲಿಕಾರ್ಜುನ ತುಂಗಳ ಕುಸ್ತಿ ಮೈದಾನಕ್ಕೆ ಪೂಜೆ ಸಲ್ಲಿಸಿದರು. ಸೋಮವಾರ ಪೇಟೆ ಸಮಸ್ತ ದೈವ ಮಂಡಳ ಹಿರಿಯರಾದ ಮಲ್ಲಣ್ಣ ಬಾವಲತ್ತಿ ಕುಸ್ತಿಗೆ ಚಾಲನೆ ನೀಡಿದರು.

ಹೊಡಿ, ಎತ್ತ, ತಿರುವ ಹಾ.. ಉಕಾಡ್ ಹಾಕ್ಯಾನ್ರಿ.. ಟಾಂಗ್ ಜೋಡಿ ಒಳ ಟಾಂಗ್, ಹೊರ ಟಾಂಗ್, ದಿಸೆ ಜೋಡಿ ಚಿತ್ತ ಹಾಕ್ಯಾನ್ರೀ.... ಹೀಗೆ ಕುಸ್ತಿ ಶೈಲಿಯ ಮಾತುಗಳು ಫಲಿತಾಂಶ ನೀಡುವ ವಸ್ತಾದರನ್ನೂ ನಿಬ್ಬೆರಗು ಮಾಡುವಲ್ಲಿ ಕಾರಣವಾದವು.

ಮದಗಜಗಳಂತೆ ಹೋರಾಟ ನಡೆಸಿದ ಕುಸ್ತಿ ಪಟುಗಳು ಜನರ ಪ್ರೋತ್ಸಾಹಕ್ಕೆ, ಸಿಳ್ಳೆಯ ನೀನಾದಕ್ಕೆ ತಲೆ ದೂಗಿದರು. ಕುಸ್ತಿ ಗೆಲ್ಲಲು ನಡೆಸಿದ ವಿರೋಚಿತ ಹೋರಾಟ ಕುಸ್ತಿ ರಸಿಕರ ಮನ ತಣಿಸಿತು. ಅಪೇಕ್ಷಾ ಹಳಂಗಳಿ(ನೀಲಿ ಟೀ ಶರ್ಟ್)(ಗೆಲುವು)ಯನ್ನು ಖುಷಿ ಸಾವಳಗಿ(ಕೆಂಪು ಟೀ ಶರ್ಟ್) ಅವರು ಆರ್ಮ್‌ಡ್ ಡ್ರ್ಯಾಗ್ (ಒಳಕೈ ರೆಟ್ಟೆ ಹಿಡಿದು ಚಿತ್ ಢಾವ್ ಮಾಡುವದು) ಚಿತ್ ಡಾವ್ ಮಾಡಿ



ಸಿಂಧು ಹಳಿಂಗಳಿಯವರನ್ನು ಮಣಿಸುಲ್ಲಿ ಯಶಸ್ವಿಯಾದರು.

200 ಕ್ಕೂ ಹೆಚ್ಚು ಕುಸ್ತಿ ಪಟುಗಳು ವಿಭಿನ್ನ ರೀತಿಯಲ್ಲಿ ಟಾಂಗ್‌ಗಳನ್ನು ಹಾಕಿ ಕುಸ್ತಿಯಾಡಿ ನೆರೆದ ಜನರನ್ನು ರಂಜಿಸಿದರು. ಕುಸ್ತಿ ಆಡಿಸುವವರು ಅವರ ಗಮನಕ್ಕೆ ಬಾರದೇ ಅಚಾನಕ್ಕಾಗಿ ಏನಾದರೂ ತಪ್ಪುಗಳಾದರೇ ಸಾವಿರಾರು ಜನ ಕೇಕೆ ಹಾಕಿ ಕೆಲ ಕುಸ್ತಿ ಪಟುಗಳಿಗೆ ನ್ಯಾಯ ದೊರಕಿಸಿ ಕೊಡುವ ಕೆಲಸ ನಡೆದಿತ್ತು.

ಸಿದ್ಧನಗೌಡ ಪಾಟೀಲ, ಶ್ರೀಶೈಲ ದಭಾಡಿ ರಾಮಣ್ಣ ಭದ್ರನ್ನವರ, ಮಹಾಶಾಂತ ಶೆಟ್ಟಿ, ಸಿದ್ರಾಮಪ್ಪ ಸವದತ್ತಿ, ಶಂಕರ ಜಾಲಿಗಿಡದ, ಶಿವಾನಂದ ಬಾಗೇವಾಡಿ, ಕಿರಣ ಆಳಗಿ, ಮಲ್ಲಣ್ಣ ಕಕಮರಿ, ಮಲ್ಲಪ್ಪ ಜನವಾಡ, ಶ್ರೀಪಾದ ಬಾಣಕಾರ, ಪಂಡಿತ ಪಟ್ಟಣ, ಭೀಮಶಿ ಪಾಟೀಲ, ಗಂಗಪ್ಪ ಹಾದಿಮನಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

## ಕ್ರೀಡಾಪಟುಗಳಿಗೆ ಶಾಸಕರ ರಮೇಶ್ ಜಾರಕಿಹೊಳಿ ಸನ್ಮಾನ

**ಗೋಕಾಕ:** ಗೋಕಾಕ ಶೈಕ್ಷಣಿಕ ವಲಯದ ಸುಮಾರು 60 ವಿದ್ಯಾರ್ಥಿಗಳಿಗೆ ಸತ್ಕಾರ ಕಾರ್ಯಕ್ರಮ ಜರುಗಿಸಿ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವ ಕ್ರೀಡಾ ಪಟುಗಳಿಗೆ ಶಾಸಕರ ರಮೇಶ್ ಜಾರಕಿಹೊಳಿ ಅವರ ಗೃಹ ಕಚೇರಿಯಲ್ಲಿ ಉಪಹಾರ ಕೂಟ ಹಾಗೂ ಸತ್ಕಾರ ಸಮಾರಂಭ ಏರ್ಪಡಿಸಲಾಗಿತ್ತು.

ಗೋಕಾಕ ಶೈಕ್ಷಣಿಕ ವಲಯದ ಸುಮಾರು ಅರವತ್ತು ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾಗಿ ರಾಜ್ಯ ಮಟ್ಟಕ್ಕೆ ಆಯ್ಕೆ ಆಗಿದ್ದಾರೆ. ವಿದ್ಯಾರ್ಥಿಗಳಿಗೆ ರವಿವಾರದಂದು ನಡೆದ ಸಮಾರಂಭದಲ್ಲಿ ಸತ್ಕರಿಸಿ ಗೌರವಿಸುವ ಮೂಲಕ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಗೆಲುವು ಸಾಧಿಸಲು ಕಾರ್ಮಿಕ ಮುಖಂಡ ಅಂಬಿರಾವ ಪಾಟೀಲ ಹಾಗೂ ಗಣ್ಯರು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ತಹಶೀಲದಾರ ಡಾ. ಮೋಹನ ಭಸ್ಮೆ, ಜಿಪಂ ಮಾಜಿ ಸದಸ್ಯರಾದ ಟಿ ಆರ್ ಕಾಗಲ, ಎಮ್ ಎಲ್ ತೋಳಿನವರ, ಶಾಸಕರ ಆಪ್ತಸಹಾಯಕ ಭಿಮಗೌಡ ಪೋಲಿಸ್‌ಗೌಡರ, ಸುರೇಶ ಸನದಿ, ಕ್ಷೇತ್ರಶಿಕ್ಷಣಾಧಿಕಾರಿ ಜಿ ಬಿ ಬಳಗಾರ ಇದ್ದರು.



# ಡಿ.ದೇವರಾಜ ಅರಸು ಭವನ ಹಾಗೂ ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ ಕಟ್ಟಡ ಲೋಕಾರ್ಪಣೆ



ಗದಗ : ತಾಲೂಕ ಆಡಳಿತ, ತಾಲೂಕ ಪಂಚಾಯತ್,ತಾಲೂಕ ಹಿಂದುಳಿದ ಕಲ್ಲಾಣ ಇಲಾಖೆ ,ಇವರ ಸಂಯುಕ್ತ ಆಶ್ರಯದಲ್ಲಿ ಶೋಷಿತರ ಸಮಗ್ರ ಅಭಿವೃದ್ಧಿಯ ಸಾಮಾಜಿಕ ಕ್ರಾಂತಿಯ ಹರಿಕಾರ,ನೊಂದವರ ನಂದಾದೀಪ, ಸಾಧನೆಗಳ ಸರದಾರ,ಧೀಮಂತ ನಾಯಕ ಹಾಗೂ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ದಿ.ಡಿ.ದೇವರಾಜ ಅರಸು ಭವನ ಹಾಗೂ ಡಿ.ದೇವರಾಜ ಅರಸು ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯದ ಲೋಕಾರ್ಪಣೆಯಾಯಿತು.

ಗದಗಿನ ಸೂರ್ಯನಗರ ಡಾ.ಬಿ.ಆರ್. ಅಂಬೇಡ್ಕರ್ ಭವನದ ಹಿಂಭಾಗದಲ್ಲಿ ನಿರ್ಮಿಸಲಾದ ಕಟ್ಟಡವನ್ನು ರವಿವಾರ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಲೋಕಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಗದಗ ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರವಿ ಲಕ್ಷ್ಮಣ ಗುಂಜೀಕರ, ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಯ್ಯ ಕೊರವನವರ, ಗದಗ-ಬೆಟಗೇರಿ ನಗರಸಭೆ ಆಯುಕ್ತ ಮಹೇಶ ಪೊತದಾರ, ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಜಿ.ವಿ.ಶಿರೋಳ, ಹಿಂದುಳಿದ ವರ್ಗಗಳ ತಾಲೂಕ ಕಲ್ಯಾಣಾಧಿಕಾರಿ ಡಾ.ಬಸವರಾಜ ವ್ಹಿ ಬಳ್ಳಾರಿ ಇವರುಗಳು ಸೇರಿದಂತೆ ವಸತಿನಿಲಯದ ಮಕ್ಕಳು ಹಾಗೂ ಅಧಿಕಾರಿ ಸಿಬ್ಬಂದಿಗಳು ಹಾಜರಿದ್ದರು.

# ಹಲ್ಮಿಡಿ ಶಾಸನದ ಪ್ರತಿಕೃತಿ ಶಿಲಾನ್ಯಾಸ ಸ್ತಂಭ ಅನಾವರಣ




ಗದಗ : ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ನಿರ್ಮಿಸಿದ ಹಲ್ಮಿಡಿ ಶಾಸನದ ಪ್ರತಿಕೃತಿ ಶಿಲಾನ್ಯಾಸ ಸ್ತಂಭವನ್ನು ಶುಕ್ರವಾರ ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ. ಪಾಟೀಲ ಅವರು ಅನಾವರಣಗೊಳಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ನಗರಾಬಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕಬರಸಾಬ ಬಬರ್ಜಿ, ಜಿಲ್ಲಾಧಿಕಾರಿ ಗೋವಿಂದರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭರತ್ ಎಸ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಉಪರಣ್ಯ ಸಂರಕ್ಷಣಾಧಿಕಾರಿ ಲೇಖರಾಜ್ ಮೀನಾ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ತಾಲ್ಲೂಕು ಗ್ಯಾರಂಟಿ ಸಮೀತಿ ಅಧ್ಯಕ್ಷ ಅಶೋಕ ಮಂದಾಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ, ವಾರ್ತಾಧಿಕಾರಿ ವಸಂತ ಮಡ್ಲೂರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಗಣ್ಯರುಗಳು, ಉಪಸ್ಥಿತರಿದ್ದರು.

## ಚೂರು-ಪಾರು

### ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕೊಪ್ಪಳ ಪತ್ರಿಕೋದ್ಯಮ ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನ

ಕೊಪ್ಪಳ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪತ್ರಿಕೋದ್ಯಮ ಪದವೀಧರರಿಗೆ ಕೊಪ್ಪಳ ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ಮಾಧ್ಯಮ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು 12 ತಿಂಗಳ ಅವಧಿಯ ಅಪ್ರೆಂಟಿಸ್ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕದಲ್ಲಿ ಕಾನೂನಾತ್ಮಕವಾಗಿ ಸ್ಥಾಪಿತಗೊಂಡ ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿರಬೇಕು. ಕಂಪ್ಯೂಟರ್ ಜ್ಞಾನವಿರುವ ಕನ್ನಡ ಭಾಷೆ ಬಳಸಲು ಪ್ರಬುದ್ಧತೆ ಇರಬೇಕು. ಮೆರಿಟ್ ಹಾಗೂ ಸಂದರ್ಶನದ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ತರಬೇತಿ ಅವಧಿ ವೇಳೆ ಮಾಸಿಕ 15,000ರೂ.ಗಳ ತರಬೇತಿ ಭತ್ಯ ನೀಡಲಾಗುತ್ತದೆ. ಅವಧಿ ಒಂದು ವರ್ಷದ್ದಾಗಿದೆ (ಜನವರಿ 2025 ರಿಂದ ಡಿಸೆಂಬರ್ 2025). ಅಭ್ಯರ್ಥಿಗಳು 35ವರ್ಷದ ಒಳಗೆ ಇರಬೇಕು. ಆಸಕ್ತರು ಅರ್ಜಿಯನ್ನು ಇದೇ 2024ರ ನವೆಂಬರ್ 05 ರಿಂದ ನ.21 ರೊಳಗಾಗಿ ಸಹಾಯಕ ನಿರ್ದೇಶಕರ ಕಛೇರಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಜಿಲ್ಲಾಡಳಿತ ಭವನ ಕೊಪ್ಪಳ ಇಲ್ಲಿಗೆ ಸಲ್ಲಿಸಬಹುದಾಗಿದೆ.

ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದಾಗಿದೆ. ಅಥವಾ ದೂರವಾಣಿ ಸಂಖ್ಯೆ: 9480841245, 8277462995 ಹಾಗೂ 8150920986 ಗೆ ಸಂಪರ್ಕಿಸುವಂತೆ ಕೊಪ್ಪಳ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸುರೇಶ ಜಿ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಉಚಿತ ಕರಾಟೆ ತರಬೇತಿ ಶಿಬಿರ

ಕೊಪ್ಪಳ : ಕೊಪ್ಪಳ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ ಗುರುದೇವ ಕರಾಟೆ ಕ್ಲಾಸ್ ಹಾಗೂ ಭೂಮಿ ಕರಾಟೆ ಫೌಂಡೇಶನ್ ಇವರ ಸಂಯುಕ್ತಾಶ್ರಯದಲ್ಲಿ ಉಚಿತ ಕರಾಟೆ ತರಬೇತಿ ಶಿಬಿರವನ್ನು ನವೆಂಬರ 11ರಿಂದ 16ರವರಗೆ ಕೊಪ್ಪಳ ತಾಲೂಕು ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.


ತರಬೇತಿ ಶಿಬಿರದಲ್ಲಿ ಭಾಗವಹಿಸಲಿಚ್ಛಿಸುವ ಶಿಬಿರಾರ್ಥಿಗಳಿಗೆ ಯಾವುದೇ ವಯೋಮಿತಿ ಇರುವುದಿಲ್ಲ. ಮುಕ್ತ ಅವಕಾಶವಿದ್ದು, ಬಾಲಕೀಯರಿಗೆ ಪ್ರಾಧಾನ್ಯತೆ ನೀಡಲಾಗುವುದು. ಆಸಕ್ತರು ಆಧಾರ ಕಾರ್ಡ, ಭಾವಚಿತ್ರ ಸಹಿತ ನೊಂದಾಯಿಸಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ತರಬೇತುದಾರದ ರುಕ್ಕಿಣಿ ದೇವಪ್ಪ ಬಂಗಾಳಿಗಿಡದ ಮೊ.ಸಂ 7676736172, 7411802427 ಹಾಗೂ ಮೌನೇಶ ವಡ್ಡಟ್ಟಿ ಮೊ.ಸಂ 9900321239 ಗೆ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆ ತಿಳಿಸಿದ್ದಾರೆ.

### ಅರ್ಜಿ ಆಹ್ವಾನ

ಗದಗ : ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗ ಸಂಸ್ಥೆಯಾಗಿದ್ದು, ವಿಜ್ಞಾನ, ತಂತ್ರಜ್ಞಾನ, ಇಂಜನೀಯರಿಂಗ್ ಕೃಷಿ ಮತ್ತು ವೈದ್ಯಕೀಯ(ಸ್ಕೀಮ್) ವಿಷಯಗಳ ಸಂವಹನಕ್ಕೆ ದಿವ್ಯಾಂಗ ವ್ಯಕ್ತಿಯ ಅತ್ಯುತ್ತಮ ಪ್ರಯತ್ನಗಳನ್ನು ಗುರುತಿಸುವ ಉದ್ದೇಶದಿಂದ 2024-25 ನೇ ಸಾಲಿನ ಕೆ.ಎಸ್.ಟಿ.ಎ. ವಾರ್ಷಿಕ ಬಹುಮಾನ (ದಿವ್ಯಾಂಗ) ಕ್ಕೆ ಅರ್ಹರಿಂದ ಅರ್ಜಿ/ ನಾಮ ನಿರ್ದೇಶನಗಳನ್ನು ಆಹ್ವಾನಿಸಲಾಗಿದೆ. ಅರ್ಜಿ/ ನಾಮನಿರ್ದೇಶನವನ್ನು ಸಲ್ಲಿಸಲು ಜನವರಿ 28,2025 ಕೊನೆಯ ದಿನವಾಗಿರುತ್ತದೆ. ಆಯ್ಕೆಯಾದ ವ್ಯಕ್ತಿಗೆ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಗುವುದು.

ಹೆಚ್ಚಿನ ವಿವರಗಳಿಗಾಗಿ ಅಕಾಡೆಮಿಯ ವೆಬ್‌ಸೈಟ್ www.ksftacademy.in ನಲ್ಲಿ ಮಾರ್ಗಸೂಚಿಯನ್ನು ವೀಕ್ಷಿಸಿ, ನಿಗದಿತ ಅರ್ಜಿ ನಮೂನೆಯನ್ನು ಡೌನ್ ಲೋಡ್ ಮಾಡಿಕೊಂಡು ಅರ್ಜಿ ಸಲ್ಲಿಸಬಹುದಾಗಿದೆ.

### ಸರ್ಕಾರಿ ವಸ್ತು ಸಂಗ್ರಹಾಲಯದ ಒಳಾಂಗಣ ವಿನ್ಯಾಸ ಕಾಮಗಾರಿಯ ಭೂಮಿ ಪೂಜೆ ಹಾಗೂ ಶಿಲಾನ್ಯಾಸ



ಗದಗ : ಮೈಸೂರ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯಿಂದ ಗದಗಿನಲ್ಲಿನ ಸರ್ಕಾರಿ ವಸ್ತು ಸಂಗ್ರಹಾಲಯದ ಒಳಾಂಗಣ ವಿನ್ಯಾಸ ಕಾಮಗಾಲಿಯ ಭೂಮಿ ಪೂಜೆ ಹಾಗೂ ಶಿಲಾನ್ಯಾಸ ನೆರವೇರಿತು. ರೂ. 6.97 ಕೋಟಿ ವೆಚ್ಚದಲ್ಲಿ ಸರ್ಕಾರಿ ವಸ್ತು ಸಂಗ್ರಹಾಲಯದ ಒಳಾಂಗಣ ವಿನ್ಯಾಸ ಕಾಮಗಾಲರಿಯ ಭೂಮಿ ಪೂಜೆ ಹಾಗೂ ಶಿಲಾನ್ಯಾಸವನ್ನು ರವಿವಾರ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಮಾಡಿದರು.

ಈ ಸಂದರ್ಭದಲ್ಲಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ಶಾಸಕರಾದ ಸಲೀಂ ಅಹ್ಮದ, ಬಿ.ಬಿ.ಅಸೂಟಿ, ಸಿದ್ದು ಪಾಟೀಲ, ಅ.ದ. ಕಟ್ಟಿಮನಿ, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರಾದ ದೇವರಾಜ ಎ ಸೇರಿದಂತೆ ಹಲವರು ಹಾಜರಿದ್ದರು.

## 69ನೇ ಕರ್ನಾಟಕ ರಾಜ್ಯೋತ್ಸವ: ಜಿಲ್ಲಾ ಉಸ್ತುವಾರಿ ಸಚಿವರಿಂದ ರಾಷ್ಟ್ರ ಧ್ವಜಾರೋಹಣ

# ಕನ್ನಡ ನಾಡು ನುಡಿ ಸೇವೆಗೆ ಸದಾಕಾಲ ಬದ್ಧರಾಗಿದ್ದೇವೆ- ಸಚಿವ ಶಿವರಾಜ ತಂಗಡಗಿ



ಕೊಪ್ಪಳ : ನಮ್ಮ ಸರ್ಕಾರವು ಕನ್ನಡ ನಾಡು ನುಡಿ ಸೇವೆಗೆ ಸದಾಕಾಲ ಬದ್ಧವಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ತಂಗಡಗಿ ಶಿವರಾಜ ಸಂಗಪ್ಪ ಹೇಳಿದರು.

ಅವರು ಕೊಪ್ಪಳ ಜಿಲ್ಲಾಡಳಿತದ ವತಿಯಿಂದ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 69ನೇ ಕರ್ನಾಟಕ ರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು. ಕರ್ನಾಟಕ ರಾಜ್ಯವು ಏಕೀಕರಣವಾಗಿ 68 ವರ್ಷಗಳು ಪೂರ್ಣಗೊಂಡಿರುವ ಈ ಶುಭ ಸಂದರ್ಭದಲ್ಲಿ ನಾಡಿನಾದ್ಯಂತ ಎಲ್ಲಾ ಕಡೆ ಸುಖ-ಶಾಂತಿ, ನೆಮ್ಮದಿ ನೆಲೆಸುವಂತಾಗಲಿ ಎಂದು ನಾಡದೇವತೆ ತಾಯಿ ಭುವನೇಶ್ವರಿಯಲ್ಲಿ ನಾನು ಪ್ರಾರ್ಥಿಸುತ್ತೇನೆ.

ಆಲೂರು ವೆಂಕಟರಾವ್ ಅವರು 1905ರಲ್ಲಿಯೇ ಕರ್ನಾಟಕ ಏಕೀಕರಣ ಚಳುವಳಿಯೊಂದಿಗೆ ರಾಜ್ಯವನ್ನು ಏಕೀಕರಿಸುವ ಕನಸನ್ನು ಕಂಡ ಮೊದಲ ವ್ಯಕ್ತಿಯಾಗಿದ್ದರು. ಬ್ರಿಟಿಷರ ಅಧಿಕಾರದ ಅವಧಿಯಲ್ಲಿ ಹರಿದು ಹಂಚಿ ಹೋಗಿದ್ದ ಕರ್ನಾಟಕವನ್ನು ಏಕೀಕರಣ ಚಳವಳಿ ಮೂಲಕ ಹಲವು ವರ್ಷಗಳವರೆಗೆ ನಿರಂತರ ಹೋರಾಟದ ಪ್ರತಿಫಲವಾಗಿ 1956ರ ನವೆಂಬರ್ 01 ರಂದು ನಮ್ಮ ರಾಜ್ಯ ಉದಯವಾಯಿತು. ರಾಜ್ಯದ ಪ್ರಗತಿಗೆ ಭದ್ರ ಬುನಾದಿ ಹಾಕಿದ ಅಂದಿನ ಮುಖ್ಯಮಂತ್ರಿಗಳಾದ ದಿ. ಡಿ.ದೇವರಾಜ ಅರಸುರವರ ಗಟ್ಟಿ ನಿರ್ಧಾರದಿಂದ 1973ರ ನವೆಂಬರ್ 01 ರಂದು ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಮರು ನಾಮಕರಣ ಮಾಡಿದರು.

ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ ಅನೇಕ ಮಹನೀಯರಲ್ಲಿ ಸಾಹಿತಿಗಳಾದ ಬಿ.ಎಂ.ಶ್ರೀಕಂಠಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕುವೆಂಪು, ಕೆ.ಶಿವರಾಂ ಕಾರಂತರು, ದ.ರಾ.ಬೇಂದ್ರೆಯವರು ಹಾಗೂ ಕೆ.ಎನ್ ಕೃಷ್ಣರಾವ್ ಮತ್ತು ಇನ್ನೂ ಹಲವು ಮಹನೀಯರನ್ನು ಈ ಸಂದರ್ಭದಲ್ಲಿ ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಕೊಪ್ಪಳ ಜಿಲ್ಲೆಯ ಪಾತ್ರವೂ ಅಷ್ಟೇ ಪ್ರಮುಖವಾದುದಾಗಿದೆ. ಕೊಪ್ಪಳ ಜಿಲ್ಲೆಯ ಅಳವಂಡಿ ಶಿವಮೂರ್ತಿಸ್ವಾಮಿ, ಶಿರೂರು ವೀರಭದ್ರಪ್ಪ ತೆಗ್ಗಿನಮನಿ, ಶಂಕರಗೌಡ್ರು, ಪ್ರಭುರಾಜ ಪಾಟೀಲ್ ಸಂಗನಾಳ, ಪಂಚಾಕ್ಷರಿ ಹಿರೇಮಠ, ಸೋಮಪ್ಪ ಡಂಬಳ, ದೇವೇಂದ್ರಕುಮಾರ ಹಕಾರಿ, ಭೀಮನಗೌಡ ಪಾಟೀಲ್, ಹನುಮರಡ್ಡಿ ಕಲ್ಲುಗಿಡಿ, ಪಂಚಪ್ಪ ಶೆಟ್ಟರು, ಹಂಜಿ ಕೊಟ್ರಪ್ಪ, ಮುಂತಾದವರು ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ್ದನ್ನು ಈ ಮಹನೀಯರನ್ನು ಸ್ಮರಿಸಲೇಬೇಕೆಂದು ಹೇಳಿದರು.

ರಾಷ್ಟ್ರಕವಿ ಕುವೆಂಪು ಅವರು ಹೇಳುವಂತೆ ಕರ್ನಾಟಕವು ಸರ್ವ ಜನಾಂಗದ ಶಾಂತಿಯ ತೋಟವಾಗಿದ್ದು, ವಿವಿಧತೆಯಲ್ಲಿ ಏಕತೆ ನೆಲೆಸಿದೆ. ಕನ್ನಡನಾಡು ಸಂಪನ್ಮೂಲ ಹಾಗೂ ಸಂಸ್ಕೃತಿಯಿಂದ ಶ್ರೀಮಂತವಾಗಿದೆ. ಆದಿ ಕವಿ ವಾಲ್ಮೀಕಿಯಿಂದ ಆರಂಭವಾಗಿ ಪಂಪ, ರನ್ನ ಮೊದಲಾದ ಕವಿಗಳು ತಮ್ಮ ಕಾವ್ಯದಲ್ಲಿ ಕನ್ನಡ ನಾಡು ನುಡಿಯ ಬಗ್ಗೆ ಮನದುಂಬಿ ಹೊಗಳಿದ್ದಾರೆ ಎಂದರು.

2024ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯು ಕೊಪ್ಪಳ ಜಿಲ್ಲೆಯ ಇಬ್ಬರಿಗೆ ಲಭಿಸಿದ್ದು, ಸಾಹಿತ್ಯ ಕ್ಷೇತ್ರದಿಂದ ಹಿರಿಯ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಹಾಗೂ ಮಾಧ್ಯಮ ಕ್ಷೇತ್ರದಿಂದ ಎ.ಜಿ.ಕಾರಟಗಿ ಅವರಿಗೆ ಈ ಪ್ರಶಸ್ತಿ ಸಿಕ್ಕಿದೆ ಮತ್ತು ಕರ್ನಾಟಕ ಸಂಭ್ರಮ-50ರ ಸುವರ್ಣ ಸಂಭ್ರಮ ಪ್ರಶಸ್ತಿ ಕೊಪ್ಪಳ ಜಿಲ್ಲೆಯ ಮೂರು ಜನರಿಗೆ ಲಭಿಸಿದ್ದು, ವೈದ್ಯಕೀಯ ಕ್ಷೇತ್ರದಿಂದ ಡಾ.ಚಂದ್ರಪ್ಪ, ಸಾಹಿತ್ಯ ಕ್ಷೇತ್ರದಿಂದ ಡಾ ಬಿ.ವಿ.ಶಿರೂರ ಹಾಗೂ ಚಿತ್ರಕಲೆ ಕ್ಷೇತ್ರದಿಂದ ರುಕ್ಮಿಣಿ ಬಾಯಿ ಅವರು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಈ ಎಲ್ಲಾ ಸಾಧಕರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆಂದು ಸಚಿವರು ಹೇಳಿದರು.

ಕನ್ನಡ ಭಾಷೆಯಲ್ಲಿ ತಂತ್ರಜ್ಞಾನದ ಅಭಿವೃದ್ಧಿಗೆ ನಮ್ಮ ಸರಕಾರವು ಹೆಚ್ಚಿನ ಒತ್ತು ನೀಡಿದೆ. ಕನ್ನಡವನ್ನು ಕನ್ನಡಿಗರೆಲ್ಲರು ಮಾತನಾಡಿದಾಗ ಮತ್ತು ಬಳಸಿದಾಗ ಮಾತ್ರ ಕನ್ನಡದ ಬೆಳವಣಿಗೆ ಸಾಧ್ಯವಿದೆ. ಕನ್ನಡದ ಲಿಪಿಯನ್ನು ಮುಂದಿನ ಜನಾಂಗಕ್ಕೂ ಬರೆಯಲು ಕಲಿಸಿದಾಗ ಮಾತ್ರ ಈ ಭಾಷೆಯನ್ನು ಉಳಿಸಿ, ಬೆಳಸಿಕೊಂಡು ಹೋಗಲು ಸಾಧ್ಯವಾಗುತ್ತದೆ. ನಮ್ಮ ರಾಜ್ಯ ಸರ್ಕಾರವು ಕನ್ನಡ ನಾಡು ನುಡಿ ಸೇವೆಗೆ ಸದಾಕಾಲ ಬದ್ಧವಾಗಿದೆ ಎಂದರು.

ಮುಖ್ಯ ಮಂತ್ರಿಗಳು ಕರ್ನಾಟಕ ಸಂಭ್ರಮ-50ರ ನಿಮಿತ್ಯವಾಗಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಹಲ್ಮಿಡಿ ಶಾಸನದ ಪ್ರತಿಕೃತಿಯನ್ನು ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲಿ ನವೆಂಬರ್ 01 2024ರಂದು ಪ್ರತಿಷ್ಠಾಪಿಸಲು ಸೂಚಿಸಿದ್ದು, ಅದರಂತೆ ಕೊಪ್ಪಳ ಜಿಲ್ಲೆಯಲ್ಲಿ ಈ ದಿನ ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲಿ ಕರ್ನಾಟಕದ ಸಾಹಿತ್ಯ ಪರಂಪರೆಯನ್ನು ಬಿಂಬಿಸುವ ಹಾಗೂ ಕನ್ನಡದ ಮೊಟ್ಟಮೊದಲ ಶಾಸನವಾದ "ಹಲ್ಮಿಡಿ ಶಾಸನದ" ಪ್ರತಿಕೃತಿಯನ್ನು ಪ್ರತಿಷ್ಠಾಪಿಸಲಾಯಿತು ಎಂದು ತಿಳಿಸಿದರು.

ಜಿಲ್ಲೆಯ ಪ್ರವಾಸಿ ತಾಣಗಳ ಕಿರು ಕೈಪಿಡಿ ಬಿಡುಗಡೆ: ಪ್ರವಾಸೋದ್ಯಮ ಇಲಾಖೆಯಿಂದ ಸಿದ್ದಪಡಿಸಿದ ಕೊಪ್ಪಳ ಜಿಲ್ಲೆಯ ಪ್ರವಾಸಿ ತಾಣಗಳ ಮಾಹಿತಿಯನ್ನೊಳಗೊಂಡ ಕಿರು ಕೈಪಿಡಿಯನ್ನು ಸಚಿವರು, ಸಂಸದರು ಸೇರಿದಂತೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಇದೇ ಸಂದರ್ಭದಲ್ಲಿ ಬಿಡುಗಡೆಗೊಳಿಸಿದರು

ಸಾಂಸ್ಕೃತಿಕ ಕಾರ್ಯಕ್ರಮ, ಬಹುಮಾನ ವಿತರಣೆ ಹಾಗೂ ಸನ್ಮಾನ: ರಾಜ್ಯೋತ್ಸವದ ನಿಮಿತ್ತ ಭಾಗ್ಯನಗರದ ನವಚೇತನ ಪಿಯು ಕಾಲೇಜು ಹಾಗೂ ಕೊಪ್ಪಳದ ಬಾಲಕಿಯರ ಪದವಿ ಕಾಲೇಜಿನ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿಗಳಿಂದ ಕನ್ನಡ ಗೀತೆಗಳಿಗೆ ನೃತ್ಯ ಮಾಡಿದರು. ಪಥಸಂಚಲನದಲ್ಲಿ ವಿಜೇತರಾದ ತಂಡಗಳಿಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಮಕ್ಕಳಿಗೆ ಬಹುಮಾನ ನೀಡಲಾಯಿತು. ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿ, ಜಿಲ್ಲೆಗೆ ಹೆಸರು ತಂದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಕೊಪ್ಪಳ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ, ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ ಗುಪ್ತಾ, ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ಧಿ, ಕೊಪ್ಪಳ ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಾವ್ಯ ಚತುರ್ವೇದಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೇಮಂತ್ ಕುಮಾರ್, ಕೊಪ್ಪಳ ತಹಶಿಲ್ದಾರ ವಿಠ್ಠಲ ಚೌಗಲಾ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು, ಸಿಬ್ಬಂದಿ ಮತ್ತು ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಮೆರವಣಿಗೆ: 69ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ ನಿಮಿತ್ತ ಬೆಳಿಗ್ಗೆ ಕೊಪ್ಪಳ ತಹಶೀಲ್ದಾರ ಕಚೇರಿಯಿಂದ ಜಿಲ್ಲಾ ಕ್ರೀಡಾಂಗಣದ ವರೆಗೆ ಹಮ್ಮಿಕೊಂಡ ನಾಡ ದೇವತೆ ತಾಯಿ ಭುವನೇಶ್ವರಿ ದೇವಿಯ ಭಾವಚಿತ್ರದ ಮೆರವಣಿಗೆಗೆ ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ಅವರು ಭುವನೇಶ್ವರಿ ದೇವಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ಧಿ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಕೊಪ್ಪಳ ತಹಶಿಲ್ದಾರ ವಿಠ್ಠಲ ಚೌಗಲಾ, ತಾ.ಪಂ ಇಓ ದುಂಡಪ್ಪ ತುರಾದಿ, ನಗರಸಭೆ ಪೌರಾಯುಕ್ತ ಗಣಪತಿ ಪಾಟೀಲ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

# ಕರ್ನಾಟಕ ಸಂಭ್ರಮ ಸಮಾರೋಪ ನಿಮಿತ್ಯ ಸಂಗೀತ ಕಚೇರಿ ಐತಿಹಾಸಿಕ ಅರ್ಥಪೂರ್ಣ ಕರ್ನಾಟಕ ಸಂಭ್ರಮ ಸಮಾರಂಭ : ಸಚಿವ ಎಚ್.ಕೆ.ಪಾಟೀಲ



ಗದಗ : ಹುಯಿಲಗೋಳ ನಾರಾಯಣರ ಉದಯವಾಗಲಿ ಚಲುವ ಕನ್ನಡ ನಾಡು ಗೀತೆಯು ಕರ್ನಾಟಕ ಏಕೀಕರಣಕ್ಕೆ ಸ್ಪೂರ್ತಿ ಗೀತೆಯಾಗಿತ್ತು ಎಂದು ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ಹೇಳಿದರು.

ನಗರದ ಐತಿಹಾಸಿಕ ವೀರನಾರಾಯಣ ದೇವಸ್ಥಾನದಲ್ಲಿ ರವಿವಾರ ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಆಯೋಜಿಸಲಾಗಿದ್ದ ಕರ್ನಾಟಕ ಸಂಭ್ರಮ ಸಮಾರೋಪ ನಿಮಿತ್ಯ ಸಂಗೀತ ಕಚೇರಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬೆಳಗಾವಿಯಲ್ಲಿ 1924 ಡಿಸೆಂಬರ್ 26 ರಂದು ಮಹಾತ್ಮ ಗಾಂಧೀಜಿಯವರು ಎಐಸಿಸಿ ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಗಂಗೂಬಾಯಿ ಹಾನಗಲ್ ಅವರು ಉದಯವಾಗಲಿ ಚಲುವ ಕನ್ನಡ ನಾಡು ಗೀತೆಯನ್ನು ಹಾಡಿದ್ದರು ಎಂಬುದು ನಮ್ಮೆಲ್ಲರಿಗೂ ಅಭಿಮಾನ ಹೆಮ್ಮೆ ಎಂದರು.

ಗದುಗಿನ ಇತಿಹಾಸದಲ್ಲಿ ಕರ್ನಾಟಕ ಸಂಭ್ರಮ-50 ಐತಿಹಾಸಿಕ ಮೈಲಿಗಲ್ಲು. ಕನ್ನಡ ಭಾಷೆಯನ್ನಾಡುವ ಕನ್ನಡಿಗರು ಒಂದೇ ರಾಜ್ಯದ ಆಳ್ವಿಕೆಯಲ್ಲಿ ಒಂದಾಗಬೇಕು ಎನ್ನುವ ಆಶಯದಂತೆ ನವಂಬರ್-1, 1956 ರಂದು ಕರ್ನಾಟಕ ಏಕೀಕರಣವಾಯಿತು.

ಗದುಗಿನ ಕಾಟನ್ ಸೇಲ್ ಸೊಸೈಟಿಯಲ್ಲಿ ದಿನಾಂಕ: 27, 28 ಮತ್ತು 29ರ ಡಿಸೆಂಬರ್ 1961 ರಲ್ಲಿ ಜರುಗಿದ 43ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಕೆ. ಜಿ. ಕುಂದಣಗಾರ ಮತ್ತು ಸ್ವಾಗತ ಸಮಿತಿಯ ಅಧ್ಯಕ್ಷರಾದ ಕೆ. ಎಚ್. ಪಾಟೀಲ ಅವರ ಆಶಯದಂತೆ ಮೈಸೂರು ರಾಜ್ಯಕ್ಕೆ ಕರ್ನಾಟಕ ರಾಜ್ಯವೆಂದು ನಾಮಕರಣವಾಗಲಿ ಎಂದು ಸಮ್ಮೇಳನದಲ್ಲಿ ನಿರ್ಣಯ ಕೈಗೊಳ್ಳಲಾಯಿತು. ನಂತರ ಹೋರಾಟದ ಫಲವಾಗಿ 1973 ನವಂಬರ್ 01 ರಂದು ಮೈಸೂರು ರಾಜ್ಯ 'ಕರ್ನಾಟಕ' ಎಂದು ನಾಮಕರಣವಾಯಿತು ಎಂದು ತಿಳಿಸಿದರು. ನಾಮಕರಣ ಕರ್ನಾಟಕ ಸಂಭ್ರಮಾಚರಣೆಯನ್ನು ಗದುಗಿನಲ್ಲಿ 1973ರ ನವಂಬರ್-03 ರಂದು ಹಂಪೆಯ ವಿರುಪಾಕ್ಷೇಶ್ವರ ದೇವಾಲಯದಲ್ಲಿ ಪ್ರಜ್ವಲಿಸಿದ ಕನ್ನಡ ಜ್ಯೋತಿಯನ್ನು ಗದುಗಿನ ವೀರನಾರಾಯಣ ದೇವಸ್ಥಾನದಲ್ಲಿ ಸ್ವೀಕರಿಸಿದ ಅಂದಿನ ಮುಖ್ಯಮಂತ್ರಿ ದೇವರಾಜ ಅರಸ, ಮೈಸೂರಿನ ಅರಸರಾದ ಜಯಚಾಮರಾಜೇಂದ್ರ ಒಡೆಯರ ಹಾಗೂ ಅರಣ್ಯ ಮತ್ತು ಕೃಷಿ ಸಚಿವರಾದ ಕೆ. ಎಚ್. ಪಾಟೀಲ, ಪೌರಾಡಳಿತ ಸಚಿವರಾದ ಡಿ. ಕೆ. ನಾಯ್ಕರ, ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ದೇವೇಂದ್ರಪ್ಪ ಗಾಳಪ್ಪ ಹಾಗೂ ಕನ್ನಡಾಭಿಮಾನಿಗಳು ವೀರನಾರಾಯಣ ದೇವಸ್ಥಾನದಿಂದ ಕಾಟನ್ ಸೇಲ್ ಸೊಸೈಟಿಯವರೆಗೆ ಮೆರವಣಿಗೆ ಮೂಲಕ ಬಂದು ಸಾರ್ವಜನಿಕ ಸಭೆ ನಡೆಸಿ ಕರ್ನಾಟಕ ನಾಮಕರಣ ಮಹೋತ್ಸವವನ್ನು ಸಂಭ್ರಮಿಸಿದ್ದು ಇತಿಹಾಸದಲ್ಲಿ ದಾಖಲಾರ್ಹ ಎಂದು ನುಡಿದರು.

1973 ನವಂಬರ್ 01, 02 ಮತ್ತು 03 ರಂದು ಜರುಗಿದ ಕರ್ನಾಟಕ ನಾಮಕರಣ ಮಹೋತ್ಸವವನ್ನು ಮರುಸೃಷ್ಟಿಸಿ, 2023ರ ನವಂಬರ್ 01, 02 ಮತ್ತು 03 ರಂದು ಮೂರು ದಿನಗಳ ಕಾಲ ಗದಗನಲ್ಲಿ ಗತವೈಭವ ಮರುಕಳಿಸುವ ಐತಿಹಾಸಿಕ ಕಾರ್ಯಕ್ರಮಕ್ಕೆ ತಾವೆಲ್ಲ ಸಾಕ್ಷಿಯಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸೇರಿದಂತೆ ಸಚಿವ ಸಂಪುಟದ 20ಕ್ಕೂ ಹೆಚ್ಚು ಸಚಿವರು ಕನ್ನಡಾಭಿಮಾನಿಗಳು ಕರ್ನಾಟಕ ಸಂಭ್ರಮ-50ರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನಾಮಕರಣ ಮಹೋತ್ಸವದ ಇತಿಹಾಸವನ್ನು ಮೆಲುಕು ಹಾಕಿದರು. ಇಂದು 'ಕರ್ನಾಟಕ ಸಂಭ್ರಮ- 50' ಒಂದು ವರ್ಷದ ಸಂಭ್ರಮಾಚರಣೆಯ ಸಮಾರೋಪ ಸಮಾರಂಭವಾಗಿದ್ದು, ಕನ್ನಡ ನಾಡು-ನುಡಿಯ ಅಭಿಮಾನ ಬೆಳೆಸಲು ಕರ್ನಾಟಕ ರಾಜ್ಯೋತ್ಸವದ ಈ ಸಂದರ್ಭ ಔಚಿತ್ಯಪೂರ್ಣವಾಗಿದೆ ಎಂದು ಸಚಿವ ಡಾ. ಎಚ್.ಕೆ. ಪಾಟೀಲ ಹೇಳಿದರು. ಲಕ್ಕುಂಡಿಂಯಲ್ಲಿನ 20 ದೇವಸ್ಥಾನಗಳನ್ನು ಸರ್ಕಾರ ಗುರುತಿಸಿ ಸಂರಕ್ಷಣೆಗೆ ಮುಂದಾಗಲಿದೆ ಈ ಮೂಲಕ ನಮ್ಮ ಐತಿಹಾಸಿಕ ಸ್ಮಾರಕಗಳು ಹಾಗೂ ಪರಂಪರೆಯನ್ನು ಯುವ ಜನತೆಗೆ ಪರಿಯಚಿಸುವ, ತಿಳಿಸಿಕೊಡುವ ಪ್ರಯತ್ನಸಾಗಿದೆ ಎಂದರು. ಖ್ಯಾತ ಗಾಯಕರಾದ ಶ್ರೀಮತಿ ಉಷಾ ಕಾರಂತ, ನಾಗರಾಜ್ ಹಿರೇಕೊಳಚಿ ಹಾಗೂ ಸಂಗಮೇಶ್ ಕಲಬುರ್ಗಿ ಅವರುಗಳು ಸಂಗೀತ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಹಾಗೂ ಅರ್ಥಪೂರ್ಣವಾಗಿ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸಭಾಧ್ಯಕ್ಷ ಬಸವರಾಜ ಹೊರಟ್ಟಿ, ಸರ್ಕಾರಿ ಮುಖ್ಯ ಸಚೇತಕ ಹಾಗೂ ಶಾಸಕ ಸಲೀಂ ಅಮ್ಮದ್, ಮಾಜಿ ಸಂಸದ ಐಜಿ ಸನದಿ, ಮಾಜಿ ಶಾಸಕರಾದ ಡಿ ಆರ್ ಪಾಟೀಲ, ಗುರಣ್ಣ ಬಳಗಾನೂರ, ಎಂ ಸಿ ಶೇಖ, ರವಿ ಮೂಲಿಮನಿ, ವೀರನಾರಾಯಣ ತ್ರಿಕೋಟೇಶ್ವರ ದೇವಸ್ಥಾನ ಹಾಗೂ ಜುಮ್ಮಾಮಸಿದಿ ಸಮಿತಿಯ ಅಧ್ಯಕ್ಷರಾದ ಕೆ. ಡಿ ಗೋಡಕಿಂಡಿ, ಕಾರ್ಯದರ್ಶಿ ಆನಂದ್ ಪೋತ್ನಿಸ್, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಬಿಬಿ ಅಸೋಟಿ, ತಾಲೂಕ ಅಧ್ಯಕ್ಷ ಅಶೋಕ ಮಂದಾಲಿ, ಎಸ್ ಎನ್ ಬಳ್ಳಾರಿ, ಸಿದ್ದು ಪಾಟೀಲ, ಎಂ ಆರ್ ಪಾಟೀಲ, ಪ್ರಭು ಬುರಬುರೆ, ಸುಜಾತ ದೊಡ್ಡಮನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ ಎಸ್ ನೇಮಗೌಡ, ಪುರಾತತ್ವ ಇಲಾಖೆ ಆಯುಕ್ತ ದೇವರಾಜ್ ಸೇರಿದಂತೆ ಇತರೆ ಅಧಿಕಾರಿಗಳು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಮಕ್ಕಳಿಗೆ ಯಾವ ವಯಸ್ಸಿಗೆ ಎಷ್ಟು ಬಾದಾಮಿ ಕೊಡಬೇಕು? ಅತಿಯಾಗಿ ತಿನ್ನಲು ಕೊಟ್ಟರೆ ಏನಾಗುತ್ತದೆ, ಇಲ್ಲಿದೆ ನೋಡಿ ಡಿಟೇಲ್ಸ್



ಅಮೃತವು ವಿಷವಾಗುವುದು ಎನ್ನುವ ಮಾತೇ ಇದೆ. ಅದೇ ರೀತಿಯಲ್ಲಿ ಆಹಾರದಲ್ಲಿ ಎಷ್ಟೇ ಪೋಷಕಾಂಶಗಳು ಇದ್ದರೂ ಅದನ್ನು ಮಿತವಾಗಿ ಸೇವನೆ ಮಾಡಿದರೆ ಒಳ್ಳೆಯದು. ಅತಿಯಾಗಿ ಸೇವಿಸಿದರೆ, ಆಗ ಇದರಿಂದ ಖಂಡಿತವಾಗಿಯೂ ವ್ಯತಿರಿಕ್ತ ಪರಿಣಾಮ ಬೀರುವುದು ಹಾಗೂ ಆರೋಗ್ಯದ ಮೇಲೆ ಪರಿಣಾಮ ಉಂಟಾಗಬಹುದು.

ಒಣ ಹಣ್ಣು ಹಾಗೂ ಬೀಜಗಳಲ್ಲಿ ಇರುವಂತಹ ಪೋಷಕಾಂಶಗಳು ಅಪಾರ. ಅದನ್ನು ನೀವು ನಿತ್ಯದ ಆಹಾರ ಕ್ರಮದಲ್ಲಿ ಬಳಸಿಕೊಂಡರೆ, ಆಗ ಖಂಡಿತವಾಗಿಯೂ ಆರೋಗ್ಯ ಕಾಪಾಡಿಕೊಳ್ಳಬಹುದು. ಅದರಲ್ಲೂ ಬಾದಾಮಿಯು ನಿಮ್ಮ ಆರೋಗ್ಯಕ್ಕೆ ಹೇಳಿ ಮಾಡಿಸಿದಂತಿದೆ. ಇದರಲ್ಲಿನ ಪೋಷಕಾಂಶಗಳು ನಿಮ್ಮ ದೇಹಕ್ಕೆ ಹಲವಾರು ರೀತಿಯಿಂದ ನೆರವಾಗುವುದು. ಅದರಲ್ಲೂ ಮಕ್ಕಳ ಆರೋಗ್ಯ ಹಾಗೂ ಬುದ್ಧಿಶಕ್ತಿ ಹೆಚ್ಚಿಸಲು ಬಾದಾಮಿ ಸೇವನೆ ಅಗತ್ಯ. ಬಾದಾಮಿಯಲ್ಲಿ ವಿಟಮಿನ್ ಇ ಸಮೃದ್ಧವಾಗಿದೆ ಹಾಗೂ ಇದು ಫ್ರೀ ರ್ಯಾಡಿಕಲ್ ನ್ನು ತಟಸ್ಥಗೊಳಿಸುವುದು ಹಾಗೂ ಜೀವಕೋಶಗಳಿಗೆ ರಕ್ಷಣೆ ಒದಗಿಸುವುದು.

ಅದೇ ರೀತಿಯಾಗಿ ಇದರಲ್ಲಿ ವಿಟಮಿನ್ ಇ ಅಂಶವು ಪ್ರತಿರೋಧಕ ಶಕ್ತಿ ವೃದ್ಧಿ ಮಾಡುವ ಜತೆಗೆ ಹೃದಯದಲ್ಲಿ ರಕ್ತ ಹೆಪ್ಪುಗಟ್ಟುವಿಕೆ ಸಮಸ್ಯೆಯನ್ನು ದೂರ ಮಾಡಲು ಸಹಕಾರಿ ಆಗಿದೆ. ಇಷ್ಟೆಲ್ಲಾ ಪ್ರಯೋಜಗಳು ಬಾದಾಮಿಯಿಂದ ಸಿಗುತ್ತಲಿದ್ದರೂ ಅದನ್ನು ಎಷ್ಟು ಪ್ರಮಾಣದಲ್ಲಿ ಸೇವನೆ ಮಾಡಬೇಕು ಎನ್ನುವ ಗೊಂದಲವೂ ಇದ್ದೇ ಇದೆ. ಅದರಲ್ಲೂ ಮಕ್ಕಳಿಗೆ ಎಷ್ಟು ಬಾದಾಮಿ ನೀಡಬೇಕು ಎಂದು ತಿಳಿಯುವುದು ಅಗತ್ಯ. ಬಾದಾಮಿಯು ಮಗುವಿನ ಪೌಷ್ಟಿಕಾಂಶದ ಆಹಾರದ ಅವಿಭಾಜ್ಯ ಅಂಗವಾಗಿದ್ದರೂ, ಈ ಬಗ್ಗೆ ಪೋಷಕರಿಗೆ ಕೆಲವೊಂದು ವಿಚಾರಗಳು ಗೊತ್ತಿರಬೇಕು ಎಂದು ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯ ಮದರ್‌ಹುಡ್ ಹಾಸ್ಪಿಟಲ್ಸ್‌ನ ಕನ್ಸಲ್ಟೆಂಟ್ ಡಯೆಟಿಷಿಯನ್ ರೀನು ದುಬೆ ಅವರು ಸಲಹೆ ನೀಡುತ್ತಾರೆ. ಇವರ ಪ್ರಕಾರ ಒಂದು ದಿನದಲ್ಲಿ ಮಗು ತಿನ್ನಬಹುದಾದ ಬಾದಾಮಿಯ ಸೂಕ್ತ ಪ್ರಮಾಣವು ಮಗುವಿನ ವಯಸ್ಸು, ಒಟ್ಟಾರೆ ಆಹಾರಕ್ರಮ ಮತ್ತು ಯಾವುದೇ ನಿರ್ದಿಷ್ಟ ಆರೋಗ್ಯ ಪರಿಸ್ಥಿತಿಗಳ ಮೇಲೆ ಅವಲಂಬಿತವಾಗಿರುತ್ತದೆ.

**ಬಾದಾಮಿ ತಿನ್ನಲು ಮಕ್ಕಳಿಗೆ ಸಲಹೆಗಳು**

ಎಲ್ಲರ ದೇಹ ಪ್ರಕೃತಿ, ವಯಸ್ಸು ಒಂದೇ ರೀತಿಯಾಗಿ ಇಲ್ಲದೆ ಇರುವ ಕಾರಣದಿಂದ ಎಲ್ಲಾ ಆಹಾರಗಳು ಇಷ್ಟೇ ಪ್ರಮಾಣದಲ್ಲಿ ನೀಡಬಹುದು ಎಂದು ಹೇಳಲು ಆಗದು. ಅದೇ ರೀತಿಯಲ್ಲಿ ಮಕ್ಕಳ ವಯಸ್ಸು, ಅವರ ಆಹಾರ ಕ್ರಮ ಹಾಗೂ ಆರೋಗ್ಯ ಪರಿಸ್ಥಿತಿಗೆ ಅನುಗುಣವಾಗಿ ಬಾದಾಮಿ ನೀಡಬಹುದಾಗಿದೆ.

**ಮಕ್ಕಳಿಗೆ ಬಾದಾಮಿ ನೀಡಲು ಕೆಲವು ಸಾಮಾನ್ಯ ಸಲಹೆಗಳು**

ನಿಮ್ಮ ಮಗು 1–3 ವರ್ಷದ್ದಾಗಿದ್ದರೆ, ಆಗ ದಿನಕ್ಕೆ 3–4 ಬಾದಾಮಿ ನೀಡಬಹುದು.

ಮಗು 4–8 ವರ್ಷ ವಯಸ್ಸಿನದ್ದಾಗಿದ್ದರೆ ಆಗ 5–8 ಬಾದಾಮಿ ನೀಡುವುದು ಒಳ್ಳೆಯದು.

9–18 ವರ್ಷದವರಿಗೆ 8–10 ಬಾದಾಮಿಯು ಸೂಕ್ತವಾಗಿದೆ.

ನಿಮ್ಮ ಮಕ್ಕಳಿಗೆ ಯಾವುದೇ ರೀತಿಯ ಆರೋಗ್ಯ ಸಮಸ್ಯೆಯಿದ್ದರೆ, ಆಗ ನೀವು ಮಕ್ಕಳಿಗೆ ಬಾದಾಮಿ ನೀಡುವ ಮೊದಲು ಮಕ್ಕಳ ತಜ್ಞರಿಂದ ಸಲಹೆ ಪಡೆಯುವುದು ಸೂಕ್ತ.

**ಒಂದು ವೇಳೆ ಅತಿಯಾಗಿ ಬಾದಾಮಿ ತಿಂದರೆ ಏನಾಗಬಹುದು?**

ಯಾವುದೇ ಆಹಾರವಾದರೂ ಅದನ್ನು ಅತಿಯಾಗಿ ತಿಂದರೆ ಆಗ ಖಂಡಿತ ವಾಗಿಯೂ ಅದರ ಅಡ್ಡ ಪರಿಣಾಮಗಳು ಇದ್ದೇ ಇರುವುದು. ಇದಕ್ಕೆ ಬಾದಾಮಿ ಹೊರತಾಗಿಲ್ಲ, ಬಾದಾಮಿಯನ್ನು ಅತಿಯಾಗಿ ತಿಂದರೆ ಕಾಡುವ ಸಮಸ್ಯೆಗಳ ಬಗ್ಗೆ ತಿಳಿಯಿರಿ.

**ತೂಕ ಹೆಚ್ಚಳ**

ಬಾದಾಮಿಯಲ್ಲಿ ಆರೋಗ್ಯಕಾರಿ ಕೊಬ್ಬಿನ ಜತೆಗೆ ಉನ್ನತ ಮಟ್ಟದ ಕ್ಯಾಲರಿ ಕೂಡ ಇರುವ ಪರಿಣಾಮವಾಗಿ ಅದನ್ನು ಅತಿಯಾಗಿ ಸೇವನೆ ಮಾಡಿದರೆ, ತೂಕ ಹೆಚ್ಚಳವಾಗುವ ಸಾಧ್ಯತೆಯು ಇರುವುದು.

**ಜೀರ್ಣಕ್ರಿಯೆ ಸಮಸ್ಯೆಗಳು**

ಬಾದಾಮಿಯಲ್ಲಿ ನಾರಿನಾಂಶವು ಉತ್ತಮ ಪ್ರಮಾಣದಲ್ಲಿದ್ದು, ಇದು ಹೊಟ್ಟೆಯ ಆರೋಗ್ಯಕ್ಕೆ ತುಂಬಾ ಒಳ್ಳೆಯದು. ಆದರೆ ಇದನ್ನು ಅತಿಯಾಗಿ ಸೇವನೆ ಮಾಡಿ, ನೀರು ಕುಡಿಯದೆ ಇದ್ದರೆ ಆಗ ಜೀರ್ಣಕ್ರಿಯೆ ಸಮಸ್ಯೆಗಳಾದ ಹೊಟ್ಟೆ ಉಬ್ಬರ ಅಥವಾ ಮಲಬದ್ಧತೆ ಬರುವುದು.

**ಆಕ್ಸಲೇಟ್ ಎಚ್ಚರ**

ಬಾದಾಮಿಯಲ್ಲಿ ನೈಸರ್ಗಿಕವಾಗಿರುವಂತಹ ಆಕ್ಸಲೇಟ್ ಇದ್ದು, ಇದನ್ನು ಅತಿಯಾಗಿ ಸೇವನೆ ಮಾಡದರೆ, ಆಗ ಇದು ಕಿಡ್ನಿ ಕಲ್ಲಿಗೆ ಕಾರಣವಾಗ ಬಹುದು. ಕಿಡ್ನಿ ಕಲ್ಲಿನ ಸಮಸ್ಯೆ ಇರುವವರು ಇದನ್ನು ಸೇವಿಸಿದರೆ ಆಗ ಎಚ್ಚರಿಕೆ ವಹಿಸಬೇಕು.

ಅಲರ್ಜಿ: ಕೆಲವು ಒಣ ಬೀಜಗಳು ಮಕ್ಕಳಲ್ಲಿ ಅಲರ್ಜಿ ಉಂಟು ಮಾಡ ಬಹುದು. ಬಾದಾಮಿಯು ಕೂಡ ಅಲರ್ಜಿ ಉಂಟು ಮಾಡುವಂತಹ ಸಾಧ್ಯತೆಯು ಇದೆ. ಹೀಗಾಗಿ ಮಕ್ಕಳಲ್ಲಿನ ಅಲರ್ಜಿ ಬಗ್ಗೆ ತಿಳಿದುಕೊಂಡು ಮಕ್ಕಳಿಗೆ ಬಾದಾಮಿ ನೀಡಬೇಕಾಗಿದೆ. ಫೈಟಿ–ಕ್ ಆಮ್ಲ: ಬಾದಾಮಿಯಲ್ಲಿ ಇರುವ ಫೈಟಿಕ್ ಆಮ್ಲವು ಖನಿಜಾಂಶ ಗಳನ್ನು ಬಂಧಿಸಿ, ಅದು ಹೀರಿಕೊಳ್ಳದಂತೆ ತಡೆಯಬಹುದು. ಸಮತೋಲಿತ ಆಹಾರವಾಗಿ ಇದನ್ನು ಸೇವನೆ ಮಾಡಿದರೆ, ಆಗ ಯಾವುದೇ ರೀತಿಯ ಸಮಸ್ಯೆಯು ಆಗದು. ಆದರೆ ಅತಿಯಾಗಿ ಸೇವಿಸಿದರೆ ಖನಿಜಾಂಶಗಳ ಹೀರುವಿಕೆಗೆ ತೊಂದರೆಯಾಗಬಹುದು.



## ಹಿಂಗು–ಇಂಗಿನ ಉಪಯೋಗಗಳು



ಪ್ರತಿನಿತ್ಯ ಆಹಾರದಲ್ಲಿ ನಾವು ಕೆಲವು ಪದಾಥ–ರ್ಗಳನ್ನು ಕಡ್ಡಾಯವಾಗಿ ಬಳಸುತ್ತೇವೆ. ಕೆಲವೊಮ್ಮೆ ರುಚಿಗಾಗಿ, ಕೆಲವೊಮ್ಮೆ ಪರಿಮಳಕ್ಕಾಗಿ, ಕೆಲವೊಮ್ಮೆ ಬಣ್ಣಕ್ಕಾಗಿ ಬಳಸುತ್ತೇವೆ. ಆದರೆ ಅದರಲ್ಲಿರುವ ಔಷಧೀಯ ಗುಣಗಳನ್ನು ತಿಳಿದು ಬಳಸಿದರೆ ಅದರ ಮಹತ್ವ ಹೆಚ್ಚಾಗುತ್ತದೆ.

ಇದು ಕಹಿ ರಸವುಳ್ಳದ್ದು, ಉಷ್ಣಗುಣವುಳ್ಳದ್ದು, ತೀಕ್ಷ್ಣ ಗುಣವುಳ್ಳದ್ದು, ಮಾರುಕಟ್ಟೆಯಲ್ಲಿ ಸಿಗುವ ಇಂಗನ್ನು ಸರಿಯಾಗಿ ಪರೀಕ್ಷಿಸಿ ತೆಗೆದುಕೊಳ್ಳಿ. ಒಂದು ಬಟ್ಟಲು ನೀರಿಗೆ ಸ್ವಲ್ಪ ಇಂಗನ್ನು ಹಾಕಿ ಅದು ಕರಗಿದಂತೆಲ್ಲಾ ನೀರು ಬೆಳ್ಳಗಾಗಲು ಪ್ರಾರಂಭವಾಗುತ್ತದೆ. ಪೂರ್ತಿ ಕರಗಿದ ಮೇಲೆ ನೀರು ಪೂರ್ಣವಾಗಿ ಬೆಳ್ಳಗಾಗುತ್ತದೆ. ಹಾಗೂ ನೀರಿನ ತಳಭಾಗದಲ್ಲಿ ಸ್ವಲ್ಪವೂ ಕಲ್ಕ ಉಳಿಯುವುದಿಲ್ಲ. ಈ ರೀತಿ ಇದ್ದರೆ ಇದು ಶುದ್ಧ ಇಂಗು ಅಂತ ತಿಳಿಯಬಹುದು.

ಸಾಧಾರಣವಾಗಿ ಸೊಪ್ಪುಗಳು, ತರಕಾರಿಗಳು ಬೇಯುವಾಗ ವಾಯು ಬಿಡುಗಡೆ ಯಾಗುತ್ತದೆ. ಅದೇ ರೀತಿ ಶರೀರದಲ್ಲಿ ಆಹಾರ ಪಚನವಾಗುವ ಹಂತದಲ್ಲಿ ವಾಯು ಬಿಡುಗಡೆಯಾಗುತ್ತದೆ.

1. ಎದೆಹಾಲು ಉತ್ಪತ್ತಿಗೆ: ಬಾಣಂತಿಯ–ರಿಗೆ ಲವಂಗ ಹಾಗೂ ಇಂಗು ಸೇರಿಸಿ ಕಷಾಯದ ರೂಪದಲ್ಲಿ ಕೊಟ್ಟರೆ ಎದೆಹಾಲು ಹೆಚ್ಚಾಗಿ ಉತ್ಪತ್ತಿ ಆಗುತ್ತದೆ.

2. ಉಬ್ಬಸ, ನಾಯಿ ಕೆಮ್ಮು ನಿವಾರಣೆಗೆ: ವೀಳ್ಯದೆಲೆ, ಬಿಳಿ ಈರುಳ್ಳಿ, ಕಡಲೆಕಾಳು ಗಾತ್ರದ ಇಂಗು ಇಷ್ಟನ್ನು ಅರೆದು ಅದರ ರಸಕ್ಕೆ ಜೇನುತುಪ್ಪ ಸೇರಿಸಿ ಪ್ರತಿನಿತ್ಯ 2 ಬಾರಿ ಸೇವಿಸುವುದ–ರಿಂದ ಉಬ್ಬಸ, ನಾಯಿಕೆಮ್ಮು ನಿವಾರಣೆಯಾಗುತ್ತದೆ.

3. ಕೀಲುನೋವು: ಕೊಬ್ಬರಿ ಎಣ್ಣೆಯಲ್ಲಿ ಇಂಗಿನ ಪುಡಿಯನ್ನು ಹಾಕಿ ಬಿಸಿ ಮಾಡಿ ಅದನ್ನು ಕೀಲು ನೋವಿಗೆ ಹಚ್ಚಿ ಮಾಲೀಷು ಮಾಡುವುದರಿಂದ ನೋವು ಉಪಶಮನವಾಗುತ್ತದೆ.

4. ಚೇಳು ಕಚ್ಚಿದ್ದಕ್ಕೆ: ಎಕ್ಕದ ಹಾಲಿನಲ್ಲಿ ಇಂಗನ್ನು ತೇಯ್ದು ಚೇಳು ಕಚ್ಚಿದ ಜಾಗಕ್ಕೆ ಹಚ್ಚುವುದರಿಂದ ಅನುಕೂಲ.

5. ಮೊಡವೆ: ಇಂಗನ್ನು ನೀರಿನಲ್ಲಿ ತೇಯ್ದು ಮೊಡವೆಗಳಿರುವ ಜಾಗಕ್ಕೆ ಮಾತ್ರ ಹಚ್ಚುವುದರಿಂದ ಮೊಡವೆ ಅಲ್ಲಿಯೇ ಇಂಗಿ ಹೋಗುತ್ತದೆ.

6. ಹೊಟ್ಟೆ ನೋವಿಗೆ: ಬಾಳೆಹಣ್ಣಿನಲ್ಲಿ ಇಂಗನ್ನು ಇಟ್ಟು ನುಂಗಿದರೆ ಹೊಟ್ಟೆನೋವು ಕಡಿಮೆ ಆಗುತ್ತದೆ.

7. ಮಲಬದ್ಧತೆ: ನೀರಿನಲ್ಲಿ ಇಂಗನ್ನು ಕರಗಿಸಿ ಸೇವನೆ ಮಾಡುವುದರಿಂದ ಮಲಬದ್ಧತೆ ನಿವಾರಣೆಯಾಗುತ್ತದೆ.

8. ತಲೆನೋವಿಗೆ: ನೀರಿನಲ್ಲಿ ಇಂಗನ್ನು ಕರಗಿಸಿ ಕುಡಿಯುವುದರಿಂದ ಸ್ವಲ್ಪ ಸಮಯದಲ್ಲಿ ತಲೆನೋವು ನಿವಾರಣೆಯಾಗುತ್ತದೆ.

9. ರಕ್ತದ ಒತ್ತಡ: ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಿ ಅಧಿಕ ರಕ್ತದ ಒತ್ತಡವನ್ನು ತಗ್ಗಿಸುತ್ತದೆ.

10. ಹೊಟ್ಟೆ ಉಬ್ಬರಕ್ಕೆ: ತಿಂದ ಆಹಾರ ಚೆನ್ನಾಗಿ ಜೀರ್ಣಿಸದೆ ವಾಯು ಶೇಖರಣೆಯಾಗಿ ಹೊಟ್ಟೆ ಉಬ್ಬರಿಸಿದರೆ, ಇಂಗನ್ನು ಒಂದು ಲೋಟ ಮಜ್ಜಿಗೆಗೆ ಹಾಕಿ ಕುಡಿದರೆ ಹೊಟ್ಟೆ ಉಬ್ಬರ ಕಡಿಮೆ ಆಗುತ್ತದೆ.

## ನಿಮ್ಮ ತ್ವಚೆ ಪಳಪಳ ಹೊಳೆಯಬೇಕೆಂದರೆ ಈ ಏಲಕ್ಕಿ ನೀರನ್ನು ಒಮ್ಮೆ ಕುಡಿದು ನೋಡಿ!



ದಣಿವು, ನಿರಾಸಕ್ತಿಯಿಂದ ಹೊರಬರಬೇಕೇ? ಹೊಳೆಯುವ ಚರ್ಮ ನಿಮ್ಮದಾಗಬೇಕೆ? ಉತ್ತಮ ಸುವಾಸನೆ ಮತ್ತು ಔಷಧೀಯ ಪ್ರಯೋಜನಗಳನ್ನು ಹೊಂದಿರುವ ಏಲಕ್ಕಿ ನೀರನ್ನು ಕುಡಿದು ನೋಡಿ. ನಿಮ್ಮ ಆರೋಗ್ಯ, ಜೀವನದಲ್ಲಾಗುವ ಬದಲಾವಣೆಗಳನ್ನು ನೀವೇ ಗಮನಿಸಿ.

ಅಂದವಾಗಿ ಕಾಣಬೇಕೆಂಬುದು ಪ್ರತಿಯೊಬ್ಬರ ಬಯಕೆ. ಮುಖದ ಕಾಂತಿ ಹೆಚ್ಚಿಸಲು ಯುವಕ–ಯುವತಿಯರು ಕ್ರೀಮ್, ಫೇಸ್ ಪ್ಯಾಕ್, ಸ್ಕ್ರಬ್ ಎಂದು ಸಾಕಷ್ಟು ತಲೆಕೆಡಿಸಿಕೊಳ್ಳುತ್ತಾರೆ. ಚರ್ಮದ ಅಂದ ಹಚ್ಚಿಸಲು ಕ್ರೀಮ್ ಗಳಷ್ಟೇ ಅಲ್ಲ ನಾವು ತೆಗೆದುಕೊಳ್ಳುವ ಆಹಾರವೂ ಪ್ರಮುಖ ಪಾತ್ರ ವಹಿಸುತ್ತದೆ. ಅಗತ್ಯವಿರುವಷ್ಟು ನೀರಿನ ಸೇವನೆಯೂ ಚರ್ಮದ ಆರೋಗ್ಯಕ್ಕೆ ಮುಖ್ಯ, ಅದರಲ್ಲೂ ಏಲಕ್ಕಿ ನೀರು ಸೇವನೆಯಿಂದ ಚರ್ಮದ ಕಾಂತಿ ಹೆಚ್ಚುತ್ತದೆ.

ಏಲಕ್ಕಿ ನೀರು ಕಾಂತಿಯುತ ಚರ್ಮವನ್ನು ಪಡೆಯಲು ನೈಸರ್ಗಿಕ ಮಾರ್ಗವಾಗಿದೆ. ಇದು ಉತ್ತಮ ಸುವಾಸನೆ ಮತ್ತು ಔಷಧೀಯ ಪ್ರಯೋಜನಗಳನ್ನು ಹೊಂದಿದೆ. ಏಲಕ್ಕಿಯನ್ನು ಒಂದು ಮಸಾಲಾ ಪದಾರ್ಥವಾಗಿ ಅಡುಗೆಯಲ್ಲಿ ಬಳಸುತ್ತೇವೆ, ಸುಲಭವಾಗಿ ಲಭ್ಯವಿರುವ ಮತ್ತು ಪರಿಣಾಮಕಾರಿ ಅಡುಗೆ ಪದಾಥ–ರ್ ಏಲಕ್ಕಿಯನ್ನು ಬಿಸಿ ನೀರಿನೊಂದಿಗೆ ಬೆರೆಸಿ ಕುಡಿದಾಗ ಅದ್ಭುತ ಆರೋಗ್ಯ ಪ್ರಯೋಜನಗಳು ನಿಮಗೆ ಲಭ್ಯವಾಗುತ್ತದೆ. ಈ ಪಾನೀಯ ನಿಮ್ಮ ಚರ್ಮವನ್ನು ಒಳಗಿನಿಂದ ಪೋಷಿಸುತ್ತದೆ.

**ಏಲಕ್ಕಿ ನೀರು ಎಂದರೇನು?**

ಏಲಕ್ಕಿ ಬೀಜಗಳನ್ನು ಬಿಸಿ ನೀರಿನಲ್ಲಿ ಸೇರಿಸಿ ತಣಿದ ನಂತರ ಕುಡಿಯಬೇಕು. ಇದನ್ನು ಉಲ್ಲಾಸದಾಯಕ ಮತ್ತು ಉತ್ತೇಜಕ ಪಾನೀಯ ಎನ್ನಬಹುದು. ಈ ಸುವಾಸನೆಯ ಪಾನೀಯವು ಸುಧಾ–ರಿತ ಜೀರ್ಣಕ್ರಿಯೆ, ಕಡಿಮೆ ಉರಿಯೂತ ಮತ್ತು ವರ್ಧಿತ ಚರ್ಮದ ಆರೋಗ್ಯ ಸೇರಿದಂತೆ ಹಲವಾರು ಆರೋಗ್ಯ ಪ್ರಯೋಜನಗಳನ್ನು ನೀಡುತ್ತದೆ. ಇದು ಬ್ಯಾಕ್ಟೀರಿಯಾವನ್ನು ಪ್ರತಿಬಂಧಿಸುತ್ತದೆ



ಉತ್ಕರ್ಷಣ ನಿರೋಧಕಗಳು ಮತ್ತು ಬ್ಯಾಕ್ಟೀರಿಯಾ ವಿರೋಧಿ ಸಂಯುಕ್ತಗಳಿಂದ ಸಮೃದ್ಧವಾಗಿದೆ, ಇದು ಮೊಡವೆ, ಕಲೆಗಳು ಮತ್ತು ಅಕಾಲಿಕ ವಯಸ್ಸಾಗುವಿಕೆಯನ್ನು ತಡೆಯುತ್ತದೆ ಎಂದು ಮಾಲಿಕ್ಯೂಲ್ಸ್ ಜರ್ನಲ್ ನಲ್ಲಿ ಪ್ರಕಟವಾದ ಅಧ್ಯಯನ ತಿಳಿಸಿದೆ.

**ಚರ್ಮಕ್ಕೆ ಏಲಕ್ಕಿ ನೀರು**

ಚರ್ಮದ ಹೊಳಪಿಗೆ ಏಲಕ್ಕಿ ನೀರು ಪರಿಣಾಮಕಾರಿ ಮನೆಮದ್ದು. "ಉತ್ಕರ್ಷಣ ನಿರೋಧಕಗಳು ಮತ್ತು ಬ್ಯಾಕ್ಟೀರಿಯಾ ವಿರೋಧಿ ಗುಣಲಕ್ಷಣಗಳನ್ನು ಹೊಂದಿರುವ ಏಲಕ್ಕಿ, ಮೊಡವೆ ಉಂಟುಮಾಡುವ ಮತ್ತು ಉರಿಯೂತವನ್ನು ಕಡಿಮೆ ಮಾಡುತ್ತದೆ."ಎಂದು ಆಯುರ್ವೇದ ತಜ್ಞ ಡಿಂಪಲ್ ಜಂಗ್ಡಾ ಹೇಳಿದ್ದಾರೆ.

ಏಲಕ್ಕಿ ನೀರು ನಿಮ್ಮ ಚರ್ಮವನ್ನು ಆಂತರಿಕವಾಗಿ ಹೈಡ್ರೇಟ್ ಮಾಡುತ್ತದೆ. ಈ ನೀರನ್ನು ನಿಯಮಿತವಾಗಿ ಕುಡಿಯುವುದ–ರಿಂದ ಚರ್ಮದ ಹೊಳಪು ಹೆಚ್ಚುತ್ತದೆ, ಚರ್ಮದಲ್ಲಿ ಏಲಕ್ಕಿ **ನೀರನ್ನು ಹೀಗೆ ತಯಾರಿಸಿ**

2–3 ಹಸಿರು ಏಲಕ್ಕಿ ಬೀಜಗಳು
1 ಲೀಟರ್ ನೀರು
ನಿಂಬೆ (ಬೇಕಿದ್ದರೆ)
ಕರ್ಜೂರ ಸಿರಪ್




**ವಿಧಾನ**

ಏಲಕ್ಕಿ ಹೆಚ್ಚು ಪರಿಮಳ ಬಿಡಲು ಬೀಜಗಳನ್ನು ಲಘುವಾಗಿ ಪುಡಿಮಾಡಿ. ನೀರನ್ನು ಕುದಿಸಿ. ಕುದಿಯುವ ನೀರಿಗೆ ಪುಡಿಮಾಡಿದ ಬೀಜಗಳನ್ನು ಸೇರಿಸಿ. ಮಿಶ್ರಣವನ್ನು 10–15 ನಿಮಿಷಗಳ ಕಾಲ ಅಥವಾ ನೀರು ತಿಳಿ ಕಂದು ಬಣ್ಣಕ್ಕೆ ತಿರುಗುವವರೆಗೆ ಬಿಡಿ. ಹೆಚ್ಚುವರಿ ಪರಿಮಳಕ್ಕಾಗಿ, ನೀವು ಸ್ವಲ್ಪ ನಿಂಬೆ ರಸವನ್ನು ಹಿಂಡಬಹುದು ಅಥವಾ ಒಂದು ಟೀಸ್ಪೂನ್ ಖರ್ಜೂರದ ಸಿರಪ್ ಅನ್ನು ಸೇರಿಸಬಹುದು. ದಿನವಿಡೀ ಈ ಉಲ್ಲಾಸದಾಯಕ ಮತ್ತು ನಿರ್ವಿಷಗೊಳಿಸುವ ಪಾನೀಯವನ್ನು ಕುಡಿಯಿರಿ.

## ಕೂದಲು ಉದುರುವುದು ನಿಲ್ಲಬೇಕೆ? ಹಾಗಾದ್ರೆ ಪ್ರತಿದಿನ ಈ ಪ್ರಾಣಾಯಾಮಗಳನ್ನು ಮಾಡಿ

ಪ್ರಾಣಾಯಾಮಗಳು ಆರೋಗ್ಯಕ್ಕೆ ತುಂಬಾ ಒಳ್ಳೆಯದು. ಇದು ಅನೇಕ ಆರೋಗ್ಯ ಸಮಸ್ಯೆಗಳನ್ನು ನಿವಾ–ರಿಸುತ್ತದೆ. ಹಾಗಾಗಿ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಜನರು ಪ್ರಾಣಾಯಾಮಗಳನ್ನು ಮಾಡಲು ಶುರುಮಾಡಿದ್ದಾರೆ. ಈ ಪ್ರಾಣಾಯಾಮಗಳು ದೈಹಿಕ ಮಾತ್ರವಲ್ಲ ಮಾನಸಿಕ ಆರೋಗ್ಯ, ಕೂದಲಿನ ಆರೋಗ್ಯವನ್ನು ಕೂಡ ಕಾಪಾಡುತ್ತವೆ. ಹಾಗಾಗಿ ಪ್ರತಿದಿನ ಕೆಲವು ಪ್ರಾಣಾಯಾಮಗಳನ್ನು ಅಭ್ಯಾಸ ಮಾಡಿ.


ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಜನರು ಕೂದಲುದುರುವ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಇದಕ್ಕೆ ಅನೇಕ ಕಾರಣಗಳಿರಬಹುದು. ಆದರೆ ಇದನ್ನು ನಿವಾರಿಸಲು ಪ್ರಾಣಾಯಾಮಗಳು ಸಹಕಾರಿಯಾಗಿವೆ. ಪ್ರಾಣಾಯಾಮ ಎಂದು ಕರೆಯುವ ಉಸಿರಾಟದ ಯೋಗಗಳನ್ನು ಮಾಡುವುದರಿಂದ ದೇಹದಲ್ಲಿ ರಕ್ತಪರಿಚಲನೆ ಹೆಚ್ಚಾಗುತ್ತದೆ. ಮತ್ತು ಇದು ಒತ್ತಡವನ್ನು ಕಡಿಮೆ ಮಾಡುತ್ತದೆ. ಇದರಿಂದ ನೆತ್ತಿಗೆ ಆಮ್ಲಜನಕದ ಪೂರೈಕೆಯಾಗಿ ನೆತ್ತಿಯ ಆರೋಗ್ಯವನ್ನು ಸುಧಾರಿಸಬಹುದು. ಇದು ಕೂದಲಿನ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮಗಳನ್ನು ಬೀರುತ್ತದೆ. ಹಾಗಾಗಿ ಭ್ರಮರಿ ಪ್ರಾಣಾಯಾಮ, ಕಪಾಲಭಾತಿ ಪ್ರಾಣಾಯಾಮ, ಅನುಲೋಮ್ ವಿಲೋಮ್, ಉಜ್ಜಯಿನಿ ಪ್ರಾಣಾಯಾಮ ಮುಂತಾದ ಉಸಿರಾಟದ ಯೋಗಗಳನ್ನು ಪ್ರತಿದಿನ ಅಭ್ಯಾಸ ಮಾಡಿ.....



**ಭ್ರಮರಿ ಪ್ರಾಣಾಯಾಮ**

ಈ ಪ್ರಾಣಾಯಾಮ ಮಾಡುವ ವೇಳೆ ಉಸಿರಾಡುವಾಗ ಹಮ್ಮಿಂಗ್ ಶಬ್ದವನ್ನು ಮಾಡಬೇಕಾಗುತ್ತದೆ. ಇದು ದೇಹದಲ್ಲಿ ಆಮ್ಲಜನಕವನ್ನು ಹೆಚ್ಚಿಸುತ್ತದೆ ಮತ್ತು ತಲೆ ಮತ್ತು ನೆತ್ತಿಗೆ ರಕ್ತ ಪರಿಚಲನೆಯನ್ನು ಸುಧಾರಿಸುತ್ತದೆ.

ಇದನ್ನು ಮಾಡಲು, ಆರಾಮವಾಗಿ ಕುಳಿತುಕೊಳ್ಳಿ. ನಿಮ್ಮ ಕಣ್ಣುಗಳನ್ನು ಮುಚ್ಚಿ, ಮತ್ತು ತೋರುಬೆರಳುಗಳನ್ನು ನಿಮ್ಮ ಕೆನ್ನೆಗಳು ಮತ್ತು ಕಿವಿಗಳ ನಡುವಿನ ಕಾರ್ಟಿಲೆಜ್ ಮೇಲೆ ಇರಿಸಿ. ನಿಮ್ಮ ಮೂಗಿನ ಮೂಲಕ ಆಳವಾಗಿ ಉಸಿರೆಳೆದುಕೊಳ್ಳಿ, ನಂತರ ಜೇನುನೊಣದಂತೆ ಹಮ್ಮಿಂಗ್ ಶಬ್ದವನ್ನು ಮಾಡುವಾಗ ನಿಧಾನವಾಗಿ ಉಸಿರನ್ನು ಹೊರಹಾಕಿ. ಈ ಕಂಪನವು ನೆತ್ತಿಗೆ ರಕ್ತದ ಹರಿವನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ.?



**ಕಪಾಲಭಾತಿ ಪ್ರಾಣಾಯಾಮ**


ಈ ಉಸಿರಾಟದ ಯೋಗ ನಿಶ್ವಾಸ ಮತ್ತು ನಿಷ್ಕ್ರಿಯ ಉಸಿರಾಟವನ್ನು ಒಳಗೊಂಡಿರುತ್ತದೆ. ಇದು ಉಸಿರಾಟದ ವ್ಯವಸ್ಥೆಯನ್ನು ಶುದ್ಧೀಕರಿಸುತ್ತದೆ ಮತ್ತು ಮೆದುಳು ಮತ್ತು ನೆತ್ತಿಗೆ ರಕ್ತದ ಹರಿವನ್ನು ಹೆಚ್ಚಿಸುತ್ತದೆ. ಇದನ್ನು ಮಾಡುವಾಗ ಬೆನ್ನುಮೂಳೆಯನ್ನು ನೇರವಾಗಿಸಿಟ್ಟುಕೊಂಡು ಆರಾಮವಾಗಿ ಕುಳಿತುಕೊಳ್ಳುವ ಮೂಲಕ ಪ್ರಾರಂಭಿಸಿ.

ಆಳವಾದ ಉಸಿರನ್ನು ತೆಗೆದುಕೊಳ್ಳಿ. ನಂತರ ನಿಮ್ಮ ಹೊಕ್ಕುಳನ್ನು ನಿಮ್ಮ ಬೆನ್ನುಮೂಳೆಯ ಕಡೆಗೆ ಎಳೆಯುವಾಗ ನಿಮ್ಮ ಮೂಗಿನ ಮೂಲಕ ಬಲವಂತವಾಗಿ ಉಸಿರನ್ನು ಹೊರಹಾಕಿ. ನಿಮ್ಮ ಹೊಟ್ಟೆ ವಿಶ್ರಾಂತಿ ಪಡೆಯುತ್ತಿದ್ದಂತೆ ನಿಮ್ಮ ಉಸಿರಾಟವು ನಿಷ್ಕ್ರಿಯವಾಗಿ ನಡೆಯಲು ಬಿಡಿ. ಈ ಚಕ್ರವನ್ನು 30 ಸೆಕೆಂಡುಗಳಿಂದ ಒಂದು ನಿಮಿಷದವರೆಗೆ ಪುನರಾವರ್ತಿಸಿ.?

**ಅನುಲೋಮ್ ವಿಲೋಮ್ ಪ್ರಾಣಾಯಾಮ**

ಈ ಉಸಿರಾಟದ ಯೋಗವು ಒಟ್ಟಾರೆ ದೇಹದ ರಕ್ತ ಪರಿಚಲನೆಯನ್ನು ಸುಧಾರಿಸಲು ಮತ್ತು ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಆರಾಮದಾಯಕ ಭಂಗಿಯಲ್ಲಿ ಕುಳಿತುಕೊಳ್ಳಿ ಮತ್ತು ನಿಮ್ಮ ಬಲ ಹೆಬ್ಬೆರಳನ್ನು ಬಳಸಿ ನಿಮ್ಮ ಬಲ ಮೂಗಿನ ಹೊಳ್ಳೆಯನ್ನು ಮುಚ್ಚಿ. ನಿಮ್ಮ ಎಡ ಮೂಗಿನ ಹೊಳ್ಳೆಯ ಮೂಲಕ ಆಳವಾಗಿ ಉಸಿರೆಳೆದುಕೊಳ್ಳಿ.

ನಂತರ ನಿಮ್ಮ ಕೈಯ ಬೆರಳಿನಿಂದ ಅದನ್ನು ಮುಚ್ಚಿ. ನಿಮ್ಮ ಬಲ ಮೂಗಿನ ಹೊಳ್ಳೆಯನ್ನು ತೆರೆಯಿರಿ ಮತ್ತು ನಿಧಾನವಾಗಿ ಉಸಿರನ್ನು ಹೊರಹಾಕಿ. ಬಲ ಮೂಗಿನ ಹೊಳ್ಳೆಯ ಮೂಲಕ ಉಸಿರನ್ನು ಒಳಗೆಳೆದುಕೊಳ್ಳಿ, ಅದನ್ನು ಮುಚ್ಚಿ, ಎಡ ಮೂಗಿನ ಹೊಳ್ಳೆಯನ್ನು ತೆರೆದು ಉಸಿರನ್ನು ಹೊರಹಾಕಿ. ಇದು ಒಂದು ಚಕ್ರವನ್ನು ಪೂರ್ಣಗೊಳಿಸುತ್ತದೆ. ಇದನ್ನು 5–10 ನಿಮಿಷಗಳ ಕಾಲ ಮುಂದುವರಿಸಿ.?



**ಉಜ್ಜಾಯಿ ಪ್ರಾಣಾಯಾಮ**

ಈ ಪ್ರಾಣಾಯಾಮ ಮಾಡುವ ವೇಳೆ ಉಸಿರಾಡುವಾಗ ಮೃದುವಾದ ಶಬ್ದ ಬರುವಂತೆ ಗಂಟಲನ್ನು ಸ್ವಲ್ಪ ತೆರೆಯಬೇಕಾಗುತ್ತದೆ. ಇದು ಆಮ್ಲಜನಕ ವನ್ನು ಹೆಚ್ಚಿಸಲು ಮತ್ತು ದೇಹದಾದ್ಯಂತ ರಕ್ತ ಪರಿಚಲನೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ.

ನಿಮ್ಮ ಮೂಗಿನ ಮೂಲಕ ಆಳವಾಗಿ ಉಸಿರೆಳೆದುಕೊಳ್ಳಿ, ನಂತರ ಗಂಟಲನ್ನು ಸಣ್ಣಕ್ಕೆ ತೆರೆದು ಅದರ ಮೂಲಕ ನಿಧಾನವಾಗಿ ಉಸಿರನ್ನು ಹೊರಹಾಕಿ. ಆಗ ಮೃದುವಾದ "ಹಾ" ಎಂಬ ಶಬ್ದ ಬರುತ್ತದೆ.

ಈ ಉಸಿರಾಟವನ್ನು ಹಲವಾರು ನಿಮಿಷಗಳ ಕಾಲ ಅಭ್ಯಾಸ ಮಾಡಬಹುದು.

**ನಾಡಿ ಶೋಧನ ಪ್ರಾಣಾಯಾಮ**

ಅ ನ ್ ು ಲ ್ ೂ ೀ ವ ್ ು ್ ವಿಲೋಮದಂತೆಯೇ, ಈ ತಂತ್ರವು ದೇಹದಲ್ಲಿನ ಶಕ್ತಿಗಳನ್ನು ಸಮತೋಲನಗೊಳಿಸುತ್ತದೆ ಮತ್ತು ಒಟ್ಟಾರೆ ರಕ್ತ ಪರಿಚಲನೆಯನ್ನು ಸುಧಾರಿಸುತ್ತದೆ ಎಂದು ನಂಬಲಾಗಿದೆ.

ಮುಖ್ಯ ವ್ಯತ್ಯಾಸವೆಂದರೆ ನೀವು ಬಲಭಾಗದ ಬದಲು ಎಡ ಮೂಗಿನ ಹೊಳ್ಳೆಯಿಂದ ಪ್ರಾರಂಭಿಸಬೇಕಾಗುತ್ತದೆ.

ನಿಮ್ಮ ಬಲ ಹೆಬ್ಬೆರಳಿನಿಂದ ನಿಮ್ಮ ಬಲ ಮೂಗಿನ ಹೊಳ್ಳೆಯನ್ನು ಮುಚ್ಚುವ ಮೂಲಕ ಪ್ರಾರಂಭಿಸಿ, ಎಡ ಮೂಗಿನ ಹೊಳ್ಳೆಯ ಮೂಲಕ ಉಸಿರನ್ನು ತೆಗೆದುಕೊಳ್ಳಿ, ನಂತರ ನಿಮ್ಮ ಉಂಗುರ ಬೆರಳಿನಿಂದ ಎಡ ಮೂಗಿನ ಹೊಳ್ಳೆಯನ್ನು ಮುಚ್ಚಿ, ಬಲ ಮೂಗಿನ ಹೊಳ್ಳೆಯನ್ನು ತೆರೆದು ಉಸಿರನ್ನು ಹೊರಹಾಕಿ. ಬಲ ಮೂಗಿನ ಹೊಳ್ಳೆಯ ಮೂಲಕ ಉಸಿರನ್ನು ಒಳಗೆಳೆದುಕೊಳ್ಳಿ ಮತ್ತು ಎಡಭಾಗದ ಮೂಲಕ ಉಸಿರನ್ನು ಹೊರಹಾಕಿ. ಇದನ್ನು 5–10 ನಿಮಿಷಗಳ ಕಾಲ ಮುಂದುವರಿಸಿ. ಈ ಉಸಿರಾಟದ ಪ್ರಾಣಾಯಾಮವು ನೆತ್ತಿಯ ಆರೋಗ್ಯಕ್ಕೆ ಗಮನಾರ್ಹ ಪ್ರಯೋಜನಗಳನ್ನು ನೀಡುತ್ತದೆ. ನೆತ್ತಿಗೆ ರಕ್ತ ಪರಿಚಲನೆ ಮತ್ತು ಆಮ್ಲಜನಕದ ಹರಿವನ್ನು ಸುಧಾರಿಸುವ ಮೂಲಕ, ಪ್ರಾಣಾಯಾಮವು ಕೂದಲಿನ ಕಿರುಚೀಲಗಳನ್ನು ಪೋಷಿಸುತ್ತದೆ, ಆರೋಗ್ಯಕರ ಕೂದಲಿನ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಅನುಲೋಮ್ ವಿಲೋಮ್ ಮತ್ತು ಕಪಾಲಭಾತಿ ನಂತಹ ತಂತ್ರಗಳು ದೇಹವನ್ನು ನಿರ್ವಿಷಗೊಳಿಸಲು, ಒತ್ತಡವನ್ನು ಕಡಿಮೆ ಮಾಡಲು ಮತ್ತು ಹಾರ್ಮೋನುಗಳನ್ನು ಸಮತೋಲನಗೊಳಿಸಲು ಸಹಾಯ ಮಾಡುತ್ತದೆ.

ಪ್ರಾಣಾಯಾಮದ ನಿಯಮಿತ ಅಭ್ಯಾಸವು ಒಟ್ಟಾರೆ ನೆತ್ತಿಯ ಆರೋಗ್ಯವನ್ನು ಸುಧಾರಿಸುವ ಮೂಲಕ ಮತ್ತು ಉರಿಯೂತವನ್ನು ಕಡಿಮೆ ಮಾಡುವ ಮೂಲಕ ತಲೆಹೊಟ್ಟು ಅಥವಾ ಒಣ ನೆತ್ತಿಯ ಸಮಸ್ಯೆಗಳನ್ನು ನಿವಾರಿಸುತ್ತದೆ. ಇದು ಕೂದಲಿನ ಆರೈಕೆಗೆ ಸಹಕ–ರಿಸುವ ನೈಸರ್ಗಿಕ ಮಾರ್ಗವಾಗಿದೆ. ಈ ಉಸಿರಾಟದ ವ್ಯಾಯಾಮಗಳನ್ನು ಅಭ್ಯಾಸ ಮಾಡುವಾಗ, ನೇರ ಭಂಗಿಯನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಹಾಗೇ, ಈ ಅಭ್ಯಾಸಗಳು ಒಟ್ಟಾರೆ ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿದೆ.

# ಭಂಡಾರದಲ್ಲಿ ಮಿಂದೆದ್ದ ಭಕ್ತಗಣ



**ವಿಜಯಪುರ:** ಉತ್ತರ ಕರ್ನಾಟಕದ ಜಾತ್ರೆಗಳು ವಿಶೇಷತೆಯಿಂದ ಕೂಡಿರುತ್ತವೆ. ಅದರಲ್ಲಿ ದೀಪಾವಳಿ ಹಬ್ಬದ ನಿಮಿತ್ತ ವಿಜಯಪುರ ತಾಲೂಕಿನ ನಾಗಠಾಣ ಗ್ರಾಮದಲ್ಲಿ ಶ್ರೀ ಭೀರದೇವರ ಹಾಗೂ ಶ್ರೀ ಪರಮಾನಂದ ದೇವರ ಜಾತ್ರೆಗೆ ಕರ್ನಾಟಕ ಮಾತ್ರವಲ್ಲದೇ ಮಹಾರಾಷ್ಟ್ರ, ಗೋವಾ ಸೇರಿದಂತೆ ವಿವಿಧೆಡೆಯಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಇಲ್ಲಿಗೆ ಆಗಮಿಸಿ ಭಕ್ತಿಭಾವದಲ್ಲಿ ಮಿಂದೇಳುವ ದೃಶ್ಯ ಮನಮೋಹಕವಾಗಿತ್ತು. ಇದು ಭಂಡಾರದೊಡೆಯನ ಜಾತ್ರೆ ಎಂದೇ ಪ್ರಸಿದ್ಧಿಯಾಗಿದೆ.

ದೀಪಾವಳಿ ಅಮವಾಸ್ಯೆ ದಿನ ಭೀರದೇವರ ಹಾಗೂ ಪಾಡ್ಯ ದಿನ ಪರಮಾನಂದ ದೇವರ ಶೃಂಗಾರ ಚೌಕಿಯೊಂದಿಗೆ ಸಾರವಾಡ ಗೊಂಬೆ ಕುಣಿತ,ಕರಡಿ ಮಜಲು, ಡೊಳ್ಳು ವಾದ್ಯದೊಂದಿಗೆ ಭಕ್ತರ ಮನೆಗೆ ದರ್ಶನ ಕೊಡುತ್ತಾ, ಗಂಗೆ ಸೀತಾಳದಲ್ಲಿ ಪೂಜೆ ಮುಗಿಸಿ, ಬಜಾರಕ್ಕೆ ಆಗಮನವಾಗಿ, ಅಲ್ಲಿ ಭಕ್ತರಿಗೆ ದರ್ಶನ ಕೊಟ್ಟು ನಂತರ ಗುಡಿಗೆ ಬರುವ ಸಂದರ್ಭದಲ್ಲಿ ಭಕ್ತರು ಚೌಕಿ ಮತ್ತು ಪಲ್ಲಕ್ಕಿಗಳ ಮೇಲೆ ರಾಶಿ ರಾಶಿಗಟ್ಟಲೆ ಭಂಡಾರ, ಖಾರಿಕ, ಕುರಿ ಉಣ್ಣೆಯನ್ನು ಹಾರಿಸುವುದು ವಾಡಿಕೆ ಎನ್ನುತ್ತಾರೆ ಜಾತ್ರಾ ಕಮೀಟಿಯ ಅಧ್ಯಕ್ಷ ಪ್ರಭುಲಿಂಗ ಹಂಡಿ.

ಜಾತ್ರೆಯಲ್ಲಿ ಡೊಳ್ಳಿನ ಹಾಡಿಕೆ, ಭಾರ ಎತ್ತುವದು, ಜಂಗಿ ಕುಸ್ತಿ, ಕಬಡ್ಡಿ, ಕ್ರಿಕೆಟ್, ಗುಡ್ಡಗಾಡು ಓಟ, ಸಾಮಾಜಿಕ ನಾಟಕದಂತಹ ಕಾರ್ಯಕ್ರಮಗಳು ಭಕ್ತರ ಮನ ಗೆದ್ದಿವೆ. ಭಕ್ತರು ದೇವರ ಬಳಿ ಬೇಡಿಕೊಂಡ ಹರಕೆಗಳನ್ನು ತೀರಿಸುವ ದೃಶ್ಯ ಸಾಮಾನ್ಯವಾಗಿತ್ತು.

ಜಾತ್ರಾ ಕಮೀಟಿ ಹಾಗೂ ಪರಮಾನಂದ ದಾಸೋಹ ಸಮಿತಿ ವತಿಯಿಂದ ನಿರಂತರ ಅನ್ನ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.ಯಾವುದೇ ಜಾತಿ, ಮತ, ಪಂಥ ಭೇದವಿಲ್ಲದೇ ಎಲ್ಲರೂ ಈ ಜಾತ್ರೆಯಲ್ಲಿ ಭಾಗಿಯಾಗುವುದು ವಿಶೇಷ. ಇಲ್ಲಿಗೆ ಆಗಮಿಸುವ ಪ್ರತಿಯೊಬ್ಬ ಭಕ್ತರು ಭಂಡಾರವನ್ನು ದೇವಾಲಯ ಹಾಗೂ ದೇವರ ಮೇಲೆ ಎಸೆಯುವುದು ಇಲ್ಲಿನ ಸಂಪ್ರದಾಯ. ಭಂಡಾರದಲ್ಲಿ ಮಿಂದೆದ್ದ ಭಕ್ತರು ತಮ್ಮ ಜೀವನ ಪಾವನವಾಯಿತು ಎಂಬುದು ಭಕ್ತರ ನಂಬಿಕೆ. ಬೀರಪ್ಪ ಮತ್ತು ಪರಮಾನಂದ ದೇವರು ಭಕ್ತರ ಪಾಲಿಗೆ ಕಲ್ಪವೃಕ್ಷ.ಜಾತ್ರೆಯಲ್ಲಿ ಕಮೀಟಿಯ ಸರ್ವ ಪದಾಧಿಕಾರಿಗಳು, ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

# ಮಮದಾಪುರ: ಸಂಭ್ರಮದ ರಾಜ್ಯೋತ್ಸವ

**ಮಮದಾಪೂರ:** ಸ್ಥಳೀಯ ಚಿಂತಾಮಣಿ ಪಾವಟೆ ಪ್ರೌಢಶಾಲೆಯಲ್ಲಿ ಕನ್ನಡ ರಾಜ್ಯೋತ್ಸವದ ಉತ್ಸವದಲ್ಲಿ ಗ್ರಾಮೀಣ ವಿದ್ಯಾವ ರ್ಧಕ ಸಂಘದ ಗೌ. ಕಾರ್ಯದರ್ಶಿ ಈರಣ್ಣ ಜನ್ಮಟ್ಟಿಯವರು ದ್ವಜಾರೋಹಣ ಮಾಡಿದರು. ಮುಖ್ಯಶಿಕ್ಷಕ ರ.ವೀ. ದೇಮಶೆಟ್ಟಿ ಮಾರ್ಗದರ್ಶನದಲ್ಲಿ ದ್ವಜಾರೋಹಣದ ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿನ ಪಥಸಂಚಲನದಲ್ಲಿ ಒನಕೆ ಓಬವ್ವ, ಕಿತ್ತೂರ ಚೆನ್ನಮ್ಮ, ಹೀಗೆ ಅನೇಕ ವೀರ ಮಹನೀಯರ ವೇಷಭೂಷಣದೊಂದಿಗೆ ನಾಡದೇವಿ ತಾಯಿ ಭುವನೇಶ್ವರಿಯ ವೇಷದ ಆಕರ್ಷಕ ರೂಪಕಧಾರಿಗಳು, ಹಾಗೂ ಕರ್ನಾಟಕ ಸಂಸ್ಕೃತಿಯ ಉಡುಗೆಯುಳ್ಳ ವಿದ್ಯಾರ್ಥಿಗಳು ಗಮನಸೆಳೆಯುತ್ತಿದ್ದರು. ಇದರೊಂದಿಗೆ ಕನ್ನಡನಾಡಿನ ಹಿರಿಮೆ ಸಾರುವ ಧ್ವನಿ ವರ್ಧಕ ಹಾಡುಗಳೊಂದಿಗೆ ವಿದ್ಯಾರ್ಥಿನಿಯರು ನೃತ್ಯ ಮಾಡಿರುವದು ಜನರ ಮನಗೆದ್ದಿತು. .ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಿದ್ದಗೊಳಿಸಿದ ಆರ್.ಎಂ. ಕಮತ, ಎಸ್.ಟಿ. ಕೆಂಚನ್ನವರ, ಎಂ.ವಿ. ಕಟಕೋಳ, ಹಿರಿಯ ಶಿಕ್ಷಕರಾದ ಸಿ.ಎಂ. ಪಟಾತ, ಎಂ.ಬಿ. ಹಾದಿಮನಿ, ಎಂ.ಎ .ಪಟ್ಟಣ ಉಪಸ್ಥಿತರಿದ್ದರು. ಗ್ರಾ.ವಿ.ವ ಸಂಘದ ಚೇರಮನ್ ಎಂ.ಆರ್. ಕಮತ, ಹಿರಿಯರಾದ ಸಿದ್ದಪ್ಪ ಸನದಿ, ಗ್ರಾಮದ ಕರುನಾಡು ರಕ್ಷಣಾ ವೇದಿಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಅರುಣ ಕಮತ, ಮಹಾಂತೇಶ ಕಮತ, ಸರಿತಾ ಜನ್ಮಟ್ಟಿ, ಶಿವಲೀಲಾ ಕಪರಟ್ಟಿ, ರೂಪಾ ಖನಗಾಂವಿ, ಜಿ. ಎನ್ ಹುಣಸಿಗಿಡದ, ಪರಶುರಾಮ ವಗ್ಗನ್ನವರ ಪಾಲ್ಗೊಂಡಿದ್ದರು.



# ರಕ್ತ ಎಷ್ಟು ಮುಖ್ಯವೋ ಕನ್ನಡವೂ ಅಷ್ಟೇ ಮುಖ್ಯ



**ಸಿಂದಗಿ:** ಪ್ರತಿಯೊಂದು ಸೋಲು ಗೆಲುವಿಗೂ ಕನ್ನಡ ಮಾಧ್ಯಮ. ದೇಹದಲ್ಲಿ ಹೃದಯ, ರಕ್ತ ಎಷ್ಟು ಮುಖ್ಯವೋ ಮಾತನಾಡಲು ಕನ್ನಡವೂ ಅಷ್ಟೇ ಮುಖ್ಯ ಎಂದು ಪ್ರಾಚಾರ್ಯ ಭೀಮನಗೌಡ ಸಿಂಗನಳ್ಳಿ ಹೇಳಿದರು.

ಪಟ್ಟಣದ ಪ.ವಿ.ವ.ಸಂಸ್ಥೆಯ ಆರ್.ಡಿ.ಪಾಟೀಲ ಪಪೂ ಕಲಾ,ವಾಣಿಜ್ಯ, ವಿಜ್ಞಾನ ಮಹಾವಿದ್ಯಾಲಯದಲ್ಲಿ ಜರುಗಿದ 69ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಕನ್ನಡಾಂಬೆ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು. ನಮ್ಮ ರಾಜ್ಯದ ನಕಾಶೆ ಬೇರೆ ರಾಜ್ಯಗಳ ನಕಾಶೆಗಿಂತ ಸುಂದರ. ಇವತ್ತು ಕಾಡು, ಗುಡ್ಡ, ಪ್ರಕೃತಿಯನ್ನು ತುಂಬ ಬಿಂಬಿಸುತ್ತದೆ. ನಾವು ಕನ್ನಡದಲ್ಲಿ ಹುಟ್ಟಿದ್ದಕ್ಕೆ ಹೆಮ್ಮೆಯಿದೆ. ಕನ್ನಡ ನಮ್ಮ ಭಾಷೆ. ಈ ಭಾಷೆಯ ಕಾಗುಣಿತ, ಅಮ್ಮ ಅನ್ನುವ ಪದ ಎಲ್ಲವೂ ಸೊಗಸು. ಕನ್ನಡವನ್ನು ನಾವು ತುಂಬಾ ಪ್ರೀತಿಸುತ್ತೇವೆ ಎಂದರು. ಉಪಪ್ರಾಚಾರ್ಯರಾದ ಪಿ.ವ್ಹಿ.ಮಹಲಿನಮಠ, ಎನ್.ಬಿ.ಪೂಜಾರಿ, ಬಿ.ಬಿ.ಜಮಾದಾರ, ಶಿವಶರಣ ಬೂದಿಹಾಳ, ಎಸ್.ಎಚ್. ಜಾಧವ, ಎಸ್.ಸಿ.ಜೋಗೂರ, ವ್ಹಿ.ಕೆ.ಹಿರೇಮಠ, ವಿಜಯಲಕ್ಷ್ಮೀ ಕನ್ನೊಳ್ಳಿ, ಗವಿಸಿದ್ದಪ್ಪ ಆನೆಗುಂದಿ, ವಿಶ್ವನಾಥ ನಂದಿಕೋಲ, ರಾಜಶ್ರೀ ಗಾಣಗೇರ್, ಜೆ.ಎಂ. ಗಾಣಗೇರ್, ಚಂದ್ರು ಬಬಲೇಶ್ವರ್, ಎಸ್.ಜಿ.ಮಾರ್ಸನಳ್ಳಿ, ಪ್ರಸನ್ ಜೋಗೂರ, ರಾಹುಲ ನಾರಾಯಣಕರ್, ಎನ್.ಎಂ.ಶೆಳ್ಳಗಿ, ಸುಭಾಸ ಹೊಸಮನಿ, ಉದಯ ಶಿವಸಿಂಪಿಗೇರ ಸೇರಿದಂತೆ ಇನ್ನಿತರರು ಇದ್ದರು.

## ಚೂರು-ಪಾರು

### ಪ್ರಭುದೇವರ ಮಂದಿರ ಲೋಕಾರ್ಪಣೆ: ಮುಸ್ಲಿಂ ಸಮಾಜದಿಂದ ೧ ಲಕ್ಷ ದೇಣಿಗೆ



**ತೇರದಾಳ:** ಪಟ್ಟಣದ ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ನೂತನ ಮಂದಿರ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಸ್ಥಳೀಯ ಮುಸ್ಲಿಂ ಬಾಂಧವರು ಐದು ಲಕ್ಷ ದೇಣಿಗೆ ನೀಡುವ ಮೂಲಕ ಹಿಂದು-ಮುಸ್ಲಿಂ ಭಾವೈಕ್ಯತೆಯನ್ನು ಮತ್ತಷ್ಟು ಗಟ್ಟಿಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶೇಗುಣಸಿ ವಿರಕ್ತಮಠದ ಡಾ. ಮಹಾಂತಪ್ರಭು ಶ್ರೀ, ದೇವನೊಬ್ಬ ನಾಮ ಹಲವು ಎಂಬಂತೆ ಅಲ್ಲಮಪ್ರಭು ದೇವರ ದೇವಸ್ಥಾನ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಮುಸ್ಲಿಂ ಬಾಂಧವರು ದೇಣಿಗೆ ನೀಡಿದ್ದು ನಿಜಕ್ಕೂ ಹೆಮ್ಮೆಯ ಸಂಗತಿ. ದೇಶದಲ್ಲಿ ಎಷ್ಟೋಂದು ಜಾತಿ, ಧರ್ಮ ಭಾಷೆಗಳಿದ್ದರು ನಾವೆಲ್ಲರೂ ಭಾರತೀಯರು ಎಂದು ಹೇಳುತ್ತೇವೆ. ಇದು ನಮ್ಮ ನಾಡಿನ ಮಣ್ಣಿನ ಗುಣ ಎಂದು ಬಣ್ಣಿಸಿದರು. ಸಮಾಜದ ಮುಖಂಡ ಮಾಸೂಂ ಇನಾಂದಾರ ಮಾತನಾಡಿ, ಪ್ರಭುದೇವರು ನಮ್ಮೂರಿನ ಶಕ್ತಿ ಆಗಿದ್ದಾರೆ. ಅವರ ಆಶೀರ್ವಾದ ಪ್ರತಿಯೊಂದು ಸಮಾಜದ ಮೇಲೆ ಇದೆ. ಇಂತಹ ಪುಣ್ಯದ ಕೆಲಸಕ್ಕೆ ನಾವು ಕೈ ಜೋಡಿಸಿದ್ದು ನಮ್ಮ ಸಮಾಜಕ್ಕೂ ಖುಷಿ ನೀಡಿದೆ ಎಂದು ಅಭಿಮಾನದಿಂದ ಹೇಳಿದರು. ಶಾಸಕ ಜಗದೀಶ ಗುಡಗುಂಟಿ, ದಸ್ತಗೀರ ತಾಂಬೋಳಿ, ಅಲ್ಲಾಬಕ್ಷ ಅಲಾಸ, ಸಲೀಂ ಹನಗಂಡಿ, ಮಹಮ್ಮದ ಜಮಖಂಡಿ, ಮುನೀರ ಮೋಮಿನ, ಬಸವರಾಜ ಬಾಳಿಕಾಯಿ, ದೇವಲ ದೇಸಾಯಿ, ನಾಗಪ್ಪ ಸನದಿ, ಹಾಪೀಜ್ ಮೌಲಾಅಲಿ ಚಿತ್ರಬಾನುಕೋಟೆ ಮತ್ತಿತರಿದ್ದರು.

### ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ



**ಬಸವನಬಾಗೇವಾಡಿಯ ಜನಪದ ಗಾಯಕ ಬಸವರಾಜ ಸಂಗಪ್ಪ ಹಾರಿವಾಳ ಅವರಿಗೆ ಜನಪದ ಕ್ಷೇತ್ರದಲ್ಲಿ ಮಾಡಿರುವ ಸಾಧನೆ ಗುರುತಿಸಿ ರಾಜ್ಯ ಸರ್ಕಾರ ಬೆಂಗಳೂರಿನಲ್ಲಿ ಜರುಗಿದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಪ್ರಸಕ್ತ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ, ಗೃಹ ಮಂತ್ರಿ ಪರಮೇಶ್ವರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ ತಂಗಡಗಿ, ಸಭಾಪತಿ ಬಸವರಾಜ ಹೊರಟ್ಟಿ ಸೇರಿದಂತೆ ವಿವಿಧ ಗಣ್ಯರು, ಅಧಿಕಾರಿಗಳು ಉಪಸ್ಥಿತಿರಿದ್ದರು.**

# ಕ್ರೀಡೆಯಿಂದ ದೈಹಿಕ, ಮಾನಸಿಕವಾಗಿ ಸದೃಢ

## ರಾಜ್ಯಮಟ್ಟದ ವ್ಹಾಲಿಬಾಲ್ ಕ್ರೀಡಾಕೂಟ ಉದ್ಘಾಟಿಸಿದ ಸಂಸದ ರಮೇಶ ಜಿಗಜಿಣಗಿ

**ತಾಳಿಕೋಟೆ:** ಕ್ರೀಡೆ ದೈಹಿಕವಾಗಿ ಅಷ್ಟೇ ಅಲ್ಲದೇ ಮಾನಸಿಕವಾಗಿಯೂ ಸದೃಢಗೊಳಿಸುವಂತಹದ್ದಾಗಿದೆ ಅಂತಹ ಕ್ರೀಡೆಯನ್ನು ಮನೋಭಾವನೆಯಿಂದ ಆಡಬೇಕೆಂದು ವಿಜಯಪುರ ಸಂಸದ ರಮೇಶ ಜಿಗಜಿಣಗಿ ಅವರು ಹೇಳಿದರು.

ಪಟ್ಟಣದ ಶ್ರೀ ಎಸ್. ಎಸ್. ವಿದ್ಯಾ ಸಂಸ್ಥೆಯ ಆವರಣದಲ್ಲಿ ಕರ್ನಾಟಕ ಸರ್ಕಾರ ಶಾಲಾ ಶಿಕ್ಷಣ ಇಲಾಖೆ(ಪಧವಿಪೂರ್ವ) ಬೆಂಗಳೂರ, ಶಾಲಾ ಶಿಕ್ಷಣ ಇಲಾಖೆ (ಪಧವಿಪೂರ್ವ) ವಿಜಯಪುರ ಹಾಗೂ ಶ್ರೀ ಶಿವಯೋಗಿ ಸಂಗಮಾರ್ಯ ವಇದ್ಯಾ ಸಂಸ್ಥೆಯ ಶ್ರೀ ಎಚ್.ಎಸ್.ಪಾಟೀಲ ಸ್ವತಂತ್ರ ಪದವಿ ಪೂರ್ವ ಕಾಲೇಜು ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ 2024-25ನೇ ಸಾಲಿನ ಪದವಿ ಪೂರ್ವ ಕಾಲೇಜುಗಳ ಬಾಲಕ/ಬಾಲಕಿಂಮರ ರಾಜ್ಯಮಟ್ಟದ ವ್ಹಾಲಿಬಾಲ್ ಕ್ರೀಡಾಕೂಟವನ್ನು ಜ್ಯೋತಿ ಬೆಳಗಿಸುವದರೊಂದಿಗೆ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ರಾಜ್ಯಮಟ್ಟದ ವ್ಹಾಲಿಬಾಲ್ ಕ್ರೀಡಾಕೂಟವು ಐತಿಹಾಸಿಕ ತಾಳಿಕೋಟೆ ನಗರದಲ್ಲಿ ನಡೆಯುತ್ತಿರುವದು ಹೆಮ್ಮೆಯ ಸಂಗತಿಯಾಗಿದೆ ಕ್ರೀಡೆಯಲ್ಲಿ ಸೋಲು ಮತ್ತು ಗೆಲವು ಇದ್ದೇ ಇರುತ್ತದೆ ಗೆದ್ದವರು ಖುಷಿ ಪಡಬಾರದು, ಸೋತವರು ಕುಗ್ಗಬಾರದು ಯಾಕೆಂದರೆ ಸೋಲು ಎಂಬುದು ಗೆಲುವಿನ ಸ್ಥಂಭವಾಗಿದೆ ಇದನ್ನು ಗಮನದಲ್ಲಿಟ್ಟುಕೊಂಡು ಕ್ರೀಡೆಯನ್ನು ಆಡಬೇಕು ಕ್ರೀಡೆಯಲ್ಲಿ ಯಾವುದೇ ಅಡೆತಡೆಯಾಗದಂತೆ ನಿರ್ಣಾಯಕರ ನಿರ್ಣಯಕ್ಕೆ ಬದ್ದರಾಗಿ ಕ್ರೀಡೆಯನ್ನು ಆಡಬೇಕೆಂದ ಅವರು ಇಲ್ಲಿ ಗೆದ್ದವರು ಮುಂದೆ ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಭಾಗಿಯಾಗಿ ಮುಂದೊಂದು ದಿನ ದೇಶದ ಪ್ರತಿನಿಧಿಗಳಾಗಿ ಆಟಗಳನ್ನು ಆಡಲಿದ್ದಾರೆ ಅವರನ್ನು ಹುರಿದುಂಬಿಸುವಂತಹ ಕಾರ್ಯ ಎಲ್ಲರದ್ದಾಗಬೇಕೆಂದರು.



ಕ್ರೀಡಾದ್ವಜಾರೋಹಣವನ್ನು ನೇರವೇರಿಸಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಮುದ್ದೇಬಿಹಾಳ ಮತಕ್ಷೇತ್ರದ ಶಾಸಕ ಸಿ.ಎಸ್.ನಾಡಗೌಡ(ಅಪ್ಪಾಜಿ) ಅವರು ಮಾತನಾಡಿ ತಾಳಿಕೋಟೆಯಲ್ಲಿ ನಡೆದಿರುವ ವ್ಹಾಲಿಬಾಲ್ ಕ್ರೀಡಾಕೂಟವನ್ನು ನೋಡಿದರೆ ಇಡೀ ಅಖಂಡ ಕರ್ನಾಟಕವನ್ನು ನೋಡಿದಂತೆ ಭಾಸವಾಗುತ್ತಿದೆ ನಾವು ಇಡುವ ಭವಿಷ್ಯದ ಹೆಜ್ಜೆ ಗುರುತುಗಳು ನಮ್ಮ ಇಡೀ ಭವಿಷ್ಯವನ್ನೇ ಮತ್ತು ದಿಕ್ಸೂಚಿಂಯನ್ನು ಬದಲಾಯಿಸಬೇಕು ಆ ನಿಟ್ಟಿನಲ್ಲಿ ಎಲ್ಲ ನಡೆಯಬೇಕಿದೆ ಕ್ರೀಡೆಯಲ್ಲಾಗಲಿ ವಿದ್ಯೆಯಲ್ಲಾಗಲಿ, ಜೀವನದಲ್ಲಿ ಆಗಲಿ ಯಶಸ್ವಿ ಕಾಣಬೇಕೆಂದರೆ ಅವರವರ ಆಸಕ್ತಿಗೆ ತಕ್ಕಂತೆ ಹೆಜ್ಜೆಯನ್ನಿಡಬೇಕು ಅಂದಾಗ ಅವರ ಗುರಿಯನ್ನು ಮುಟ್ಟಲು ಸಾದ್ಯವಾಗಲಿದೆ ಕ್ರೀಡೆಗೆ ಸಂಬಂದಿಸಿ ಸರ್ಕಾರದ ಮಟ್ಟದಲ್ಲಿ ಹಲವಾರು ವಿಚಾರಗಳು ಚರ್ಚೆ ನಡೆಯಬೇಕಿದೆ ಪ್ರತಿ ತಾಲೂಕಾ ಕೇಂದ್ರಗಳಲ್ಲಿ ಕ್ರೀಡಾಂಗಣವೆಂಬುದು ಆಗಬೇಕಿದೆ ಬೆಂಗಳೂರ, ವಿಜಯಪುರ ಒಳಗೊಂಡು ಮಹಾ ನಗರಗಳಲ್ಲಿ ದೊಡ್ಡ ದೊಡ್ಡ ಕ್ರೀಡಾಂಗಣಗಳಿವೆ ಅದರಂತೆ ಮುದ್ದೇಬಿಹಾಳದಲ್ಲಿಯೂ ಕೂಡಾ 16 ಏಕರೆ ಜಮೀನು ಕೊಡಿಸಿದ್ದೇನೆ ಕ್ರೀಡಾಂಗಣ ನಿರ್ಮಾಣ ಕಾರ್ಯ ನಡೆದಿದೆ ಅದು ಯಾವಾಗ ಮುಗಿಯುತ್ತದೆ ಗೊತ್ತಿಲ್ಲಾ ಆದರೆ ಉತ್ತಮ ಕ್ರೀಡಾಂಗಣವಾಗಲಿದೆ ಸರ್ಕಾರಗಳು ವಿದ್ಯಾ ಸಂಸ್ಥೆಗೆ ನೀಡಿದ ಮಹತ್ವವನ್ನು ಕ್ರೀಡೆಗಳಿಗೂ ಕೊಡಬೇಕು ಉತ್ತಮ ದೇಹ ಹೊಂದಿದವರು, ಉತ್ತಮ ವಿದ್ಯಾವಂತನಾಗಲಿದ್ದಾನೆ ಎಂದರು.ಹೆಜ್ಜೆ ಗುರುತು ಸ್ಮರಣ ಸಂಚಿಕೆ ಬಿಡಗಡೆಗೊಳಿಸಿದ ಬೆಂಗಳೂರ ಕ.ಆ.ಸೇ. ಜಂಟಿ ನಿರ್ದೇಶಕರು ಆಡಳಿತ ಇಲಾಖೆ ನಿರ್ದೇಶಕರ ಕಚೇರಿಯ ಶಾಲಾ ಶಿಕ್ಷಣ ಇಲಾಖೆಯ ಜೆ.ಎನ್.ಶ್ವೇತಾ ಮಾತನಾಡಿದರು.ಕ್ರೀಡಾ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಬೆಂಗಳೂರಿನ ಗುಬ್ಬಿಗೂಡ ರಮೇಶ ಅವರು ಮಾತನಾಡಿದರು.

ಖಾಸ್ಗತೇಶ್ವರ ಮಠದ ಉಸ್ತುವಾರಿ ವೇ.ಮುರುಘೇಶ ವಿರಕ್ತಮಠ ಸಾನ್ನಿಧ್ಯ ವಹಿಸಿದ್ದರು. ಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ.ಎಸ್.ಪಾಟೀಲ(ಯಾಳಗಿ) ಅವರು ಕ್ರೀಡಾಜ್ಯೋತಿ ಸ್ವಿಕರಿಸಿದರು.ದಿ.ಡಿ.ವಿ.ಪಾಟೀಲ, ದಿ.ಬಸವರಾಜ ಗದಗ, ದಿ..ಯಶವಂತ ಢವಳಗಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಕಾರ್ಯಕ್ರಮಕ್ಕೂ ಮೊದಲು ಕ್ರೀಡಾಪಟುಗಳಿಂದ ಪ್ರಭಾತಪೇರಿ ನಡೆಸಲಾಯಿತು.3 ದಿನಗಳ ಕಾಲ ನಡೆಯಲಿರುವ ವ್ಹಾಲಿಬಾಲ್ ಕ್ರೀಡಾಕೂಟದಲ್ಲಿ ಭಾಗಿಯಾಗುವ ಎಲ್ಲರಿಗೂ ಊಟದ ವ್ಯವಸ್ಥೆಯನ್ನು ಕಲ್ಪಿಸಿದ ಜೆಎಸ್‌ಜಿ ಪೌಂಡೇಶನ್‌ದ ಕಾರ್ಯದರ್ಶಿ ಶ್ರೀಕಾಂತ ಪತ್ತಾರ, ಬಸನಗೌಡ ಪಾಟೀಲ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯ ಮೇಲೆ ಎಸ್.ಎಸ್.ವಿದ್ಯಾ ಸಂಸ್ಥೆಯ ಅಧ್ಯಕ್ಷ ಎಚ್.ಎಸ್.ಪಾಟೀಲ, ಕಾರ್ಯದರ್ಶಿ ಸಚೀನ ಪಾಟೀಲ, ಆಡಳಿತಾಧಿಕಾರಿ ಕಿರಣ ಪಾಟೀಲ, ಬಾಪುಗೌಡ ಪಾಟೀಲ(ಚಬನೂರ), ಬಿಜೆಪಿ ಜಿಲ್ಲಾ ಅಧ್ಯಕ್ಷ ಆರ್. ಎಸ್.ಪಾಟೀಲ(ಕೂಚಬಾಳ), ಜೆಡಿಎಸ್ ಜಿಲ್ಲಾ ಅಧ್ಯಕ್ಷ ಬಸನಗೌಡ ಮಾಡಗಿ, ನಿವೃತ್ತ ಎಸ್‌ಪಿ ಎಸ್.ಬಿ.ಕಟ್ಟಿಮನಿ, ಕಾಶಿಮಪಟೆಲ ಮೂಕೀಹಾಳ, ಪ್ರಭುಗೌಡ ಮದರಕಲ್ಲ, ಡಿಡಿಪಿಓ ಡಾ.ಚಂದ್ರಶೇಖರ ಹೊಸಮನಿ, ಅಶೋಕ ಕುಮಾರ, ಗೋಪಾಲ, ಎಸ್.ಎಸ್.ಡೌರಿ, ಮಧುಸುದನ ಮಾಗಿ, ರಮೇಶ ದಡ್ಡಿ, ಶರಣು ಬೆಂಗಳೂರ, ಎಂ.ಡಿ.ಹಬ್ಬಿ, ಶಾಂತೇಶ ದುರ್ಗಿ, ಎ.ಎಸ್.ಪಾಟೀಲ, ಎಂ.ಬಿ.ಹೂಗಾರ, ಎಸ್. ಆರ್.ಮುತ್ತಗಿ, ನಿಂಗನಗೌಡ ಬಾವೂರ, ಕೆ.ಆರ್.ಉಪ್ಪಾರ, ಕೆ.ಜಿ.ಲಮಾಣೆ, ಶಿವನಗೌಡ ಬಿರಾದಾರ, ಪ್ರಕಾಶ ಗೊಂಗಡಿ, ಆರ್.ಎಲ್.ಕೊಪ್ಪದ, ಅಶೋಕಗೌಡ ಬಿರಾದಾರ, ಬಿ.ಎನ್. ಕುಳಗೇರಿ, ಹಣಮಂತರಾಯ ಬಾಗೇವಾಡಿ, ಸಿದ್ದನಗೌಡ ಪಾಟೀಲ, ವ್ಹಿ.ಸಿ.ಹಿರೇಮಠ, ನಾನಾಗೌಡ ಪಾಟೀಲ್, ಎಸ್.ಎಂ.ಸಜ್ಜನ್, ಕೆ.ಜಿ.ಲಮಾಣಿ, ಪ್ರಾಚಾರ್ಯ ಎಮ್. ಎಸ್.ಬಿರಾದಾರ, ದೈಹಿಕ ಉಪನ್ಯಾಸಕ ಎಸ್.ಬಿ.ಮಂಗ್ಯಾಳ್ ದೈಹಿಕ ಶಿಕ್ಷಕ ಎಮ್.ಎಸ್.ರಾಯಗೊಂಡ, ಪಿಯು ಕಾಲೇಜ್ ಪ್ರಾಚಾರ್ಯರು, ಉಪನ್ಯಾಸಕರು, ಶಿಕ್ಷಕರು, ಕ್ರೀಡಾಕೂಟಪಟುಗಳು, ಇದ್ದರು. ಸಂತೋಷ ಜಾಮಗೊಂಡಿ ಸ್ವಾಗತಿಸಿದರು. ಶಿಕ್ಷಕ ಬಿ.ಐ..ಹಿರೇಹೊಳಿ, ಎ.ಬಿ.ಇರಾಜ ನಿರೂಪಿಸಿದರು. ಸಾಹೇಬಗೌಡ ಬಿರಾದಾರ ವಂದಿಸಿದರು.

# ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕನ್ನಡ ರಾಜ್ಯೋತ್ಸವ

**ಬಸವನಬಾಗೇವಾಡಿ:** ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕನ್ನಡ ರಾಜ್ಯೋತ್ಸವದಂಗವಾಗಿ ಶುಕ್ರವಾರ ಕನ್ನಡ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ನಮನಗಳನ್ನು ಸಲ್ಲಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಶಿಕ್ಷಕ ಬಿ.ಎಸ್. ಮೇಟಿ ಮಾತನಾಡಿ, ಕನ್ನಡ ನಾಡು ಏಕೀಕರಣವಾಗಲು ಸಾಕಷ್ಟು ಸಮಸ್ಯೆ ಎಡರು-ತೊಡರುಗಳನ್ನು ಎದುರಿಸಿದೆ. ಅಪಾರ ಮಹನೀಯರು ಕನ್ನಡ ನಾಡು ಏಕೀಕರಣವಾಗಲು ತಮ್ಮ ಮನ-ಧನವನ್ನು ಅರ್ಪಿಸುವ ಮೂಲಕ ಚೆಲುವ ಕನ್ನಡ ನಾಡನ್ನು ನಮಗೆ ಧಾರೆ ಎರೆದು ಕೊಟ್ಟಿದ್ದು ನಮ್ಮೆಲ್ಲರ ಸುದೈವವಾಗಿದೆ. ಇಂತಹ ಚೆಲುವು ಕನ್ನಡ ನಾಡು ದೇಶದಲ್ಲಿ ಅತ್ಯಂತ ಸುರಕ್ಷಿತ, ಶಾಂತಿಯ ನಾಡಾಗಿದೆ. ನಮ್ಮ ನಾಡು-ನುಡಿಗಾಗಿ ನಾವು ಹೋರಾಟ ಮಾಡಲು ಸದಾ ಸಿದ್ದರಾಗಬೇಕಿದೆ ಎಂದರು.



ಪ್ರಾಚೀನ ಭಾಷೆಗಳಲ್ಲಿ ಕನ್ನಡವೂ ಒಂದಾಗಿದೆ. ಕನ್ನಡಕ್ಕೆ ಸುಮಾರು ನಾಲ್ಕು ಸಾವಿರ ವರ್ಷಗಳ ಇತಿಹಾಸವಿದೆ. ಭಾಷಾವಾರು ರಾಜ್ಯಗಳ ವಿಂಗಡನೆಯ ಸಂದರ್ಭದಲ್ಲಿಯೂ ಸಾಕಷ್ಟು ಅನ್ಯಾಯವಾಗಿದೆ. ರಾಜ್ಯಕ್ಕೆ ಇನ್ನೂ ಅನೇಕ ಪ್ರದೇಶಗಳು ಬರಬೇಕಿತ್ತು. ಆಲೂರು ವೆಂಕಟರಾಯ, ಜಯದೇವಿ ತಾಯಿ ಲಿಗಾಡೆ, ಕಂಬಳಿ ಸಿದ್ದಪ್ಪ, ಡೆಪ್ಯೂಟಿ ಚನ್ನಬಸಪ್ಪ, ಗಂಗಾಧರ ದೇಶಪಾಂಡೆ, ಕೆ.ಸಿ.ರೆಡ್ಡಿ ಸೇರಿದಂತೆ ಅನೇಕ ಮಹನೀಯರು ಕನ್ನಡ ನಾಡು-ನುಡಿಗಾಗಿ ಶ್ರಮಿಸಿದ್ದಾರೆ. ಇವರ ಶ್ರಮದ ಫಲವೇ ನಾವೆಲ್ಲರೂ ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದೇವೆ ಎಂದರು.

ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಬಿ.ಎಂ.ಸಾಲವಾಡಗಿ ಮಾತನಾಡಿ,ಕನ್ನಡ ನಾಡಿನ ಉದಯ, ಬೆಳವಣಿಗೆ, ಮಹತ್ವ ಕುರಿತು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎ.ವಿ.ಸೂರ್ಯವಂಶಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಮಾಜಶಾಸ್ತ್ರದ ಮುಖ್ಯಸ್ಥ ಡಾ.ವೈ.ಬಿ.ನಾಯಕ, ದೈಹಿಕ ನಿರ್ದೇಶಕ ವಿ.ಎನ್.ರಜಪೂತ, ಪ್ರೊ.ಎಂ.ಕೆ.ಯಾಧವ, ಪ್ರೊ.ಪಿ.ಎಸ್.ನಾಟೀಕಾರ, ಎಂ.ಆರ್. ಮಮದಾಪುರ, ಡಾ.ಎಸ್.ಬಿ.ಜನಗೊಂಡ ಇತರರು ಇದ್ದರು. ರೇಖಾ ಕೌಲಗಿ, ಈಶ್ವರಿ ಕೋಟ್ಯಾಳ ಸ್ವಾಗತ ಗೀತೆ ಹಾಡಿದರು. ಅಕ್ಷತಾ ಕರಾಡೆ ಸ್ವಾಗತಿಸಿದರು. ಚಂದ್ರಶೇಖರ ರೆಡ್ಡಿ ನಿರೂಪಿಸಿದರು.ರಫೀಕ ಸುಲೇಮಾನ ವಂದಿಸಿದರು. ಇದೇ ಸಂದರ್ಭದಲ್ಲಿ ರಾಜ್ಯೋತ್ಸವದಂಗವಾಗಿ ಹಮ್ಮಿಕೊಂಡಿದ್ದ ಪಠ್ಯೇತರ ಚಟುವಟಿಕೆಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ, ಬಹುಮಾನ ವಿತರಿಸಲಾಯಿತು.

# ರಾಜ್ಯೋತ್ಸವ ಸಾಧಕ ಸಾಧಕರಿಗೆ ಸನ್ಮಾನ

**ಮುದ್ದೇಬಿಹಾಳ:** ಪಟ್ಟಣದಲ್ಲಿ ತಾಲೂಕು ಆಡಳಿತ, ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 69ನೇ ಕರ್ನಾಟಕ ರಾಜ್ಯೋತ್ಸವವನ್ನು ಸಾಧಕ ಸಾಹಿತಿಗಳಿಗೆ, ಎಸ್ಸೆಸ್ಸೆಲ್ಸಿ ಕನ್ನಡ ವಿಷಯದಲ್ಲಿ ಹೆಚ್ಚು ಅಂಕ ಗಳಿಸಿದ 34 ವಿದ್ಯಾರ್ಥಿಗಳಿಗೆ ಸನ್ಮಾನಿಸಿ, ನೆನಪಿನ ಕಾಣಿಕೆಯಾಗಿ ಕನ್ನಡ ವ್ಯಾಕರಣ ಪುಸ್ತಕವನ್ನು ನೀಡುವ ಮೂಲಕ ಶುಕ್ರವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ತಾಲೂಕು ಆಡಳಿತ ಸೌಧ ಎದುರು ತಹಶೀಲ್ದಾರ್ ಬಲರಾಮ ಕಟ್ಟಿಮನಿ ಧ್ವಜಾರೋಹಣ ನೆರವೇರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಕಾಮರಾಜ ಅವರು, ನಮ್ಮ ರಾಜ್ಯದ ಸಾಂಸ್ಕೃತಿಕ ಪರಂಪರೆಯನ್ನು ಗೌರವಿಸಬೇಕು. ಕನ್ನಡ ನಾಡು, ನುಡಿ, ನೆಲ, ಜಲ, ಭಾಷೆ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಮಾತೃಭಾಷೆ ಕನ್ನಡ ಬಳಕೆಗೆ ಮೊದಲ ಆದ್ಯತೆ ಕೊಡಬೇಕು. ಕನ್ನಡ ಬಳಕೆ ಕುರಿತು ಸರ್ಕಾರ ಹೊರಡಿಸಿರುವ ಆದೇಶವನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸಿ ವರ್ಷಪೂರ್ತಿ ಕನ್ನಡಾಂಬೆಯ ಸ್ಮರಣೆ ಮಾಡುವಂತಾಗಬೇಕು ಎಂದರು.

ತಹಶೀಲ್ದಾರ್ ಬಲರಾಮ ಅವರು ಮಾತನಾಡಿ,



ವಿದ್ಯಾರ್ಥಿ ಜೀವನದಲ್ಲಿ ಕನ್ನಡ ಭಾಷೆ ಕಲಿಕೆಗೆ ಪ್ರತಿಯೊಬ್ಬರೂ ಹೆಚ್ಚಿನ ಆಸಕ್ತಿ ತೋರಿಸಬೇಕು. ಎಸ್ಸೆಸ್ಸೆಲ್ಸಿ ಸಾಧಕರು ಭವಿಷ್ಯದಲ್ಲಿ ಕನ್ನಡದಲ್ಲೇ ಉನ್ನತ ಶಿಕ್ಷಣ ಪಡೆದು ಮಾತೃಭಾಷೆಯ ಗೌರವ ಹೆಚ್ಚಿಸಬೇಕು. ಕನ್ನಡ ಸಾಹಿತಿಗಳು, ಕವಿಗಳು ನಮ್ಮ ಬಾಷೆಯ ಮೆರುಗನ್ನು ಇನ್ನಷ್ಟು ಹೆಚ್ಚುವಂತೆ ನೋಡಿಕೊಂಡು ಇತರರಿಗೆ ಮಾದರಿಯಾಗಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಸ್.ಸಾವಳಗಿ, ಕಸಾಪ ನಿಕಟಪೂರ್ವ ಅಧ್ಯಕ್ಷ ಎಂ.ಬಿ.ನಾವದಗಿ ಮಾತನಾಡಿದರು. ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ, ಉಪಾಧ್ಯಕ್ಷೆ ಪ್ರೀತಿ ದೇಗಿನಾಳ, ಸದಸ್ಯರಾದ ಚನ್ನಪ್ಪ ಕಂಠಿ, ಮಹ್ಮದರಫೀಕ ದ್ರಾಕ್ಷಿ, ಸದಾಶಿವ ಮಾಗಿ, ಶಿವು ಶಿವಪೂರ, ತಾಪಂ ಇಓ ನಿಂಗಪ್ಪ ಮಸಳಿ, ಸಿಪಿಐ ಮಲ್ಲಿಕಾರ್ಜುನ ತುಳಸೀಗೇರಿ, ಪುರಸಭೆ ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ, ಕರ್ನಾಟಕ ನವನಿರ್ಮಾಣ ಸೇನೆ ಅಧ್ಯಕ್ಷ ರಾಜುಗೌಡ ತುಂಬಗಿ, ವಿವಿಧ ಸಂಘಟನೆಗಳ ಪದಾಧಿಕಾರಿಗಳಾದ ಎಸ್.ಆರ್.ಕಟ್ಟಿಮನಿ, ಬಿ.ಎಚ್.ಮುದ್ನೂರ, ಹುಸೇನ ಮುಲ್ಲಾ, ಮಂಜುನಾಥ ಕೊಪ್ಪ, ಸಂಗಯ್ಯ ಸಾರಂಗಮಠ, ಪ್ರಶಾಂತ ಕಾಳೆ,ವಿರೇಶ ಗುರಮಠ

ಚಂದ್ರಶೇಖರ ಕಲಾಲ ಸೇರಿ ಹಲವರು ವೇದಿಕೆಯಲ್ಲಿದ್ದರು.

ಸಾಹಿತಿಗಳಾದ ಐ.ಬಿ.ಹಿರೇಮಠ, ಡಾ.ಪ್ರಕಾಶ ನರಗುಂದ, ಶಿವಪುತ್ರ ಅಜಮನಿ, ಎಚ್. ಆರ್.ಬಾಗವಾನ (ವಿಬಿಸಿ), ಎಸ್ಸೆಸ್ಸೆಲ್ಸಿ ಕನ್ನಡ ವಿಷಯದಲ್ಲಿ ಶೇ.100 ಅಂಕ ಗಳಿಸಿದ 34 ವಿದ್ಯಾರ್ಥಿಗಳಿಗೆ, ಸಾರಿಗೆ ಸಂಸ್ಥೆ ಬಸ್ ಅಲಂಕರಿಸಿ ಕನ್ನಡ ಪ್ರೇಮ ಅನಾವರಣಗೊಳಿಸಿದ ಚಾಲಕರು, ನಿರ್ವಾಹಕರನ್ನು ತಾಲೂಕಾಡಳಿತದಿಂದ ಸನ್ಮಾನಿಸಿ ಗೌರವಿಸಲಾಯಿತು.

ಸ್ತಬ್ಧ ಚಿತ್ರಗಳಲ್ಲಿ ಸರ್ಕಾರಿ ಉರ್ದು ಹೆಣ್ಣು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯ ಒನಕೆ ಓಬವ್ವ ಪ್ರಥಮ, ವಿಬಿಸಿ ಪ್ರೌಢಶಾಲೆಯ ಬೀಸುವ ಕಲ್ಲಿನ ಸೊಗಡು ದ್ವಿತೀಯ, ಬಸವ ಇಂಟರ್‌ನ್ಯಾಶನಲ್ ಶಾಲೆಯ ಪುರಂದರದಾಸ ತೃತಿಯ ಸ್ಥಾನ ಪಡೆದುಕೊಂಡು ಬಹುಮಾನ, ಸ್ಮರಣಿಕೆ, ಪ್ರಶಸ್ತಿ ಮುಡಿಗೇರಿಸಿಕೊಂಡವು. ಭಾಗವಹಿಸಿದ ಶಾಲೆಗಳಿಗೆ ಸ್ಮರಣಿಕೆ, ಪ್ರಶಸ್ತಿ ಪತ್ರ ನೀಡಿ ಪ್ರೋತ್ಸಾಹಿಸಲಾಯಿತು.

ಸಂಗಮೇಶ ಶಿವಣಗಿ ತಂಡದವರು ನಾಡಗೀತೆ ಹಾಡಿ ಸಂಗೀತ ಸೇವೆ ನೀಡಿದರು. ಅಕ್ಷರದಾಸೋಹ ಸಹಾಯಕ ನಿರ್ದೇಶಕ ಎಂ.ಎಂ.ಬೆಳಗಲ್ಲ ಸ್ವಾಗತಿಸಿದರು. ಶಿಕ್ಷಕ ಟಿ.ಡಿ.ಲಮಾಣಿ ಕಾರ್ಯಕ್ರಮ ನಿರ್ವಹಿಸಿದರು.

ಬೆಳಿಗ್ಗೆ 9 ಶಾಲೆಗಳ ಬಸವಣ್ಣ, ಸಂತ ಕನಕದಾಸ, ಅಕ್ಕಮಹಾದೇವಿ, ಒನಕೆ ಓಬವ್ವ, ಸರ್ವಜ್ಞ, ಬೀಸುವ ಕಲ್ಲಿನ ಸೊಗಡು, ಡೊಳ್ಳು ಕುಣಿತ, ಪುರಂದರದಾಸ, ಸಂತ ಶಿಶುನಾಳ ಶರೀಫ ಸ್ತಬ್ಧಚಿತ್ರಗಳ ಸಮೇತ ನಾಡದೇವಿ ಭುವನೇಶ್ವರಿಯ ಭಾವಚಿತ್ರದ ಮೆರವಣಿಗೆ ಪಟ್ಟಣದಲ್ಲೆಲ್ಲ ಸಂಚರಿಸಿ ತಾಲೂಕು ಆಡಳಿತ ಸೌಧದ ಎದುರು ಸಮಾರೋಪಗೊಂಡಿತು.

# ಅಳುವಿನ ಅಂಚಿನಲ್ಲಿರುವ ನಮ್ಮ ಮೂಲ ಸಂಪ್ರದಾಯ, ಸಂಸ್ಕೃತಿ ಉಳಿಸಬೇಕಿದೆ



**ಧಾರವಾಡ:** ಇಂದಿನ ಆಧುನಿಕ ತಂತ್ರಜ್ಞಾನ ಯುಗದಲ್ಲಿ ನಮ್ಮ ಮೂಲ ಸಂಪ್ರದಾಯ ಹಾಗೂ ಸಂಸ್ಕೃತಿ ಅಳುವಿನ ಅಂಚಿನಲ್ಲಿದೆ ಎಂದು ಯುವ ನಾಯಕರು ಬ್ಲಾಕ್ ಕಾಂಗ್ರೆಸ ಅಧ್ಯಕ್ಷರಾದ ಅರವಿಂದ ಎಗನಗೌಡರ ಅಭಿಪ್ರಾಯಪಟ್ಟರು.

ಮಾರುತಿ ಭಜನಾ ಸಂಘ ಹಾಗೂ ಮೃತ್ಯುಂಜಯ ಸಾಂಸ್ಕೃತಿಕ ಕಲಾ ಸಂಘ, ಧಾರವಾಡ ಇವರು ರಾ. ಹ. ದೇಶಪಾಂಡೆ ಸಭಾಭವನದಲ್ಲಿ ಏರ್ಪಡಿಸಿದ್ದ 'ಜಾನಪದ ಸಿರಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಇವೆಲ್ಲಾ ಸಂಪ್ರದಾಯಗಳು ಶುಭಕಾರ್ಯಗಳಲ್ಲಿ ಜಾತ್ರೆಯಲ್ಲಿ ಮದುವೆಗಳಲ್ಲಿ ಜನಪದ ಕಲಾವಿದರನ್ನು ಕರೆದು ಸಂಪ್ರದಾಯ ಪದಗಳನ್ನು ಹಾಡಿಸುತ್ತಿದ್ದರು ಜಾತ್ರೆಯ ಮೆರವಣಿಗೆ ಸಂದರ್ಭದಲ್ಲಿ ಮಂಗಳವಾದ್ಯಗಳನ್ನು ನುಡಿಸುತ್ತಾ ಜಾತ್ರೆಗೆ ಮೆರಗು ತರುತ್ತಿದ್ದರು ಗುಡಿ ಗುಂಡಾರಗಳಲ್ಲಿ ಭಜನಾ ಕಲಾವಿದರನ್ನು ಕರೆದು ತತ್ವ ಪದಗಳನ್ನು ಹಾಡಿಸುತ್ತಿದ್ದರು ಇಂಥಾ ಒಂದು ಸಂಪ್ರದಾಯ ಗ್ರಾಮೀಣ ಭಾಗದಲ್ಲಿ ಉಳದಿದ್ದು ಇದು ಕೂಡಾ ಇವತ್ತಿನ ದಿನಮಾನಗಳಲ್ಲಿ ನಶಿಸಿ ಹೋಗುತ್ತಿದ್ದು ಇದನ್ನು ಉಳಿಸಿ ಬೆಳಸಲು ಇಂಥಾ ಕಲಾವಿದರಿಗೆ ನಾನು ಬೆನ್ನೆಲಬಾಗಿ ನಿಂತು ಸಹರಿಸುತ್ತೇನೆ ಅಧ್ಯಕ್ಷತೆ ವಹಿಸಿದ ಎಸ್.ಎನ್ ಬಿದರಳ್ಳಿ ಕಲಾವಿದರ ಸಮಸ್ಯೆಗಳನ್ನು ನಾವೆಲ್ಲಾ ಹಿರಿಯರು ಕೂಡಿ ಚಿಂತನಮಂತನ ಮಾಡಿ ಕಲಾವಿದರಿಗೆ ಸರಕಾರದಿಂದ ಸಿಗುವ ಸೌಲಭ್ಯಗಳನ್ನು ಪ್ರಾಮಾಣಿಕತೆಯಿಂದ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು.ಅತಿಥಿಯಾಗಿ ನಾಗರಾಜ ಶಿಗ್ಗಾಂವ, ಮಾರುತಿ ಸಂಘ ಅಧ್ಯಕ್ಷರಾದ ಮಹಾದೇವಪ್ಪ ಗದಗ, ಮೃತ್ಯುಂಜಯ ಸಂಘದ ಅಧ್ಯಕ್ಷರಾದ ಶ್ರೀಮತಿ ನೀಲವ್ವ ಜಗಾಪುರ, ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಎಕ್ಕೆರಪ್ಪ ನಡುವಿನಮನಿ (ಶಾನವಾಡ ಮಾಸ್ತರ) ನಡೆಸಿಕೊಟ್ಟರು.


## ವಿಜ್ರಂಭನೆಯಿಂದ ಜರುಗಿದ ಮುಳ್ಳೂರ ಅನ್ನದಾನೇಶ್ವರ ಮಹಾರಥೋತ್ಸವ



ರಾಮದುರ್ಗ : ತಾಲೂಕಿನ ಮುಳ್ಳೂರ ಗ್ರಾಮದ ಶ್ರೀ ಅನ್ನದಾನೇಶ್ವರ ಮಠದ ರಥೋತ್ಸವಕ್ಕೆ ಶ್ರೀಮಠದ ಪೀಠಾಧಿಪತಿ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ವಿಶೇಷ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ಪ್ರತಿವರ್ಷ ದೀಪಾವಳಿ ಪಾಢ್ಯದ ಂದು ನಡೆಯುವ ರಥ-ೋತ್ಸವನ್ನು ಮುಳ್ಳೂರ, ಕಡ್ಲಿಕೊಪ್ಪ, ಮುದೇನಕೊಪ್ಪ, ಲಖನಾಯ್ಕನಕೊಪ್ಪ, ಜಾಲಿಕಟ್ಟಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತಾಧಿಗಳು ಪಾಲ್ಗೊಂಡು, ರಥಕ್ಕೆ ಉತ್ತತ್ತಿ, ಬಾಳೆಹಣ್ಣು ಎಸೆದು ಭಕ್ತಿಭಾವ ಮೆರೆಯುತ್ತಾರೆ. ಈ ಸಂದರ್ಭದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಮುಖಂಡರು ಸೇರಿದಂತೆ ಸಹಸ್ರಾರು ಭಕ್ತಾಧಿಗಳು ಇದ್ದರು.

## ವ್ಯಾಯಾಮ ಶಾಲೆಗೆ ಈರಣ್ಣ ಕಡಾಡಿ ಯವರಿಂದ ಚಾಲನೆ



**ಯರಗಟ್ಟಿ:** ಸಮೀಪದ ಬೆನಕಟ್ಟಿ ಗ್ರಾಮದ ಪತ್ರಿವನ ಕಲ್ಯಾಣ ಮಂಟಪದಲ್ಲಿ ನಿರ್ಮಿಸಿದ ವ್ಯಾಯಾಮ ಶಾಲೆಗೆ ಕೇಂದ್ರ ಸರಕಾರದ ಸ್ಥಳೀಯ ರಾಜ್ಯಸಭಾ ಸದಸ್ಯರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಸುಮಾರು 5 ಲಕ್ಷ ರೂ. ವೆಚ್ಚದ ಜಿಮ್ ಸಲಕರಣೆ ಉದ್ಘಾಟಿಸಿ ಮಾತನಾಡಿದ ರಾಜ್ಯ ಸಭಾ ಸದಸ್ಯ ಈರಣ್ಣ ಕಡಾಡಿ. ಇಂದಿನ ಯುವಕರು ದುಶ್ಚಟದಿಂದ ತಮ್ಮ ಶರೀರ ಹಾಳು ಮಾಡಿಕೊಳ್ಳುತ್ತಿದ್ದಾರೆ. ಬಲಿಷ್ಠ ಶರೀರದ ಜೊತೆಗೆ ವ್ಯಾಯಾಮ ಅವಶ್ಯವಾಗಿದೆ. ಎಲ್ಲಾ ಯುವಕರು ವ್ಯಾಯಾವ ಮಾಡಬೇಕು ಎಂದು ರಾಜ್ಯ ಸಭಾ ಸದಸ್ಯ ಈರಣ್ಣ ಕಡಾಡಿ ತಿಳಿಸಿದರು.

ರೈತರು ಬೆಳೆಯುವ ಬೆಳೆಗಳಿಗೆ ಒಳ್ಳೆಯ ಬೆಂಬಲ ಬೆಲೆ ಸಿಗುವಂತಗಾಲು ಪ್ರಯತ್ನಿಸುತ್ತೇನೆ. ತಿನ್ನುವ ಆಹಾರ ವಿಷವಾಗಿದೆ. ರೈತರು ಒಳ್ಳೆಯ ಆರೋಗ್ಯಕರ ಆಹಾರ ಬೆಳೆಯಬೇಕು.

ಸಾಮಾನ್ಯ ಕಾರ್ಯಕರ್ತನಿಗೆ ಉನ್ನತ ಹುದ್ದೆ ನೀಡಿರುವುದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ನೀಡಿರುವ ಜವಾಬ್ದಾರಿಯಿಂದ ನಾವು 24 ತಾಸು ಜನ ಸಾಮಾನ್ಯರಿಗೆ ಕೆಲಸ ಮಾಡಬೇಕಾಗಿದೆ ಎಂದು ಹೇಳಿದರು.

ಬಿಜೆಪಿ ಮುಖಂಡರಾದ ಈರಣ್ಣ ಚಂದರಗಿ ಮಾತನಾಡಿ ವಕ್ಫ್ ಬೋರ್ಡ್ ಹೆಸರಿನಲ್ಲಿ ರೈತರ ಜಮೀನುಗಳಿಗೆ ಕನ್ನ ಹಾಕುತ್ತಿರುವ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿರುವ ಸಿದ್ದರಾಮಯ್ಯನವರು ರಾಜೀನಾಮೆ ಕೊಡಬೇಕು ಹಾಗೂ ಉಚಿತ ಬಸ್ ಪ್ರಯಾಣದಿಂದ ದಿನನಿತ್ಯ ನೂರಾರು ಶಾಲಾ ಕಾಲೇಜು ವಿದ್ಯಾರ್ಥಿಗಳು ಬಸ್ಸ್ ಇಲ್ಲದೆ ತರಗತಿಗೆ ತಡವಾಗಿ ಹೋಗುವ ಸ್ಥಿತಿ ನಿರ್ಮಾಣವಾಗಿದೆ ಆದರೂ ಕಣ್ಣು ಮುಚ್ಚಿ ಕುಳಿತು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಎಂದು ಹರಿಹಾಯ್ದರು. ಈ ವೇಳೆ ಮಹಾದೇವ ಮುರಗೂಡ, ಬಸವರಾಜ ಬಿಷ್ಟಣ್ಣವರ, ಪಂಚಪ್ಪ ಮಾತಾರಿ, ರುದ್ರಪ್ಪ ಲಕ್ಕಪ್ಪನ್ನವರ, ಶಂಕರ ಬಾರ್ಕಿ, ಈರಯ್ಯಾ ಹಿರೇಮಠ, ಕಾಡಪ್ಪ ಬ.ವೀರಶೆಟ್ಟಿ, ಪ್ರವೀಣ ಚಿನ್ನಪನ್ನವರ, ರೇವನ್ನವರ, ಲಕ್ಷಣ ಸೋಮು ಯರಝರ್ವಿ, ರಾಯಪ್ಪ ಟಪಾಲ, ಶ್ರೀಕಾಂತ ವೀರಶೆಟ್ಟಿ ಲಕ್ಷಣ ಕುರಿ ಮತ್ತಿತ್ತರರು ಇದ್ದರು. ವೀರಪ್ಪ ವೀರಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ರಾಜು ಗಯ್ಯಾಳಿ ಸ್ವಾಗತಿಸಿದರು.

### ಮಾನಸಿಕ ಒತ್ತಡಗಳ ನಿವಾರಣೆಗೆ ಮನರಂಜನೆ ಸಹಾಯಕ : ದೇಸಾಯಿ

## ದೈವ ಮಂಡಳಿಯ ಕಾರ್ಯ ಶ್ಲ್ಯಾಘನೀಯ



**ರಬಕವಿ-ಬನಹಟ್ಟಿ,ನ4:** ಉತ್ತಮ ಆರೋಗ್ಯದಿಂದ ಮಾತ್ರ ಪರಿಪೂರ್ಣ ಜೀವನ ಸಾಧ್ಯ. ಮಾನಸಿಕ ಒತ್ತಡಗಳ ನಿವಾರಣೆಗೆ ಮನರಂಜನೆ ಕಾರ್ಯಕ್ರಮಗಳು ಸಹಾಯಕವಾಗುತ್ತವೆ ಎಂದು ಉದ್ಘಾಟಕರಾಗಿ ಆಗಮಿಸಿದ ಉದ್ಯಮಿ ಪ್ರಕಾಶ ದೇಸಾಯಿ ಹೇಳಿದರು.

ಅವರು ರವಿವಾರ ರಾತ್ರಿ ಬನಹಟ್ಟಿಯಲ್ಲಿ ಮಲ್ಲಿಕಾರ್ಜುನ ದೇವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ರಸಮಂಜರಿ ಕಾರ್ಯಕ್ರಮದಲ್ಲಿ ಜ್ಯೋತಿ ಬೆಳಗಿಸಿ ಮಾತನಾಡಿದರು. ಮನರಂಜನೆಯ ಮೂಲಕ ಉತ್ತಮ ಆರೋಗ್ಯವನ್ನು ಹೊಂದಬಹುದು. ಪ್ರತಿಯೊಬ್ಬರು ಒತ್ತಡದ ಬದುಕಿನಲ್ಲಿ ಇಂತಹ ಮನರಂಜನೆ ಕಾರ್ಯಕ್ರಮಗಳನ್ನು ಕೇಳಿ ಆನಂದಿಸಿ ಉತ್ತಮ ಆರೋಗ್ಯವನ್ನು ಹೊಂದಿ. ದೈವ ಮಂಡಳಿಯವರು ಉತ್ತಮವಾದ ಕಾರ್ಯಗಳನ್ನು ಮಾಡುತ್ತಿರುವುದು ಸಂತಸದ ವಿಷಯ ಎಂದರು. ಈ ಸಂದರ್ಭದಲ್ಲಿ ವೇದಮೂರ್ತಿ ಚರಂತಯ್ಯ ಹಿರೇಮಠ ಮಾತನಾಡಿ, ಬನಹಟ್ಟಿ ಸಾಹಿತಿ, ಕಲೆ, ಕಲಾವಿದರ ತವರೂರಾಗಿದೆ. ಇಲ್ಲಿ ಕಲೆ ಕಲಾವಿದರಿಗೆ ನೀಡುವ ಪ್ರೋತ್ಸಾಹ ಅತ್ಯಂತ ಹೆಮ್ಮೆತರುವಂತಹದಾಗಿದೆ. ಸೋಮವಾರ ಪೇಟೆ ದೈವ ಮಂಡಳಿಯವರು ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ಇತರರಿಗೆ ಮಾದರಿಯಾಗಿದ್ದಾರೆ. ಜನರಿಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಅಭಿನಂದನಾರ್ಹವಾಗಿದೆ ಎಂದರು.

ಈ ಸಂದರ್ಭದಲ್ಲಿ ಸೋಮವಾರ ಪೇಟೆ ಸಮಸ್ತ ದೈವ ಮಂಡಳಿಯ ಚೇರಮನ್ ಮಲ್ಲಿಕಾರ್ಜುನ ತುಂಗಳ, ದೈವ ಮಂಡಳಿಯ ಹಿರಿಯರಾದ ಮಲ್ಲಿಕಾರ್ಜುನ ಬಾವಲತ್ತಿ, ಮಲ್ಲಣ್ಣ ಕಕಮರಿ, ಪ್ರಶಾಂತ ಕೊಳಕಿ, ಕಿರಣ ಆಳಗಿ, ಚೆನ್ನಪ್ಪ ಗುಣಕಿ, ಶಿವು ಬಾಗೇವಾಡಿ, ರಾಜು ಲುಕ್ಕ, ಮಲ್ಲಪ್ಪ ಜನವಾಡ, ಗಂಗಪ್ಪ ಹಾದಿಮನಿ, ಚಿದಾನಂದ ಹೊರಟ್ಟಿ, ಶಂಕರ ಜಾಲಿಗಿಡದ, ಬ್ರಿಜ್‌ಮೋಹನ ಡಾಗಾ, ಪವಿತ್ರಾ ತುಕ್ಕಣ್ಣವರ, ರತ್ನಾ ಕೊಳಕಿ, ರವಿ ಕಗ್ಗೂಡ, ವಿಜಯ ನಾಟಿ-ಕರ, ಮಗದುಮ್, ಮಹಾಶಾಂತ ಶೆಟ್ಟಿ, ಬಾಳು ಗಣೇಶನವರ, ಶ್ರೀಶೈಲ ಕೊಳಕಿ, ಚಂದ್ರು ಮಿರ್ಜಿ ಸೇರಿದಂತೆ ಅನೇಕರಿದ್ದರು.

## ನಿರಾಣಿ ಅವರ ಮೊಮ್ಮಗ ಏಶಿಯಾ ಬುಕ್‌ಆಫ್ ರೆಕಾರ್ಡಗೆ ಸೇರ್ಪಡೆ




**ಮುಧೋಳ:** ಮಾಜಿ ಸಚಿವ ಮುರುಗೇಶ ನಿರಾಣಿ ಅವರ ಮೊಮ್ಮಗ ಸಮಥ9 ವಿಜಯ. ನಿರಾಣಿ 4.ವರ್ಷದ ಮಗು ಅಸಂಖ್ಯಾತ ಜನಗಳ ಮದ್ಯೆ ವೇಗ ಹಾಗು ಸುಗಮವಾಗಿ ಆತ್ಮವಿಶ್ವಾಸದಿಂದ ಗೊಲ್ಫ ಕಾರ್ಟ ಚಲಾಯಿಸಿ ಏಶಿಯಾ ಬುಕ್‌ಆಫ್ ರೇಕಾಡ9ನಲ್ಲಿ ಸೇಪ9ಡೆಯಾಗಿದ್ದಾನೆ.

ನಗರದ ನಿರಾಣಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ನಡೆದ ಬಾಯಿಲರ್ ಪ್ರದೀಪನ ಸಮಾರಂಭದಲ್ಲಿ ಏಶಿಯಾ ಬುಕ್‌ಆಫ್ ರೇಕಾರ್ಡನ ಅಧ್ಯಕ್ಷ ಹರೀಶ ಶಮಾ9 ಅವರು ಪ್ರಶಸ್ತಿ ಪತ್ರ ಹಾಗೂ ಪ್ರಮಾಣ ಪತ್ರ ನೀಡಿ ಗೌರವಿಸಿದರು, ಈ ಹಿಂದೆ ಈತ ಸಂಸ್ಕೃತ ಶ್ಲೋಕ ಹಾಗೂ ವಚನಗಳನ್ನು ಕಂಠಪಾಠ ಹೇಳುವ ಮೂಲಕ ಲಿಮ್ಕಾದಾಖಲೆ ಸ್ಥಾಪಿಸಿದ್ದಾನೆ. ಅತೀಚಿಕ್ಕ ವಯಸ್ಸಿನಲ್ಲಿಯೇ ಇಂತಹ ಸಾಧನೆ ಮಾಡಿದ ಸಮಥ9 ಮಾತನಾಡಿ, ನನ್ನ ಈ ಸಾಧನೆಗೆ ಅಜ್ಜ-ಅಜ್ಜಿ, ತಂದೆ-ತಾಯಿ, ಹಾಗೂ ಇತರರು ಕಾರಣ ಎಂದು ತೊದಲು ನುಡಿಯಲ್ಲೇ ಹೇಳಿದನು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವ ಕಟ್ಟಾ ಸುಬ್ರಮಣ್ಯ ನಾಯಡು ಮಾತನಾಡಿ, ಸದಾ ರೈತರ ಹೀತವನ್ನೇ ಬಯಸುವ ಮುರುಗೇಶ ನಿರಾಣಿ ಕೂಡ ಚಿಕ್ಕ ವಯಸ್ಸಿನಲ್ಲೆ ಕಾರಖಾನೆಗಳನ್ನು ಸ್ಥಾಪಿಸಿ ಲಕ್ಷಾಂತರ ರೈತ, ಕೂಲಿಕಾಮಿ9ಕರ ಬಾಳಿಗೆ ಬೆಳಕಾಗಿ ದೇಶಕ್ಕೆ ಮಾದರಿ ಉದ್ಯಮಿದಾರ ಎನಿಸಿಕೊಂಡಿದ್ದಾರೆ. ಎಂದು ಅವರು ಅಭಿಮಾನದಿಂದ ಹೇಳಿದರು. ಮುರುಗೇಶ ನಿರಾಣಿ ಪ್ರಾಸ್ತಾವಿಕವಾಗಿ ಮಾತನಾಡಿ, 500. ಟಿಪಿಡಿ, ಯಿಂದ ಲಕ್ಷಾಂತರ ಟನ್ ಕಬ್ಬು ನುರಿಸುವ ಸಾಧನೆಗೆ ರೈತರು ಸೇರಿ ಎಲ್ಲರ ಸಹಕಾರವೇ ಕಾರಣ ಇದೆ. ಎಂದು ವಿನಮ್ರವಾಗಿ ಹೇಳಿದರು.

ವಿರಕ್ತಮಠದ ಬಸವಲಿಂಗ ಶ್ರೀಗಳು, ನಿಡಸೋಶಿಯ ಹಾಗು ರೂಗಿಯ ನಿತ್ಯಾನಂದ ಶ್ರೀಗಳು, ಕಾರಖಾನೆಯ ಇ.ಡಿ. ಸಂಗಮೇಶ ನಿರಾಣಿ, ಎಂಡಿ. ವಿಜಯಕು ನಿರಾಣಿ, ಎಂ-ಎಲ್‌ಸಿ. ಹಣಮಂತ ನಿರಾಣಿ, ಕಲ್ಮೇಶ ಗೋಸಾರ, ಬಸವಂತ ಕಾಟೆ, ವೆಂಕಣ್ಣ ಗಿಡ್ಡಪ್ಪನವರ, ಅಜಿತ ಹೊನವಾಡ, ಕಮಲಾ ನಿರಾಣಿ, ಸುಶ್ಮೀತಾ ನಿರಾಣಿ, ವಿಶಾಲ ನಿರಾಣಿ, ವಿವಿಧ ಕ್ಷೇತ್ರದ ಗಣ್ಯರು, ರೈತರು ಇತರರಿದ್ದರು.

## ೬೯ನೇ ಕರ್ನಾಟಕ ರಾಜ್ಯೋತ್ಸವದ ಭವ್ಯ ಮೆರವಣಿಗೆ ಯಲ್ಲಿ ಆಕರ್ಷಕ ವೇಷ ಭೂಷಣ ದೊಂದಿಗೆ ಗಮನಸೆಳೆದ ಹಲಗಾ ಕನ್ನಡ ಶಾಲೆಯ ಮಕ್ಕಳು



**ಬೆಳಗಾವಿ:** ಸಮೀಪದ ಹಲಗಾ ಗ್ರಾಮದಲ್ಲಿ 69ನೇ ಕರ್ನಾಟಕ ರಾಜ್ಯೋತ್ಸವದ ಮೆರವಣಿಗೆ ಯಲ್ಲಿ ಸರ್ಕಾರಿ ಮಾದರಿ ಪ್ರಾಥಮಿಕ ಕನ್ನಡ ಶಾಲೆ ಹಲಗಾ ಶಾಲೆಯ ಮಕ್ಕಳು ಶಿಕ್ಷಣ ಇಲಾಖೆಯ ರೂಪಕಗಳನ್ನು ಇಲಾಖೆಯ ಯೋಜನೆ ಗಳಾದ ಅಕ್ಷರ ದಾಸೋಹ ಹಾಗು ಪೌಷ್ಟಿಕ ಆಹಾರ ಗಳಾದ ಬಾಳೆಹಣ್ಣು ಚಿಕ್ಕೆ ತತ್ತಿ. ನಲಿಕಲಿ ಯುಕೋ ಕ್ಲಬ್ ಸಂಭ್ರಮ ಶನಿವಾರ ನಾವು ಮನಜರು ಗಣಿತ ಕ್ಲಬ್ ಇಓಮಿ ಸ್ಪೋಕನ್ ಇಂಗ್ಲಿಷ್ ಶೈಕ್ಷಣಿಕ ಬಲ ವರ್ದನೆ ವರ್ಷ 2024-25 ಯೋಜನಾ ಅಕ್ಷರ ಓದುವ ಅಭಿಯಾನ ಎಫ್‌ಎಲ್‌ಎನ್ ಜ್ಞಾನಪೀಠ ಪಡೆದ ಎಂಟು ಜನರ ರೂಪಕಗಳನ್ನ ಮತ್ತು ತಾಯಿ ಭುವನೇಶ್ವರಿ ಹಾಗೂ ರಾಣಿ ಚೆನ್ನಮ್ಮ ಒನಕೆ ಒಬ್ಬವ್ವ ಬಸವಣ್ಣ ಈ ಎಲ್ಲಾ ಆಕರ್ಷಕ ವೇಷ ಭೂಷಣದೊಂದಿಗೆ ಗಮನ ಸೆಳೆದರು

ಹಲಗಾ ಶಾಲೆಯ ವಿದ್ಯಾರ್ಥಿಗಳ ಚಟುವಟಿಕೆಗಳಿಗೆ ಮಾನ್ಯ ಶಿಕ್ಷಣ ಇಲಾಖೆ ಉಪ ನಿರ್ದೇಶಕರಾದ ಶ್ರೀಮತಿ ಲೀಲಾವತಿ ಎಸ್ ಹಿರೇಮಠರವರು ಮೆಚ್ಚುಗೆ ವ್ಯಕ್ತಪಡಿಸಿದರು.

ಮತ್ತು ಕಾರ್ಯಕ್ರಮದಲ್ಲಿ ಮಾನ್ಯ ಕ್ಷೇತ್ರ ಕೃಷ್ಣಾಧಿಕಾರಿಗಳಾದ ಶ್ರೀ ಎಸ್ ಪಿ ದಾಸಪ್ಪನವರ್, ಶ್ರೀ ಬಿ ಆರ್ ಸಿ ಸಮನ್ವಯ ಅಧಿಕಾರಿಗಳಾದ ಡಾಕ್ಟರ್ ಎಂಎಸ್ ಮೇದಾರ್, ಅಕ್ಷರ ದಾಸೋಹ ನಿರ್ದೇಶಿಕರಾದ ಶ್ರೀ ಆರ್ ಸಿ ಮುದಕನಗೌಡರ, ಹಲಗಾ ಸಿಆರ್‌ಪಿಗಳಾದ ಶ್ರೀಮತಿ ಈ ಖ ಮುಲ್ಲಾ, ಮೇಡಂ ಕನ್ನಡ ಶಾಲೆಯ ಪ್ರಧಾನ ಗುರುಗಳಾದ ಶ್ರೀ ಬಿ ಏನ್ ಅಲಾಬದಿ, ಎಸ್ ಡಿ ಎಂ ಸಿ ಅಧ್ಯಕ್ಷರಾದ ಶ್ರೀ ನಾಗರಾಜ್ ಮದಗೌಡ, ಶ್ರೀ ತವನೇಶ್ ಜನ ಗೌಡ, ಶ್ರೀ ಸಂತೋಷ್ ಕಂಗಳಗೌಡ, ಶ್ರೀ ರಾಜೇಶ್ ವಡ್ಡಾವಿ, ಶ್ರೀ ಬಾಹುಬಲಿ ಕಳ್ಳಿಮನಿ, ಹಾಗೂ ಎಲ್ಲಾ ಎಸ್‌ಡಿಎಂಸಿ ಸದಸ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು ಈ ಎಲ್ಲಾ ರೂಪಕಗಳನ್ನು ತಯಾರಿ ಮಾಡಿಸಿದ ಗುರುಮಾತೆಯರಾದ ಶ್ರೀಮತಿ ಎಸ್ ಎಸ್ ಮೇದಾರ್ , ಶ್ರೀಮತಿ ವಿವಿ ದಿಡ್ಡಿ, ಶ್ರೀಮತಿ ರಾಣಿ ಭಜಂತ್ರಿ, ಶ್ರೀಮತಿ ಆರ್ ಕೆ ಬಡಿಗೇರ್, ಮತ್ತು ಶ್ರೀ ಪಿಜಿ ಬೆಳಗಾವಿ, ಶ್ರೀ ಯು ಎನ್ ಹಿರೇಮಠ್, ಶ್ರೀ ಸಿಬಿ ನಾಯ್ಕರ್, ಶ್ರೀ ಪಿಎನ್ ಪಾಟೀಲ್, ಶ್ರೀ ಎನ್ ಎಸ್ ಹಿಟ್ಟಣಗಿ, ಹಾಗೂ ಅತಿಥಿ ಶಿಕ್ಷಕರು ಹಲಗಾ ಕೇಂದ್ರದ ಶಿಕ್ಷಕರು ಮಕ್ಕಳು ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಹಾಗೆ ಕರ್ನಾಟಕ ರಾಜ್ಯೋತ್ಸವದ ಕಮಿಟಿಯವರು, ಕನ್ನಡ ಪ್ರೇಮಿಗಳು, ಭಾಗವಹಿಸಿದ ಮಕ್ಕಳಿಗೆ ಪ್ರಶಸ್ತಿ ನೀಡಿ ಗೌರವಿಸಿದರು.

## ಜೈವಿಕ ಇಂಧನ - ಉಪ ಉತ್ಪನ್ನಗಳ ಬಳಕೆ ಕುರಿತು ತರಬೇತಿ



**ಬಾಗಲಕೋಟೆ:** : ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಜವಾಹರ್ ನವೋದಯ ವಿದ್ಯಾಲಯ ಸಂಂ-ಯುಕ್ತ ಆಶ್ರಯದಲ್ಲಿ ಜೈವಿಕ ಇಂಧನಗಳು ಹಾಗೂ ಉಪ ಉತ್ಪನ್ನಗಳ ಬಳಕೆ ಕುರಿತು ವಿದ್ಯಾರ್ಥಿಗಳಿಗೆ ಉಪನ್ಯಾಸ ಕಾರ್ಯಕ್ರಮ ಜರುಗಿತು.

ಕಾರ್ಯಾಗಾರವನ್ನು ತೋವಿವಿಯ ಡೀನ್ ಡಾ.ಲಕ್ಷೀನಾರಾಯಣ ಹೆಗಡೆ ಸಸಿಗೆ ನೀರುಣಿಸುವ ಚಾಲನೆ ನೀಡಿ ಮಾತನಾಡಿದ ಅವರು ವಿದ್ಯಾರ್ಥಿಗಳಿಗೆ ಜೈವಿಕ ಇಂಧನಗಳ ಸಂಕ್ಷಿಪ್ತ ಮಾಹಿತಿ ನೀಡಿದರು. ಹಾಗೂ ಜೈವಿಕ ಇಂಧನಗಳ ಉಪ ಉತ್ಪನ್ನಗಳ ಬಳಕೆಯನ್ನು ಮಾಡುವುದರ ಮೂಲಕ ಪರಿಸರ ಸಂರಕ್ಷಣೆಯಲ್ಲಿ ಮುಖ್ಯ ಪಾತ್ರವನ್ನು ವಹಿಸುವಂತೆ ಕರೆ ನೀಡಿದರು.

ಅಧ್ಯಕ್ಷರಾಗಿ ಆಗಮಿಸಿದ್ದ ತೋಟಗಾರಿಕೆ ವಿವಿಯ ಕುಲಸಚಿವ ಮಹದೇವ ಮುರಗಿ ಮಾತನಾಡಿ, ವಿದ್ಯಾರ್ಥಿಗಳಿಗೆ ಸದರಿ ವಿಜ್ಞಾನ ಕೇಂದ್ರದ ಮಹತ್ವವನ್ನು ತಿಳಿಸಿದರು ಹಾಗೂ ವಿದ್ಯಾರ್ಥಿಗಳು ಜೈವಿಕ ಇಂಧನಗಳ ಮಹತ್ವವನ್ನು ಅರಿತುಕೊಂಡು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬಹುದೆಂದು ತಿಳಿಸಿದರು.

ಅತಿಥಿಗಳಾಗಿ ಆಗಮಿಸಿದ್ದ ಜವಾಹರ ನವೋದಯ ವಿದ್ಯಾಲಯದ ಶಿಕ್ಷಕ ಎಮ್.ಬಿ.ಮಠಪತಿ, ಮಾತನಾಡಿ, ಜೈವಿಕ ಇಂಧನಗಳು ಹಾಗೂ ಉಪ ಉತ್ಪನ್ನಗಳ ಬಳಕೆ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡು ವಿದ್ಯಾರ್ಥಿಗಳು ಸದರಿ ವಿಷಯದ ಬಗ್ಗೆ ಅರಿವನ್ನು ಮೂಡಿಸಿಕೊಳ್ಳಬೇಕೆಂದು ಕರೆ ನೀಡಿದರು. ಹಾಗೂ ಸದರಿ ಕಾರ್ಯಕ್ರಮಕ್ಕಾಗಿ ತಮ್ಮ ಶಾಲೆಯನ್ನು ಅಯ್ಕೆ ಮಾಡಿಕೊಂಡಿರುವುದಕ್ಕಾಗಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆಯ ಎಲ್ಲ ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ತಿಳಿಸಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಡಾ.ಭಾರತಿ ಮೇಟಿ, ಪ್ರಾಧ್ಯಾಪಕರು, ಬಸವೇಶ್ವರ ಇಂಜಿನಿಯ-ರಿಂಗ್ ಕಾಲೇಜು ಹಾಗೂ ಸದಸ್ಯರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ಮಾತನಾಡಿ, ವಿದ್ಯಾರ್ಥಿಗಳಿಗೆ ಜೈವಿಕ ಇಂಧನಗಳ ವಿಸ್ತೃತ ಮಾಹಿತಿ ನೀಡುತ್ತ, ಸದರಿ ಇಂಧನದ ಉಪ ಉತ್ಪನ್ನಗಳ ಬಳಕೆಯಿಂದ ಪ್ರಸ್ತುತ ದಿನಮಾನಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿನ ಬೆಳವಣಿಗೆಯ ಬಗ್ಗೆ ವಿವರವಾಗಿ ತಿಳಿಸಿದರು. ಹಾಗೂ ವಿವಿಧ ಜೈವಿಕ ಇಂಧನಗಳ ಉಪಯೋಗಗಳನ್ನು ಪ್ರಾತ್ಯಕ್ಷಿಕೆಯ ಮೂಲಕ ವಿವರವಾಗಿ ತಿಳಿಸಿದರು. ಕಾರ್ಯಕ್ರಮದ ಭಾಗವಾಗಿ ವಿದ್ಯಾರ್ಥಿಗಳಿಗೆ ಹೊರಾಂಗಣ ಮತ್ತು ಒಳಾಂಗಣ ವಿಜ್ಞಾನ ಪ್ರದರ್ಶಿಕೆಗಳ ಪ್ರಾತ್ಯಕ್ಷಿಕೆಯನ್ನು ಆಯೋಜಿಸಲಾಯಿತು. ಈರಣ್ಣ ಬುಳ್ಳಾ, ಕ್ಯೂರೇಟರ್, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ನಿರೂಪಿಸಿ ಹಾಗೂ ಆಸೀಫ ಬಾಗವಾನ, ತಾಂತ್ರಿಕ ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ವಂದಿಸಿದರು.



**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಸೋಮವಾರ ಬೆಳಗಾವಿಯ ಗೃಹ ಕಚೇರಿಯಲ್ಲಿ ಕಿಕ್ಕಿರಿದು ಸೇರಿದ್ದ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ, ಪರಿಹಾರ ಸೂಚಿಸಿದರು.**



### ಉಪವಿಭಾಗಾಧಿಕಾರಿಗಳು, ಬೈಲಹೊಂಗಲ ಉಪವಿಭಾಗ, ಬೈಲಹೊಂಗಲ ಇವರ ನ್ಯಾಯಾಲಯದಲ್ಲಿ

ಕ್ರ:ಎಮ್‌ಆಯ್‌ಎಸ್‌ಸಿ/ಎಪಿ-14/2024 04.11.2024

ಮೇಲ್ಮನವಿದಾರರು :-

1) ಮೈಲಾರ ರಾಮಚಂದ್ರ ಯಾದವ
ಸಾ॥ ಬಿದರಗಡ್ಡಿ ತಾ॥ ಬೈಲಹೊಂಗಲ, ಜಿ: ಬೆಳಗಾವಿ
(ನ್ಯಾಯವಾದಿಗಳು ಎ. ಆಯ್. ಅಥಣಿ)

ಎದುರುಗಾರರು :-

:ವಿರುದ್ಧ :

1) ಹರಿಶ್ಚಂದ್ರ@ಚಂದ್ರಪ್ಪ ಬಸವಂತಪ್ಪ ಜಗತಾಪ
2) ಹಣಮಂತಪ್ಪ ಬಸವಂತಪ್ಪ ಜಗತಾಪ
3) ಅನಿತಾ ಕೋ ರಾಘವೇಂದ್ರ ಗಾಯಕವಾಡ
4) ನಾಗೇಶ ಬಲಭೀಮ ಜಗತಾಪ
5) ಲಲಿತಾ ಕೋ ಶಿವಾಜಿ ನಿಂಬಾಳ್ಕರ
6) ಬಾಳವ್ವ ಕೋ ರಾಜೇಶ ನಿಂಬಾಳ್ಕರ
ಸಾ॥ ಬಿದರಗಡ್ಡಿ ತಾ॥ ಬೈಲಹೊಂಗಲ ಜಿ॥ ಬೆಳಗಾವಿ
7) ಮ್ಯಾನೇಜರ ಕಾರ್ಪೊರೇಶನ/ಯುನಿಯನ್ ಬ್ಯಾಂಕ ಆಪ್‌ಇಂಡಿಯಾ
ಶಾಖೆ ಸಾ॥ ಬೆಳವಡಿ ತಾ॥ ಬೈಲಹೊಂಗಲ ಜಿ॥ ಬೆಳಗಾವಿ

**ಪತ್ರಿಕಾ ಪ್ರಕಟಣೆ**

ಪ್ರಸ್ತುತ ಪ್ರಕರಣವನ್ನು ಮೇಲ್ಮನವಿದಾರರು ಎದುರುಗಾರರ ವಿರುದ್ಧ ಬೈಲಹೊಂಗಲ ತಾಲೂಕಿನ ಬಿದರಗಡ್ಡಿ ಗ್ರಾಮದ ರಿ.ಸಂ.ನಂ.7/5 ನೇದ್ದಕ್ಕೆ ಸಂಬಂಧಿಸಿದಂತೆ ಕಾಲಂ ರಲ್ಲಿ ಸಾಲದ ಋಣಭಾರ ಕಡಿಮೆಗೊಳಿಸುವ ಕುರಿತು ವಿರುದ್ಧ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 49(ಎ) ಮತ್ತು ಕಲಂ 25 ರ ಅಡಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಇದೂವರೆಗೆ ನಿಮಗೆ ನೋಟಿಸ್ ಜಾರಿ ಆಗಿರುವುದಿಲ್ಲ. ಕಾರಣ ಸದರಿ ಪ್ರಕರಣವನ್ನು ನಿಮ್ಮ ಹಾಜರಿಗಾಗಿ ದಿ: 05-11-2024 ರಂದು ಮದ್ಯಾಹ್ನ 3-00 ಗಂಟೆಗೆ ಈ ನ್ಯಾಯಾಲಯದಲ್ಲಿ ಮುದ್ದತ್ತು ನೀಡಲಾಗಿರುತ್ತದೆ

ಆದ್ದರಿಂದ ಎದುರುಗಾರರು ನಂ.2 ರವರು ಆದ ನೀವು ಸದರಿ ದಿನದಂದು ವೇಳೆಗೆ ಸರಿಯಾಗಿ ಸ್ವಂತ ಆಗಲಿ ಅಥವಾ ನ್ಯಾಯವಾದಿಗಳ ಮುಖಾಂತರವಾಗಲೀ ಹಾಜರಿದ್ದು ವಾದ ಮಂಡಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ನೀಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕತರ್ಫಿಯವಾಗಿ ನಿರ್ಣಯಿಸಲಾಗುದು ತಿಳಿಯಿರಿ.

ಪ್ರಸ್ತುತ ನೋಟೀಸನ್ನು ಇವತ್ತಿನ ದಿವಸ ಮಾನ್ಯ ನಾಯಾಲಯದ ಆದೇಶದ ಮೊಹರಿನೊಂದಿಗೆ ಪ್ರಕಟಿಸಲಾಯಿತು.

ದಿ.04.11.2024

(ಎ.ಆಯ್.ಅಥಣಿ)
ಮೇಲ್ಮನವಿದಾರರ ಪರ ನ್ಯಾಯವಾದಿಗಳು

ಸಹಿ/-(ಡಿ.ಬಿ.ವಾರಿ), ಬೆಂಚ್ ಕ್ಲಾರ್ಕ್

ಸಹಿ/- (ಎಸ್.ಎಮ್. ಗೌಡರ) ಶಿರಸ್ತೆದಾರರು

### ಕರ್ನಾಟಕ ಸರಕಾರ
### ಗ್ರಾಮ ಪಂಚಾಯತ ಕಾರ್ಯಲಯ, ಗೋಸಬಾಳ
### GRAM PANCHAYAT OFFICE, GOSABAL

Mobile Number 9663440979 Gmail:bgmgkkgos@gmail.com

ಕ್ರ.ಸಂ/ಗ್ರಾಪಂಗೋ/15 ನೇ ಹಣಕಾಸು/ಟೆಂಡರ್/ವಿವ 02-2024-25 ದಿನಾಂಕ:25-10-2024

**ಸಾಮಗ್ರಿಗಳ ಪೂರೈಕೆಗಾಗಿ ಟೆಂಡರ ಆಹ್ವಾನ (KPPP Portal )**

ಗೋಕಾಕ ತಾಲೂಕಿನ ಗೋಸಬಾಳ ಗ್ರಾಮ ಪಂಚಾಯತಿಯ ಸನ್ 2024-25 ನೇ ಸಾಲಿನ 15 ನೇ ಹಣಕಾಸು ಯೋಜನೇಯಡಿಯಲ್ಲಿ ಅನುಷ್ಠಾನ ಮಾಡಲಾಗುವ ಈ ಕೆಳಗಿನ ಕಾಮಗಾರಿಗಳಿಗೆ ಅಗತ್ಯವಾದ ಸಾಮಗ್ರಿಗಳನ್ನು ಪೂರೈಕೆ ಮಾಡಲು ಈ ಕೆಳಕಂಡ ವೇಳಾ ಪಟ್ಟಿಯಂತೆ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾದೆ. ಆಸಕ್ತಿಯುಳ್ಳ ಎಲ್ಲ ಸರಬರಾಜುದಾರರು/ಏಜೆನ್ಸಿ/ಎಂಟರಪ್ರೈಜಿಸ್ ಇತ್ಯಾದಿಯವರು ಗ್ರಾಮ ಪಂಚಾಯತ ಕಛೇರಿಯನ್ನು ಸಂಪರ್ಕಿಸಿ ನಿಗಧಿತ ದಿನಾಂಕದೊಳಗೆ ಟೆಂಡರಿಗೆ ಸಂಬಂಧಿಸಿದಂತೆ ಎಲ್ಲ ದಾಖಲಾತಿ ನಮೂನೆಗಳನ್ನು ಪಡೆದು ಐಟಂವಾರು ಮೊಹರು ಮಾಡಿದ ದರಪಟ್ಟಿಗಳನ್ನು ನಿಗಧಿತ ದಿನಾಂಕದೊಳಗೆ ಖುದ್ದಾಗಿ ಗ್ರಾಮ ಪಂಚಾಯತಗೆ ಸಲ್ಲಿಸುವುದು ಮತ್ತು www.https://kppp.karnataka.gov.in ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿ ಕರ್ತವ್ಯದ ಅವಧಿಯಲ್ಲಿ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಯವರನ್ನು ಸಂಪರ್ಕಿಸುವುದು. 2021-22 ನೇ 15 ನೇ ಹಣಕಾಸು ಯೋಜನೆಯ:ಕ್ರ.ಸಂ.:1ಕಾಮಗಾರಿಗಳ ಹೆಸರು ಬಗರನಾಳ ಗ್ರಾಮದ ನವಗ್ರಾಮ ಹತ್ತಿರ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡುವುದು, ಅಂದಾಜು ಮೊತ್ತ(ಲಕ್ಷಗಳಲ್ಲಿ)430000, ಕ್ರ.ಸಂ:2 ಗೋಸಬಾಳ ಗ್ರಾಮದ ಗಂಗಪ್ಪ ಹಳ್ಳೂರ ಮನೆಯಿಂದ ಬಸವ್ವ ರೇ ಪಾಟೀಲ ಮನೆಯವರೆಗೆ ಚರಂಡಿ ನಿರ್ಮಾಣ ಮಾಡುವುದು,ಅಂದಾಜು ಮೊತ್ತ(ಲಕ್ಷಗಳಲ್ಲಿ) 100000, ಕ್ರ.ಸಂ:3 ಗೋಸಬಾಳ ಗ್ರಾಮದ ಗ್ರಂಥಾಲಯು ಕಟ್ಟಡ ದುರಸ್ಥಿಗೊಳಿಸುವುದು ,ಅಂದಾಜು ಮೊತ್ತ(ಲಕ್ಷಗಳಲ್ಲಿ) 100000, 2022-23 ನೇ 15 ನೇ ಹಣಕಾಸು ಯೋಜನೆಯ ಕ್ರ.ಸಂ:4 ಬಿಲಕುಂದಿ ಗ್ರಾಮದ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡುವುದು ಅಂದಾಜು ಮೊತ್ತ (ಲಕ್ಷಗಳಲ್ಲಿ) 214241, ಕ್ರ.ಸಂ:5 ಬಗರನಾಳ ಗ್ರಾಮದ ರಾಮಪ್ಪ ಭಜಂತ್ರಿ ಮನೆಯಿಂದ ಕಾಡಪ್ಪಾ ಭಜಂತ್ರಿ ಮನೆಯವರೆಗೆ ಚರಂಡಿ ನಿರ್ಮಾಣ ಮಾಡುವುದು.ಅಂದಾಜು ಮೊತ್ತ (ಲಕ್ಷಗಳಲ್ಲಿ) 300000, ಕ್ರ.ಸಂ:6 ಗೋಸಬಾಳ ಗ್ರಾಮದ ಸರಕಾರಿ ಪ್ರೌಢ ಶಾಲೆಯ ಕೊಠಡಿ ದುರಸ್ಥಿಗೊಳಿಸುವುದು ಅಂದಾಜು ಮೊತ್ತ (ಲಕ್ಷಗಳಲ್ಲಿ) 100000, ಕ್ರ.ಸಂ:7 ಗೋಸಬಾಳ ಗ್ರಾಮದ ಗ್ರಾಮ ಪಂಚಾಯತ ಕಟ್ಟಡದ ಮೇಲೆ ಸೋಲಾರ ವಿದ್ಯುತ್ ಅಳವಡಿಸುವುದು 3 ಕಿಲೋ ವ್ಯಾಟ ಅಂದಾಜು ಮೊತ್ತ (ಲಕ್ಷಗಳಲ್ಲಿ) 100000, 2023-24 ನೇ 15 ನೇ ಹಣಕಾಸು ಯೋಜನೆಯ ಕ್ರ.ಸಂ:8 ಗೋಸಬಾಳ ಗ್ರಾಮದ ಅಗಸಿ ಹತ್ತಿರ ಹೈ ಮಾಸ್ಕ ದೀಪ ಅಳವಡಿಸುವುದು ಅಂದಾಜು ಮೊತ್ತ (ಲಕ್ಷಗಳಲ್ಲಿ) 150000, ಕ್ರ.ಸಂ:9 ಗೋಸಬಾಳ ಗ್ರಾಮದ ಬಸವೇಶ್ವರ ಬಸ್ಟ್ಯಾಂಡ ಹತ್ತಿರ ಹೈ ಮಾಸ್ಕ ದೀಪ ಅಳವಡಿಸುವುದು. ಅಂದಾಜು ಮೊತ್ತ (ಲಕ್ಷಗಳಲ್ಲಿ) 150000, ಕ್ರ.ಸಂ:10 ಬಿಲಕುಂದಿ ಗ್ರಾಮದ ಚರ್ಚೆ ಮುಂದುಗಡೆ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡುವುದು.ಅಂದಾಜು ಮೊತ್ತ (ಲಕ್ಷಗಳಲ್ಲಿ)450000, ಕ್ರ.ಸಂ:11 ಬಿಲಕುಂದಿ ಗ್ರಾಮದ ಯಲ್ಲಪ್ಪ ಕಳ್ಳಿಗುದ್ದಿ ಮನೆಯ ಹತ್ತಿರ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಡುವುದು. ಅಂದಾಜು ಮೊತ್ತ (ಲಕ್ಷಗಳಲ್ಲಿ)128528, ಕ್ರ.ಸಂ. 1 ರಿಂದ 11 ರವರೆಗೆ ಟೆಂಡರ ಪಾರ್ಮ ಮತ್ತು ಡಾಕ್ಯಮೆಂಟ ವಿತರಿಸುವ ದಿನಾಂಕ ಸಮಯ ದಿನಾಂಕ 05.11.2024 ರಿಂದ 11.11.2024 ಗ್ರಾಮ ಪಂಚಾಯತ ಕಾರ್ಯಾಲಯ ಕಛೇರಿ ವೇಳೆಯಲ್ಲಿ, ಕ್ರ.ಸ.:2 ಸೀಲ್ ಮಾಡಿದ ಟೆಂಡರಗಳನ್ನು ಕರೆಯುವ ತೆರೆಯುವ ದಿನಾಂಕ ಮತ್ತು ಸ್ಥಳ:15.11.2024 ರಂದು ಸಂಜೆ 4:30ಗಂಟೆಗೆ ಪಂಚಾಯತ ಕಾರ್ಯಾಲಯ ಗೋಸಬಾಳ.

ಟೆಂಡರರಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಯನ್ನು ಹಾಗೂ ಕಾಮಗಾರಿಗಳ ಐಟಂವಾರು ಅಂದಾಜು ಪತ್ರಿಕೆಗಾಗಿ ಕಛೇರಿ ಕೆಲಸದ ಅವಧಿಯಲ್ಲಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯ ಬಹುದಾಗಿದೆ,ದರಪಟ್ಟಿಗಳನ್ನು ಸ್ವೀಕರಿಸುವುದು ಮತ್ತು ತಿರಸ್ಕರಿಸುವ ಅಧಿಕಾರ ಗ್ರಾಮ ಪಂಚಾಯತದ್ದಾಗಿರುತ್ತದೆ. ಹಾಗೂ ಈ ದರಪಟ್ಟಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯು ಸದರಿ ಟೆಂಡರನ್ನು ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತದೆ.

ಸಹಿ/- ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತ ಗೋಸಬಾಳ ತಾ:ಗೋಕಾಕ ಜಿ: ಬೆಳಗಾವಿ

ಸಹಿ/-ಅಧ್ಯಕ್ಷರು ಗ್ರಾಮ ಪಂಚಾಯತ ಗೋಸಬಾಳ ತಾ:ಗೋಕಾಕ ಜಿ: ಬೆಳಗಾವಿ

DIPR/BGM/RO-NO-1073/KSMCA/2024-25


## ರಾಜ್ಯ ಸರಕಾರ ರೈತರ ಜಮೀನುಗಳ ವಕ್ಫ ಹೆಸರಿನಲ್ಲಿ ಮಾಡಲು ಹೊರಟಿದೆ ಎಂದು ಆರೋಪಿಸಿ- ಬಿಜೆಪಿ ನೇತೃತ್ವದಲ್ಲಿ ಪ್ರತಿಭಟನೆ ಮನವಿ ಸಲ್ಲಿಕೆ

ರಾಮದುರ್ಗ : ರಾಜ್ಯದಲ್ಲಿರುವ ರೈತರ ಜಮೀನುಗಳನ್ನು ವಕ್ಫ ಹೆಸರಿನಲ್ಲಿ ದಾಖಲು ಮಾಡುವ ಕಾಂಗ್ರೆಸ್ ಸರಕಾರದ ಹುನ್ನಾರವನ್ನು ಸಹಿಸುವುದಿಲ್ಲ. ಕೂಡಲೇ ಸರಕಾರ ವಕ್ಫ ಮಂಡಳಿಯ ಹೆಸರಿನಲ್ಲಿರುವ ರೈತರ ಜಮೀನುಗಳನ್ನು ಮೂಲ ಮಾಲಕರ ಹೆಸರಿನಲ್ಲಿ ದಾಖಲು ಮಾಡಬೇಕು ಎಂದು ಒತ್ತಾಯಿಸಿ, ಸ್ಥಳೀಯ ಭಾರತೀಯ ಜನತಾ ಪಕ್ಷದ ತಾಲೂಕಾ ಘಟಕದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ತಹಶೀಲ್ದಾರ ಮುಖಾಂತರ ರಾಜ್ಯ ಪಾಲರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಸರಕಾರಿ ಆಸ್ಪತ್ರೆಯ ಎದುರುಗಿನ ಹುತಾತ್ಮ ಸರ್ಕಲ್‌ನಿಂದ ಪ್ರಾರಂಭವಾದ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರ ಪ್ರತಿಭಟನಾ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಮಿನಿ ವಿಧಾನಸೌಧಕ್ಕೆ ಆಗಮಿಸಿ, ಸಮಾವೇಶಗೊಂಡಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಮಂಡಲ ಅಧ್ಯಕ್ಷ ಡಾ.ಕೆ.ವ್ಹಿ. ಪಾಟೀಲ, ಭಾರತದ ಮೊದಲ ಪ್ರಧಾನ ಮಂತ್ರಿಗಳಾದ ಜವಾಹರಲಾಲ್ ನೆಹರು ಅವರು 1952 ರಲ್ಲಿ ವಕ್ಫ ಮಂಡಳಿ ರಚನೆ ಮಾಡಿದಾಗ ಇಡೀ ದೇಶದಲ್ಲಿ 1 ಲಕ್ಷ 20 ಸಾವಿರ ಎಕರೆ ಜಮೀನು ವಕ್ಫ ಹೆಸರಿನಲ್ಲಿ ಇತ್ತು. ಅದರಲ್ಲಿ ಮಸೀದಿ, ದರ್ಗಾ, ಕಬರಸ್ಥಾನ ಹಾಗೂ ಮದರಸಾಗಳ ಆಸ್ತಿಗಳು ಸೇರಿದ್ದವು. ಆದರೆ ಪ್ರಸಕ್ತವಾಗಿ 9 ಲಕ್ಷ 40 ಸಾವಿರ ಎಕರೆ ಜಮೀನು ಹೆಚ್ಚಳವಾಗುವುದು ಹೇಗೆ



ಸಾಧ್ಯವೆಂದು ರಾಜ್ಯ ಸರಕಾರ ಹಾಗೂ ವಕ್ಫ ಸಚಿವರನ್ನು ಪ್ರಶ್ನಿಸಿದ ಅವರು, ಹಿಂದುಗಳ ಜಮೀನುಗಳನ್ನು ಕಬಳಿಸಿ, ಅವರ ಮನಸ್ಸಿಗೆ ನೋವುಂಟು ಮಾಡಲು ಹೊರಟಿರುವ ಕಾಂಗ್ರೆಸ್ ಸರಕಾರದ ನಡೆ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸರಕಾರದ ಮುಸ್ಲಿಂ ಓಲೈಕೆ ನೀತಿಯಿಂದ ರಾಜ್ಯದಲ್ಲಿ ಕೋಮು ಗಲಬೆಗಳು ಉಂಟಾಗುವ ಪರಸ್ಥಿತಿ ಎದುರಾಗಿದೆ. ಸರ್ವ ಜನಾಂಗದ ಶಾಂತಿಯ ತೋಟವಾದ ಕರ್ನಾಟಕ ರಾಜ್ಯವನ್ನು ಕಾಂಗ್ರೆಸ್ ಸರಕಾರ ಹೊತ್ತಿ ಉರಿಯುವಂತೆ ಮಾಡಿದೆ. ಕೂಡಲೇ ರಾಜ್ಯ ಸರಕಾರ ವಕ್ಫ ಹೆಸರಿನಲ್ಲಿ ದಾಖಲು ಮಾಡಿರುವ ಜಮೀನುಗಳನ್ನು ರೈತರ ಹೆಸರಿಗೆ ಬಿಟ್ಟು ಕೊಡಲು ಕ್ರಮ ತೆಗೆದುಕೊಳ್ಳಬೇಕು. ಈ ಕು-ರಿತು ರಾಜ್ಯಪಾಲಕರು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರಕ್ಕೆ ನಿರ್ದೇಶನ ನೀಡಬೇಕು. ಕಾಂಗ್ರೆಸ್ ಸರಕಾರ ಮುಸ್ಲಿಂ ಓಲೈಕೆ ನೀತಿ ಕೈಬಿಟ್ಟು ರಾಜ್ಯದ ಅಭಿವೃದ್ಧಿಯತ್ತ ಗಮನ ಹರಿಸಬೇಕು. ಇಲ್ಲವಾದಲ್ಲಿ ರಾಜ್ಯಾಧ್ಯಂತ ಹಿಂದುಪರ ಸಂಘಟನೆಗಳು ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಅವರು ಮನವಿ ಮೂಲಕ ಎಚ್ಚರಿಕೆ ನೀಡಿದ್ದಾರೆ.

ನ್ಯಾಯವಾದಿ ಹಾಗೂ ಬಿಜೆಪಿ ಹಿರಿಯ ಮುಖಂಡ ಪಿ.ಎಫ್. ಪಾಟೀಲ ಮಾತನಾಡಿ, ಇಂದಿರಾ ಗಾಂಧಿ ಪ್ರದಾನಿಯಾಗಿದ್ದ ವೇಳೆ ಊಳುವವನೇ ಭೂ ಒಡೆಯ ಕಾಯಿದೆ ಅಡಿಯಲ್ಲಿ ಭೂಮಿ ಹಂಚಿಕೆ ಮಾಡಿದ ರೈತರ ಜಮೀನುಗಳನ್ನೇ ಸರಕಾರ ವಕ್ಫ ಹೆಸರಿನಲ್ಲಿ ಕಸಿದುಕೊಳ್ಳಲು ಮುಂದಾಗಿರುವುದು ಭೂಮಿ ಕಳೆದುಕೊಳ್ಳುವ ಆತಂಕದಲ್ಲಿರುವ ರೈತರನ್ನು ಕೆರಳಿಸಿದಂತಾಗಿದೆ. ಕೂಡಲೇ ಸರಕಾರ ಜಮೀನುಗಳನ್ನು ಮೂಲ ಮಾಲಕರ ಹೆಸರಿನಲ್ಲಿ-ರಿಸುವಂತೆ ಕ್ರಮ ತೆಗೆದುಕೊಳ್ಳಬೇಕು. ಇಲ್ಲವಾದಲ್ಲಿ ಬಿಜೆಪಿ ನೇತೃತ್ವದಲ್ಲಿ ರಾಜ್ಯಾಧ್ಯಂತ ಹೋರಾಟ ಉಗ್ರ ಸ್ವರೂಪ ಪಡೆದುಕೊಳ್ಳಲಿದೆ ಎಂದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಮಾರುತಿ ಕೊಪ್ಪದ, ಮುಖಂಡರಾದ ಬಿ.ಎಫ್. ಬಸಿಡೋಣಿ, ವಿಜಯ ಗುಡದಾರಿ, ದ್ಯಾವಪ್ಪ ಬೆಳವಡಿ, ರೇಣಪ್ಪ ಸೋಮಗೊಂಡ, ಸಿದ್ದು ಮೇತ್ರಿ, ಗಂಗಾಧರ ಬೋಸ್ಲೆ, ಮಲ್ಲಿಕಾರ್ಜುನ ಭಾವಿಕಟ್ಟಿ, ಸೋಮಶೇಖರ ಸೊಗಲದ, ಈರನಗೌಡ ಹೊಸಗೌಡ್ರ, ಸಿದ್ದು ಗುಡೆನ್ನವರ ಸೇರಿದಂತೆ ಭಾರತೀಯ ಜನತಾ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಇದ್ದರು.

BELAGINA SURYODHYA KANNADA DAILY MORNING Editor, Printer, PUblisher and Owned By GURURAJ IRAPPA KADAM Plot No.2743 NEAR KEB POWER HOUSE RAMTEERTH NAGAR, SHIVAJI NAGAR BELAGAVI-590016
DIST-BELAGAVI,STATE KARNATAKA PRINTED At M/S LAXMI PRINTERS, No. 627,Auto Nagar,Belagavi,Dist- Belagavi Karnataka, RNI No. KARKAN/2019/77640, Volume : 06, Issue : 226 Postal Reg No. PMG/KA/NK/BM/135/22-24 / POST AT Vantamury Colony Post Office